ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

18 ಮಾರ್ಚ್ 2015 ಪುಟ 20 ರೂ. 15/-

ಂಕೇಶ್ 30

ಪತ್ರಿಕೆ 10

ಹಾರ್ದ
ರಂಪರೆಯ
ಶೇಷಾಂಕ




ಇಟ್ಟಿಗೆ ಪವಿತ್ರವಲ್ಲ ಜೀವ ಪವಿತ್ರ

ಬಿಬಿಎಂಪಿ
ಚುನಾವಣೆ
ಟರಾಜ್
ಲೆ ಹಿಂದೆ
ಜೆಪಿ?

ಕಾರವಾರ
'ಚೆಂಬು'
ಶೆಟ್ಟಿ ಕೈಗೆ
ಕೆಡಿಪಿ

ಬೆಂಗಳೂರು
ಪಾಯ್ಸನ್
ರಾಮನೇ
ಭವಾನಿಯನ್ನು
ಕೊಂದ



ಪಿ.ಲಂಕೇಶ್ ಅವರ 80ನೇ ಹುಟ್ಟುಹಬ್ಬ ಮತ್ತು "ಗೌರಿ ಲಂಕೇಶ್" ಪತ್ರಿಕೆಯ 10ನೇ ವಾರ್ಷಿಕೋತ್ಸವ

ಮಾರ್ಚ್ 8, 2015,

ಕುವೆಂಪು ರಂಗಮಂದಿರ, ಕಿಮ್ಸ್ ಆವರಣ, ಬೆಂಗಳೂರು

ಮಧ್ಯಾಹ್ನ 2.00

ಉದ್ಘಾಟನೆ
ಸ್ವಾತಂತ್ರ್ಯ ಹೋರಾಟಗಾರ
ಎಚ್.ಎಸ್.ದೊರೆಸ್ವಾಮಿ

'ಲಂಕೇಶ್ ನೆನಪು'
ಖ್ಯಾತ ಸಾಹಿತಿ
ಜಿ.ರಾಜಶೇಖರ್

'ಲಂಕೇಶ್ ಪ್ರಕಾಶನ'ದ ಪುಸ್ತಕಗಳ ಬಿಡುಗಡೆ
ಇಂದಿರಾ ಲಂಕೇಶ್

'ಪುಟಾಣಿ ಲಂಕೇಶ್ ಪುಸ್ತಕ ಮಾಲೆ' ಉದ್ಘಾಟನೆ
ಇಶಾ ಲಂಕೇಶ್

'ರಾಜ್ಯದಲ್ಲಿ ಪತ್ರಿಕೆಯ ಪಾತ್ರ'
ಪತ್ರಕರ್ತ ಬಿ.ಎಂ.ಬಷೀರ್

'ಲಂಕೇಶ್ ದೃಷ್ಟಿಕೋನದಲ್ಲಿ ಮಹಿಳೆ'
ಚಿಂತಕಿ ಮತ್ತು ಸಾಹಿತಿ
ಡಾ.ಎಂ.ಎಸ್. ಆಶಾದೇವಿ

ಅಧ್ಯಕ್ಷತೆ
ಗೌರಿ ಲಂಕೇಶ್

ಸ್ವಾಗತ ಮತ್ತು ನಿರ್ವಹಣೆ
ಶಶಿಧರ್ ಹೆಮ್ಮಾಡಿ

ಮಧ್ಯಾಹ್ನ 4.30ಕ್ಕೆ

ಚಿಂತನಗೋಷ್ಠಿ
ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ
ಸಂಕ್ರಮಣ ಸ್ಥಿತಿ ಮತ್ತು ಕಾಲದ ಕರೆ
ನೂರ್ ಶ್ರೀಧರ್
ದಿನೇಶ್ ಅಮೀನ್ ಮಟ್ಟು
ದು.ಸರಸ್ವತಿ

ನಿರ್ವಹಣೆ
ಡಾ. ವಾಸು

ಎಲ್ಲರಿಗೂ ಆದರದ ಸ್ವಾಗತ

ಸಂಜೆ 6.00 ಗಂಟೆಗೆ

ಸಮಾರೋಪ ಸಮಾವೇಶ

ಮುಖ್ಯ ಅತಿಥಿ
ಮುಖ್ಯಮಂತ್ರಿ ಸಿದ್ದರಾಮಯ್ಯ


ವಿಶೇಷ ಅತಿಥಿ
ಹಿರಿಯ ಹೋರಾಟಗಾರ
ಎ.ಕೆ.ಸುಬ್ಬಯ್ಯ

ಉಪಸ್ಥಿತಿ
ಎಚ್.ಎಲ್.ಕೇಶವಮೂರ್ತಿ
ಬಿ.ಚಂದ್ರೇಗೌಡ
ಕೆ. ಫಣಿರಾಜ್
ಸುರೇಶ್ ಭಟ್ ಬಾಕ್ರಬೈಲ್

ನಿರ್ವಹಣೆ
ದೊಡ್ಡಿಪಾಳ್ಯ ನರಸಿಂಹಮೂರ್ತಿ

ಬಿಡುಗಡೆ ಆಗುತ್ತಿರುವ ಪುಸ್ತಕಗಳು

1. 'ಬಿಟ್ಟು ಹೋದ ಪುಟಗಳು-ಸಂಗ್ರಹ 2'
   ಪಿ.ಲಂಕೇಶ್
2. 'ಅನಂತಮೂರ್ತಿ ಅನಂತರೀತಿ'
   ಯು.ಆರ್.ಅನಂತಮೂರ್ತಿಯವರನ್ನು ಕುರಿತ ಲೇಖನಗಳು
3. 'ಬರ್ಟೋಲ್ಟ್ ಬ್ರೆಕ್ಟ್‌ನ ಆಯ್ದ ಪದ್ಯಗಳು'
   ಅನುವಾದ: ಕೆ.ಫಣಿರಾಜ್
4. 'ಮಕ್ಕಳಿಗಾಗಿ ಕಾಡಿನ ಕತೆಗಳು'
   ಕೆನೆತ್ ಆಂಡರ್ಸನ್
   (ಅನುವಾದ: ನಡಹಳ್ಳಿ ವಸಂತ್)



ಲಂಕೇಶ್ ಪ್ರಕಾಶನ

ನಂ.9, ಇ.ಎ.ಟಿ.ರಸ್ತೆ, ಬಸವನಗುಡಿ, ಬೆಂಗಳೂರು-4
ಫೋನ್: 080-26676427

ಮಾರ್ಚ್ 8, ಭಾನುವಾರದಂದು ಬೆಂಗಳೂರಿನ ಕುವೆಂಪು ರಂಗಮಂದಿರದಲ್ಲಿ ಪಿ.ಲಂಕೇಶರ 80ನೇ ಹುಟ್ಟುಹಬ್ಬ ಮತ್ತು ಈ ಪತ್ರಿಕೆಯ 10ನೇ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಅಂದು ಲಂಕೇಶರ 42ನೇ ಪುಸ್ತಕ ಬಿಡುಗಡೆಯಾಗಲಿದೆ.

ಅವರ ಎಲ್ಲಾ ಪುಸ್ತಕಗಳ ಸೆಟ್ ದರ ಕೇವಲ 4,000 ರೂಪಾಯಿಗಳು.

ಇದನ್ನು ಸ್ವಂತಕ್ಕಾಗಿಯೂ ಖರೀದಿಸಬಹುದು, ಮಿತ್ರರಿಗೆ ಗಿಫ್ಟ್ ಆಗಿಯೂ ಕೊಂಡುಕೊಳ್ಳಬಹುದು.

ಲಂಕೇಶರ 80ನೇ ಹುಟ್ಟುಹಬ್ಬದ ಪ್ರಯುಕ್ತ ಇಡೀ ಮಾರ್ಚ್ ತಿಂಗಳಲ್ಲಿ ಅವರ ಎಲ್ಲಾ 42 ಪುಸ್ತಕಗಳು ರಿಯಾಯಿತಿ ದರದಲ್ಲಿ ಮಾರಾಟವಾಗಲಿವೆ.

ಈ ಸಂದರ್ಭದಲ್ಲಿ ಲಂಕೇಶ್ ಪ್ರಕಾಶನದ ಎಲ್ಲಾ ಪುಸ್ತಕಗಳು ರಿಯಾಯತಿ ದರದಲ್ಲಿ ಲಭ್ಯವಿದೆ. ಓದುಗರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ವಿನಂತಿ

ಪುಸ್ತಕಗಳ ಸೆಟ್ ಮತ್ತು ವಿವರಗಳಿಗೆ ಸಂಪರ್ಕಿಸಿ

080-26676427

ಕಳೆದ ಹತ್ತು ವರ್ಷದ ಪಯಣವನ್ನು ನೆನೆಯುತ್ತಾ...

ಹತ್ತು ವರ್ಷ! ಸುಮ್ಮನೆ ಯೋಚಿಸಿದರೆ, ಅಪ್ಪನ ಪತ್ರಿಕೆ ಮರುಜನ್ಮ ಪಡೆದು ಎಡಿಎ ರಂಗಮಂದಿರದಲ್ಲಿ 2005ರ ಮಾರ್ಚ್ 8ರಂದು ಬಿಡುಗಡೆಯಾದದ್ದು ಮೊನ್ನೆ ಮೊನ್ನೆ ಅನ್ನಿಸುತ್ತದೆ. ನೋಡಿದರೆ ಆಗಲೇ ಒಂದು ದಶಕ ಕಳೆದುಹೋಗಿದೆ.

ಈ ಪತ್ರಿಕೆ ಹುಟ್ಟಿದಾಗ ನನ್ನ ಇಶಾ ಇನ್ನೂ ಏಳು ತಿಂಗಳ ಕೂಸು. ಈಗ ಆಕೆ ಆಲ್‌ಮೋಸ್ಟ್ ನನ್ನಷ್ಟೇ ಎತ್ತರ ಬೆಳೆದುನಿಂತಿದ್ದಾಳೆ. ಆಗ ಧರಂಸಿಂಗ್ ಮುಖ್ಯಮಂತ್ರಿ ಆಗಿದ್ದರು. ಅವರ ನಂತರ ರಾಜ್ಯದ ಜನ ನಾಲ್ಕು ಇತರೇ ಮುಖ್ಯಮಂತ್ರಿಗಳನ್ನು, ಜೆಡಿಎಸ್-ಬಿಜೆಪಿ ಮೈತ್ರಿ ಸರ್ಕಾರವನ್ನು, ಕೆಟ್ಟ ಕನಸಿನಂತಿದ್ದ ಐದು ವರ್ಷಗಳ ಬಿಜೆಪಿ ಆಡಳಿತವನ್ನು ಅನುಭವಿಸಿ ಈಗ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತಂದಿದ್ದಾರೆ.

ಈ ಪತ್ರಿಕೆಯ ಹುಟ್ಟಿಗೆ ಒಂದು ರೀತಿಯಲ್ಲಿ ಕಾರಣವಾಗಿದ್ದ ನಕ್ಸಲ್ ಚಳವಳಿಯೂ ಇನ್ನೊಂದು ಹಂತವನ್ನು ತಲುಪಿದೆ. ನಕ್ಸಲ್ ನಾಯಕ ಸಾಕೇತ್ ರಾಜನ್ ಎನ್‌ಕೌಂಟರ್ ಮತ್ತು ಆನಂತರ ಪಾವಗಡದಲ್ಲಿ ನಕ್ಸಲರು ಪೊಲೀಸರನ್ನು ಕೊಂದುಹಾಕಿದ್ದು ಮೇಲುನೋಟಕ್ಕೆ ಈ ಪತ್ರಿಕೆಯ ಪತನಕ್ಕೆ ಕಾರಣವಾಗಿತ್ತಾದರೂ ಆಳದಲ್ಲಿ ಇತರೆ ಕಾರಣಗಳು, ಷಡ್ಯಂತ್ರಗಳೂ ಇದ್ದವು. ಅವೆಲ್ಲ ಈಗ ಬೇಡ. ಆದರೀಗ ಪರಿಸ್ಥಿತಿ ಏನಾಗಿದೆ? ಒಂದೆಡೆ, ನಕ್ಸಲರ ಒಂದು ಗುಂಪಿನ ನಾಯಕರಾದ ನೂರ್ ಶ್ರೀಧರ್ ಮತ್ತು ಸಿರಿಮನೆ ನಾಗರಾಜ್ ಇತ್ತೀಚೆಗೆ ಪ್ರಜಾತಾಂತ್ರಿಕ ಹೋರಾಟಗಳ ಮುಖ್ಯವಾಹಿನಿಗೆ ವಾಪಸ್ ಆಗಿದ್ದಾರೆ. ಇನ್ನೊಂದೆಡೆ ನಕ್ಸಲರ ಇನ್ನೊಂದು ಗುಂಪಿನ ಹೆಚ್ಚಿನ ನಾಯಕರು ಒಂದೋ ಈಗ ವಿವಿಧ ಜೈಲುಗಳಲ್ಲಿದ್ದಾರೆ ಅಥವಾ (ಅವರೇ ಇತ್ತೀಚೆಗೆ ಪ್ರಕಟಿಸಿರುವಂತೆ) ಮಲೆನಾಡನ್ನು ತೊರೆದು ಕರ್ನಾಟಕ-ಕೇರಳ-ತಮಿಳುನಾಡು ರಾಜ್ಯಗಳು ಕೂಡುವ ಪ್ರದೇಶದಲ್ಲಿ ಭೂಗತ ಚಳವಳಿಯಲ್ಲಿ ನಿರತರಾಗಿದ್ದಾರೆ.

ನಮ್ಮ ಪತ್ರಿಕೆಗಿಂತ ಒಂದು ವರ್ಷ ಮುನ್ನ ರೂಪುಗೊಂಡ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯೂ ಕಳೆದ ವರ್ಷ ತನ್ನ ದಶಮಾನೋತ್ಸವವನ್ನು ಆಚರಿಸಿಕೊಂಡಿತಲ್ಲದೆ ಈಗ ಇನ್ನಷ್ಟು ಗಟ್ಟಿಗೊಂಡು ಮುಂದೆ ಸಾಗುತ್ತಿದೆ.

ಇದೇ ಅವಧಿಯಲ್ಲಿ ಹಲವು ಹಿತೈಷಿಗಳನ್ನು, ಮಿತ್ರರನ್ನು ಕಳೆದುಕೊಂಡಿದ್ದೇವೆ. ಪೂರ್ಣಚಂದ್ರ ತೇಜಸ್ವಿ, ಕೆ. ರಾಮದಾಸ್, ಯು.ಆರ್. ಅನಂತಮೂರ್ತಿ, ಮಿತ್ರ ಯುವರಾಜ್ ನಮ್ಮನ್ನಗಲಿ ಹೋಗಿದ್ದಾರೆ. ಹೊಸ ಗೆಳೆಯರು, ಸ್ನೇಹಿತರು ಸಿಕ್ಕಿದ್ದಾರೆ. ಕೆಲ ಮಿತ್ರರು ನಮ್ಮ ತಂಡವನ್ನು ತೊರೆದುಹೋಗಿದ್ದಾರೆ; ಹೊಸಬರು ನಮ್ಮೊಂದಿಗೆ ಕೈಜೋಡಿಸಿದ್ದಾರೆ. ಹಲವಾರು ಹಿನ್ನಡೆಗಳನ್ನು ಎದುರಿಸಿಯೂ ಹೊಸ ಸಾಹಸಗಳಿಗೆ ಕೈಹಾಕಿ ಗೆದ್ದಿದ್ದೇವೆ. ಇದೆಲ್ಲದರ ಜೊತೆಗೆ 53ಕ್ಕೆ ಕಾಲಿಟ್ಟ ನಾನು 'ಅಕ್ಕ' ಸ್ಥಾನದಿಂದ 'ಅಮ್ಮ' ಸ್ಥಾನಕ್ಕೆ ಬಡ್ತಿ ಪಡೆದಿದ್ದೇನೆ!

ಇವತ್ತಿನ ಪೈಪೋಟಿಯುಗದಲ್ಲಿ ಜಾಹೀರಾತು ಇಲ್ಲದೆ, ಭ್ರಷ್ಟಗೊಳ್ಳದೆ ಒಂದು ಜನಪರ ಪತ್ರಿಕೆಯನ್ನು ನಡೆಸುವುದು ಸುಲಭದ ಕೆಲಸವಲ್ಲ. ಆ ಕಾರಣಕ್ಕೇ ಈ ಪತ್ರಿಕೆಯನ್ನು ಪ್ರಾರಂಭಿಸಿದ ಹಲವೇ ತಿಂಗಳಲ್ಲಿ ಆರ್ಥಿಕ ಬಿಕ್ಕಟ್ಟನ್ನು ನಾವು ಎದುರಿಸಬೇಕಾಯಿತು. ಅದನ್ನು ನಿವಾರಿಸಿಕೊಳ್ಳಲು ನಮಗಿದ್ದ ಒಂದೇ ಮಾರ್ಗ ಮತ್ತಷ್ಟು ಕೆಲಸಗಳನ್ನು ಮೈಮೇಲೆಳೆದುಕೊಂಡು ಈ ಪತ್ರಿಕೆಯನ್ನು ಆರ್ಥಿಕ ಬಿಕ್ಕಟ್ಟಿನಿಂದ ರಕ್ಷಿಸಲು ಹಲವು 'ಲೈಫ್‌ಬೋಟ್'ಗಳನ್ನು ಕಟ್ಟಿಕೊಳ್ಳುವುದಾಗಿತ್ತು.

ಆ ನಿಟ್ಟಿನಲ್ಲಿ ಪ್ರಾರಂಭವಾದದ್ದು ನಮ್ಮ 'ಲಂಕೇಶ್ ಬಳಗದ ಗೈಡ್' ಮಾಸಿಕ. ಅಷ್ಟು ಹೊತ್ತಿಗೆ ಆರ್ಥಿಕವಾಗಿ 'ಐಸಿಯು' ಸೇರಿದ್ದ ಪತ್ರಿಕೆಯ ಪ್ರಾಣವನ್ನು ಉಳಿಸಿದ್ದು 'ಗೈಡ್' ಮಾಸಿಕ. ಇನ್ನು ಕೆಲವೇ ತಿಂಗಳಲ್ಲಿ 'ಗೈಡ್' ಮಾಸಿಕಕ್ಕೂ ಹತ್ತು ವರ್ಷ ತುಂಬುತ್ತೆ. ಅಂದಹಾಗೆ, 'ಗೈಡ್' ಪತ್ರಿಕೆಯನ್ನು ಪ್ರಾರಂಭಿಸುವ ಸಲಹೆ ಕೊಟ್ಟಿದ್ದು ಮತ್ತು ಅದಕ್ಕಾಗಿ ತುಂಬಾ ಕೆಲಸ ಮಾಡಿದ್ದು ಮಿತ್ರ ಪಾರ್ವತೀಶ. ದುರದೃಷ್ಟವಶಾತ್ ಅವರು ಈಗ ನಮ್ಮ ತಂಡದೊಂದಿಗೆ ಇಲ್ಲ.

ಜನಪರ ಪಾರ್ಟಿಗಳಲ್ಲಿದ್ದ ಪತ್ರಿಕೆಗೆ ಹೂಡಿಕೆ ಚೆಕ್ಕು ಕೊಟ್ಟು ಗುಣಮುಖಗೊಳಿಸಿದ್ದು ಅದೇ ವರ್ಷ ಪ್ರಾರಂಭವಾದ 'ಲಂಕೇಶ್ ಪ್ರಕಾಶನ.' ಅದೆಲ್ಲಕ್ಕಿಂತ ನಮ್ಮ ಸಂಸ್ಥೆಗೆ ತಕ್ಷಣಕ್ಕೆ ಹಣಬಲ ತಂದದ್ದು 'ಗೈಡ್ ಪ್ರಕಾಶನ'. ಇವತ್ತು ಇಷ್ಟನ್ನು ಸ್ಥಿರತೆ ತಂದು ಕೊಟ್ಟಿರುವುದು 'ಜಾಬ್ ನ್ಯೂಸ್' ಎಂಬ ಪಾಕ್ಷಿಕ. 'ಜಾಬ್ ನ್ಯೂಸ್' ಕೂಡ ಈಗ ಐದು ವರ್ಷ ಪೂರೈಸುವ ಹಂತದಲ್ಲಿದೆ.

ಇದೆಲ್ಲದರ ಅರ್ಥ ಇಷ್ಟೇ: ಕಳೆದ ಹತ್ತು ವರ್ಷಗಳಲ್ಲಿ ನಮ್ಮ ಪತ್ರಿಕೆಯ 520 ಸಂಚಿಕೆಗಳು, ಗೈಡ್ ಮಾಸಿಕದ 120 ಸಂಚಿಕೆಗಳು, ಜಾಬ್ ನ್ಯೂಸ್ ಪಾಕ್ಷಿಕದ 100 ಸಂಚಿಕೆಗಳು, ವರ್ಷಕ್ಕೆ ಸರಾಸರಿ ಹತ್ತು ಪುಸ್ತಕದಂತೆ ಲಂಕೇಶ್ ಪ್ರಕಾಶನದಿಂದ 95 ಪುಸ್ತಕಗಳು, ಗೈಡ್ ಪ್ರಕಾಶನದಿಂದ 50ಕ್ಕೂ ಹೆಚ್ಚು ಪುಸ್ತಕಗಳು...

ಸಾವಿರಾರು ಪುಟಗಳು, ಲಕ್ಷಾಂತರ ಪದಗಳು... ಪುರುಸೊತ್ತು ಎಂಬುದೇ ಇಲ್ಲದೆ ಹಗಲೂರಾತ್ರಿ ನಾವೆಲ್ಲರೂ ಹಾಕಿದ ಶ್ರಮವಿದು. ಜೊತೆಗೆ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯಂತೆ, ನಕ್ಸಲರನ್ನು ಮುಖ್ಯವಾಹಿನಿಗೆ ತರುವುದಂತೆ ಎಂದೆಲ್ಲ ಸುತ್ತಾಟ... ಹತ್ತಾರು ಕಡೆ ಕೇಸ್ ಜಡಿಸಿಕೊಂಡು ಊರೂರು ಅಲೆದಾಡುವ ಜಂಜಾಟ... ಅಲ್ಲಿ ಪ್ರತಿಭಟನೆ, ಇಲ್ಲಿ ಹೋರಾಟ, ಅಲ್ಲಿ ಸಮಾವೇಶ, ಇಲ್ಲಿ ಸಮ್ಮೇಳನ ಎಂದೆಲ್ಲ ತಿರುಗಾಟ.... ಇವೆಲ್ಲದರ ಮಧ್ಯೆಯೂ ಪುಸ್ತಕ ಓದು, ಇಂಟರ್ನೆಟ್ ಸರ್ಫ್ ಮಾಡು, ಲೇಖನ ಬರಿ, ವರದಿಗಾರರ ಬೆನ್ನು ಹತ್ತಿ ವರದಿಗಳನ್ನು ತರಿಸು, ಎಡಿಟ್ ಮಾಡು, ಪ್ರೂಫ್ ನೋಡು.. ಇತ್ಯಾದಿ.

ಏಕಕಾಲದಲ್ಲಿ ಆಕ್ಟಿವಿಸ್ಟ್ ಮತ್ತು ಜರ್ನಲಿಸ್ಟ್ ಆದದ್ದು ನಮ್ಮ ತಂಡ. ಆಕ್ಟಿವಿಸಂ ಎನ್ನುವುದು ಜರ್ನಲಿಸಂಗೆ ಬೇಕಾದ ಹೃದಯ ಮತ್ತು ಕಾಣ್ಕೆಯನ್ನು ಕೊಟ್ಟರೆ, ಜರ್ನಲಿಸಂನಿಂದ ಆಕ್ಟಿವಿಸಂಗೆ ಇಂದು ಅಗತ್ಯವಾಗಿ ಬೇಕಾದ ಸಂದರ್ಭದ ಸಮಗ್ರ ತಿಳವಳಿಕೆ ಹಾಗೂ ಸೂಕ್ಷ್ಮತೆ ದಕ್ಕುತ್ತದೆ ಎಂದೇ ಹೇಳಬೇಕು. ಪ್ರಾಯಶಃ ಇಂದು ಒಬ್ಬ ಜರ್ನಲಿಸ್ಟ್ ತನ್ನದೇ ರೀತಿಯಲ್ಲಿ ಒಬ್ಬ ಆಕ್ಟಿವಿಸ್ಟ್ ಆಗದಿದ್ದರೆ ಜನಪರರಾಗಲು ಸಾಧ್ಯವಿಲ್ಲವೇನೋ....!

ಈ ಎಲ್ಲಾ ಕೆಲಸಗಳ ನಡುವೆ ಒಂದಿಷ್ಟು ಸಮಯ ಸಿಕ್ಕಾಗ ಅಮ್ಮನ ಅಕ್ಕರೆಯಲ್ಲಿ ನೆಮ್ಮದಿ, ಇಶಾಳ ಅಪ್ಪುಗೆಯಲ್ಲಿ ಸ್ವರ್ಗ, ತಂಗಿ ಬೇಬಿಯ ಪ್ರೀತಿ, ಅಳಿಯರಾದ ಸಮರ್ ಮತ್ತು ಸಮಯ್ ತುಂಟಾಟದಲ್ಲಿ ಒಂದಿಷ್ಟು ಮಜಾ, ಮಿತ್ರರೊಂದಿಗೆ ಹರಟೆ-ಚರ್ಚೆ, ಮನರಂಜನೆಗೆ ಫೇಸ್‌ಬುಕ್‌ನಲ್ಲಿ ಚೆಡ್ಡಿಗಳ ಬಗ್ಗೆ ತಮಾಷೆ, ರಿಲಾಕ್ಸೇಶನ್‌ಗೆ ಇಂಟರ್‌ನೆಟ್‌ನಲ್ಲಿ ಒಂದಿಷ್ಟು ಇಸ್ಪೀಟು ಆಟ... ಎಲ್ಲಾ ಮುಗಿಸಿಕೊಂಡು ಯಾವುದೇ ಸದ್ದುಗದ್ದಲವಿಲ್ಲದ ಮನೆಗೆ ರಾತ್ರಿ ಹಿಂದಿರುಗಿ ಏಕಾಂತದಲ್ಲಿ ಒಂದಿಷ್ಟು 'ಧ್ಯಾನ'!

ಇಷ್ಟೆಲ್ಲ ಮಾಡಿದ್ದು ಯಾತಕ್ಕಾಗಿ? ಕಷ್ಟಪಟ್ಟಿದ್ದು, ಸವಾಲುಗಳನ್ನು ಎದುರಿಸಿದ್ದು, ದೇಹವನ್ನು ದಂಡಿಸಿದ್ದು, ಲಕ್ಷಾಂತರ ರೂಪಾಯಿಗಳ ಸಾಲ ಮಾಡಿ ಅದರಲ್ಲಿ ಒಂದಿಷ್ಟನ್ನು ತೀರಿಸಿದ್ದರೂ ಎಲ್ಲ ಸಾಲಗಳಿಂದ ಹೊರಬರಲು ಇನ್ನೂ ತಿಣುಕಾಡುತ್ತಿರುವುದು ಯಾತಕ್ಕಾಗಿ? ಕೆಲವೊಮ್ಮೆ ಮಿತ್ರರೊಂದಿಗೆ ಜಗಳವಾಡಿ ಕಣ್ಣೀರಿಡುತ್ತಿದ್ದರೂ, ಹಲವೊಮ್ಮೆ ಈ ದೇಹ ಕೈಕೊಟ್ಟಾಗಲೂ ಹಲ್ಲುಕಚ್ಚಿ ಕೆಲಸ ಮಾಡಿ ಈ ಪತ್ರಿಕೆಯನ್ನು ಪ್ರತಿ ವಾರ ತಪ್ಪದೆ ಸರಿಯಾದ ಸಮಯಕ್ಕೆ ನಿಮ್ಮ ಕೈಗಿಟ್ಟದ್ದು ಯಾತಕ್ಕಾಗಿ?

'ಪತ್ರಿಕೆ ಈ ನಾಡಿಗೆ ಅಗತ್ಯವಾಗಿರುವುದರಿಂದ' ಎಂದರೆ ಅದು ದೊಡ್ಡ ಮಾತಾಗುತ್ತದೆ. ಬದಲಾಗಿ ನಮ್ಮ ಜನರಿಗೆ ನಾವು ಪ್ರಾಮಾಣಿಕವಾಗಿ, ನಮ್ಮ ಕೈಲಾದಷ್ಟು ಕಾಳಜಿ ತೋರಿಸಲು ಇಷ್ಟೆಲ್ಲ ಕಷ್ಟಪಟ್ಟಿದ್ದೇವೆ ಎನ್ನುವುದು ಸೂಕ್ತ.

ಅಪ್ಪ ಈ ಪತ್ರಿಕೆಯ ಬುನಾದಿ. ಅವರು ಹಾಕಿಕೊಟ್ಟ ಸೈದ್ಧಾಂತಿಕ ಮಾನದಂಡಗಳ ಮೇಲೆ ಈ ಪತ್ರಿಕೆ ಸಾಗಿದೆ. ಈ ನಮ್ಮ ನಾಡಿನಲ್ಲಿ ಕೋಮು ಸೌಹಾರ್ದ, ನೆಮ್ಮದಿ, ಶಾಂತಿ ಇರಬೇಕು; ಭ್ರಷ್ಟಾಚಾರ, ಜಾತೀಯತೆ ತೊಲಗಬೇಕು; ಜನಪರವಾದ ಚಿಂತನೆ, ಕೃತಿಗಳು ಬರಬೇಕು; ದಮನಿತರಿಗೆ, ದಲಿತರಿಗೆ, ಮಹಿಳೆಯರಿಗೆ ದನಿಯಾಗಬೇಕು... ಇವೇ ನಮ್ಮ ಆಶಯಗಳು. ಅದು ಅಪ್ಪನ ಆಶಯವೂ ಹೌದು, ಇವತ್ತಿನ ನಮ್ಮ ಸಮಾಜದ ಅಗತ್ಯವೂ ಹೌದು. ಈ ಆಶಯವನ್ನು ನಮ್ಮ ಕೈಲಾದಷ್ಟು ನನಸು ಮಾಡಲು ಇಷ್ಟೆಲ್ಲ ಪಡಿಪಾಟಲು ಪಟ್ಟದ್ದು!

ಜಾಗತೀಕರಣದ ಈ ಯುಗದಲ್ಲಿ ನಮ್ಮ ಸುತ್ತಲಿನ ಪರಿಸ್ಥಿತಿ ಹಿಂದಿಗಿಂತಲೂ ಜಟಿಲಗೊಂಡಿದೆ; ಸಂಕೀರ್ಣಗೊಂಡಿದೆ. ಇವತ್ತು ಜಾಗತೀಕರಣಕ್ಕೂ ಕೋಮುವಾದಕ್ಕೂ ಖಾಸಗೀಕರಣಕ್ಕೂ ಜಾತೀಯತೆಗೂ; ಆರ್ಥಿಕ ಉದಾರನೀತಿಗೂ ದೀನರ ದಮನಕ್ಕೂ ಮತ್ತು ಇವೆಲ್ಲವುಗಳ ನಡುವಿನ ನಂಟನ್ನು ಅರ್ಥಮಾಡಿಕೊಂಡು ಹೋರಾಡಬೇಕಿದೆ. ಆ ಹೋರಾಟಕ್ಕೆ ಆಳವಾದ ಅರಿವು, ಆಧಾರವಾದ ಬದ್ಧತೆ, ಬಿರುಗಾಳಿಯ ಎದುರು ನಿಂತು ಹೋರಾಟ ನಡೆಸಲು ಅಗತ್ಯವಾಗಿರುವ ಪ್ರಬುದ್ಧತೆ ಅತ್ಯಗತ್ಯವಾಗಿದೆ. ಈ ಅರಿವು ಮತ್ತು ಪ್ರಬುದ್ಧತೆ ಇಲ್ಲದಿದ್ದರೆ ಈ ಸಂಕ್ರಮಣ ಕಾಲಘಟ್ಟದಲ್ಲಿ ಸಹಬಾಳ್ವೆ, ಸಮಾನತೆಯ ಕನಸು ಕಾಣುವುದೂ ಕಷ್ಟವಾಗುತ್ತದೆ.

ಈ ಹಿನ್ನೆಲೆಯಲ್ಲಿ ಅಪ್ಪನ 80ನೇ ಹುಟ್ಟುಹಬ್ಬ ಮತ್ತು ಪತ್ರಿಕೆಯ ಒಂದು ದಶಕವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ ನಮ್ಮ ವಿಶೇಷಾಂಕ ಯಾವುದಕ್ಕೆ ಒತ್ತು ಕೊಡಬೇಕು ಮತ್ತು ನಮ್ಮ ಮಾರ್ಚ್ 8ರ ಕಾರ್ಯಕ್ರಮ ಯಾವುದರ ಬಗ್ಗೆ ಗಮನ ಹರಿಸಬೇಕು ಎಂದು ನಮ್ಮ ತಂಡ ಚರ್ಚಿಸಿದಾಗ ನಮಗೆ ಹೊಳೆದದ್ದು ಇವೆರಡು: ವಿಶೇಷಾಂಕ ಈ ನಾಡಿನ ಸಹಬಾಳ್ವೆ ಪರಂಪರೆಗೆ ಒತ್ತುಕೊಡಬೇಕು ಮತ್ತು ಕಾರ್ಯಕ್ರಮ 'ಕಾಲದ ಕರೆ'ಗೆ ದನಿಯಾಗಬೇಕೆಂದು.

ಆ ನಿಟ್ಟಿನಲ್ಲಿ ಈ ವಿಶೇಷಾಂಕ ರೂಪಗೊಂಡಿದೆ. ಈ ನಾಡಿನ ಇತಿಹಾಸ, ಕಲೆ, ಸಂಸ್ಕೃತಿ, ಬದುಕು ಎಲ್ಲವೂ ಹೇಗೆ ಸಾಮರಸ್ಯಕ್ಕೆ, ಸಹಬಾಳ್ವೆಗೆ ಪ್ರಾಮುಖ್ಯತೆ ಕೊಟ್ಟಿವೆ ಎಂಬುದನ್ನು ಇಲ್ಲಿನ ಲೇಖನಗಳು ತೋರುತ್ತವೆ. ಆ ಕಾರಣಕ್ಕೇ ಈ ಸಂಚಿಕೆಗೆ ಅಪ್ಪ ಹಿಂದೊಮ್ಮೆ ಕೊಟ್ಟಿದ್ದ 'ಇಟ್ಟಿಗೆ ಪವಿತ್ರವಲ್ಲ, ಜೀವ ಪವಿತ್ರ' ಕರೆಯನ್ನೇ ಶೀರ್ಷಿಕೆಯಾಗಿ ಇಟ್ಟಿದ್ದೇವೆ. ಹಾಗೆಯೇ ಇದೇ ಭಾನುವಾರ, ನೂರ್ ಶ್ರೀಧರ್, ದಿನೇಶ್ ಅಮೀನ್ ಮಟ್ಟು ಮತ್ತು ದು.ಸರಸ್ವತಿ 'ಕಾಲದ ಕರೆ' ಕುರಿತು ಆಳವಾಗಿ ವಿಶ್ಲೇಷಿಸಲಿದ್ದಾರೆ.

ಈ ಹತ್ತು ವರ್ಷಗಳ ಕಾಲ ಈ ಸಂಸ್ಥೆಯನ್ನು ಕಟ್ಟಿ ಬೆಳೆಸುವಲ್ಲಿ ನನಗೆ ಪೈಪೋಟಿ ನೀಡುವಂತೆ ಶ್ರಮಪಟ್ಟ ನಮ್ಮ ತಂಡದ ಪ್ರತಿ ಸದಸ್ಯರಿಗೂ ನಾನು ಚಿರಋಣಿ. ಅದರಲ್ಲೂ ಮೊದಲ ದಿನದಿಂದಲೇ ನನ್ನೊಂದಿಗೆ ನಿಂತ ನಮ್ಮ ರಾಜು ಮತ್ತು ಸತೀಶ್, ಈಗ ನನ್ನಷ್ಟೇ ಕೆಲಸದ ಭಾರವನ್ನು ಹೊತ್ತಿರುವ ಗಿರೀಶ್ ತಾಳಿಕಟ್ಟೆ, ಒಂದಿಷ್ಟೂ ತೊಂದರೆ ಕೊಡದೆ ತಮ್ಮ ಕೆಲಸವನ್ನು ನಿಷ್ಠೆಯಿಂದ ಮಾಡುವ ಕಿಶೋರ್ ಮತ್ತು ಉಮೇಶ್, ಮೌನಿಯಾಗಿಯೇ ಅದೆಷ್ಟೋ ಕರ್ತವ್ಯಗಳನ್ನು ನಿಭಾಯಿಸುವ ಪ್ರಸಾದ್, ನಮ್ಮ ಕಚೇರಿಯ ಪುಟ್ಟ ಮಿತ್ರ ಲಕ್ಷ್ಮಣ್... ನೀವಿಲ್ಲದಿದ್ದರೆ ನಮ್ಮ ಸಂಸ್ಥೆ ಒಂದು ಹೆಜ್ಜೆಯೂ ಮುಂದೆ ಹೋಗುವುದಿಲ್ಲ. ಥ್ಯಾಂಕ್ಯೂ ಬಾಯ್ಸ್!!

ಪ್ರತೀವಾರ ತಪ್ಪದೇ ತಮ್ಮ ಬರಹವನ್ನು ಕಳುಹಿಸುವ ವಿವೇಕಾನಂದ ತಾಂಡೇಲ, ಪ್ರತಿ ಗುರುವಾರ ಪಣತೊಟ್ಟವರಂತೆ ನನಗೆ ಹೈಬ್ರಿಡ್ ಪೇಪರ್ ತಂದುಕೊಟ್ಟನಂತರವೇ ತಮ್ಮ ಬರಹಗಳನ್ನು ಕಳುಹಿಸುವ ರಾ.ಸೋಮನಾಥ್ ಮತ್ತು ದೊಡ್ಡಿಪಾಳ್ಯ ನರಸಿಂಹಮೂರ್ತಿ, ಈ ಪತ್ರಿಕೆಯ ಜನಪ್ರಿಯತೆಗೆ ನೀವೂ ಕಾರಣ. ನಿಮಗೂ ಥ್ಯಾಂಕ್ಸ್.

ಅಪ್ಪ ತುಂಬಾ ಇಷ್ಟಪಡುತ್ತಿದ್ದ ಹಿರಿಯರಾದ ಎಚ್.ಎಲ್.ಕೇಶವಮೂರ್ತಿ, ಇವತ್ತಿಗೂ ಅಪಾರ ಜೀವನೋತ್ಸಾಹವನ್ನು ಹೊಂದಿರುವ ಬಿ.ಚಂದ್ರೇಗೌಡ, ಒಂದು ರೀತಿಯಲ್ಲಿ ನನ್ನ ಮಾನಸ ಪುತ್ರನಾದ ಡಾ.ಎಚ್.ವಿ.ವಾಸು, ಪತ್ರಿಕೆಯಿಂದ ಪಡೆದದ್ದಕ್ಕಿಂತ ಹೆಚ್ಚಿನದನ್ನು ಪತ್ರಿಕೆಗಾಗಿ ಕೊಟ್ಟಿರುವ ಸುರೇಶ್ ಭಟ್ ಬಾಕ್ರಬೈಲ್, ನಮ್ಮ ತಂಡದ ಸದಸ್ಯರಂತೇ ಆಗಿರುವ ಯೋಗೀಶ್ ಮಾಸ್ಟರ್, ಈಗ ಪತ್ರಿಕೆಗೆ ಒಂದು ಹೊಸ ಆಯಾಮವನ್ನು ಕೊಟ್ಟಿರುವ ಡಾ. ಚೆನ್ನೇಶ್, ಸೌಹಾರ್ದದ ಮಿತ್ರ ರಂಜಾನ್ ದರ್ಗಾ... ನಿಮ್ಮ ಬರಹಗಳಿಂದ ಪತ್ರಿಕೆಯ ಮೌಲ್ಯವನ್ನು ಹೆಚ್ಚಿಸಿದ್ದೀರಿ. ನಿಮಗೂ ಧನ್ಯವಾದಗಳು.

ಪತ್ರಿಕೆಯೊಂದಿಗೆ ಸದಾ ನಿಂತಿರುವ ಜಿ.ರಾಜಶೇಖರ್, ಎಸ್.ಎಫ್. ಯೋಗಪ್ಪನವರ್, ಕೆ.ಫಣಿರಾಜ್, ರಹಮತ್ ತರೀಕೆರೆ, ಎ.ಕೆ.ಸುಬ್ಬಯ್ಯ, ಬರಗೂರು ರಾಮಚಂದ್ರಪ್ಪ, ಕಡಿದಾಳು ಶಾಮಣ್ಣ, ಬಂಜಗೆರೆ ಜಯಪ್ರಕಾಶ್, ಇಂದೂಧರ ಹೊನ್ನಾಪುರ, ಸಬಿಹಾ ಮತ್ತು ಭೂಮಿಗೌಡ, ಡಾ.ಎಂ.ಎಸ್.ಆಶಾದೇವಿ ಮತ್ತು ಅವರ ಸಹೋದರ ಎಂ.ಎಸ್. ರವಿಕುಮಾರ್, ಕೆ. ಷರೀಫಾ, ಡಾ.ಎಚ್.ಎಸ್.ಅನುಪಮ, ಬಿ.ಎಂ.ಬಷೀರ್, ಸಿದ್ದನಗೌಡ ಪಾಟೀಲ್, ಶ್ರೀರಾಮ್ ಮತ್ತು ಪದ್ಮಾ ಶ್ರೀರಾಮ್, ಹರಿ ಮತ್ತು ಸುಕನ್ಯಾ, ಜ್ಯೋತಿ ಗುರುಪ್ರಸಾದ್, ಹೃದಯಶಿವ, ಡಾ.ಎಂ.ಬಿ.ರಾಮಮೂರ್ತಿ, ಕೆ.ಎಲ್.ಅಶೋಕ್, ಗುರುಶಾಂತ್, ಭಾನುತೇಜ್, ನಾಗೇಶ್ರೀ, ಭಾರತಿ ಗೌಡ, ಆರತಿ ಗಡಸಲಿ, ಸತ್ಯ, ಕೆ.ಎಸ್.ವಿಮಲಾ, ಶಿವಸುಂದರ್, ಸರ್ಜಾ ಶಂಕರ್ ಹರಳಿಮಠ, ಇಸ್ಮತ್ ಫಜೀರ್, ಶಶಿಧರ್ ಹೆಮ್ಮಾಡಿ, ಹಯವದನ ಮೂಡುಸಗ್ರಿ, ಮಲ್ಲಿಕಾರ್ಜುನಯ್ಯ, ಮೀನಾಕ್ಷಿ ಬಾಳಿ, ಕೆ. ನೀಲಾ, ಅಜ್ಜಂಪುರ ವೆಂಕಟೇಶ್, ರಾಜಶೇಖರ್ ಕೋಟಿ ಮತ್ತು ಅವರ ಪುತ್ರ ರವಿ, ಪ್ರೊ. ಶಿವರಾಮಯ್ಯ, ವಿ.ಎಸ್.ಶ್ರೀಧರ, ನಗರಿ ಬಾಬಯ್ಯ, ನಗರಗೆರೆ ರಮೇಶ್, ವಿಠಲ ಹೆಗ್ಡೆ, ಮಲ್ಲಿಗೆ, ಗೌರಿ, ಕುಮಾರ್ ಸಮತಳ, ನನ್ನ ಪ್ರೀತಿಯ ಕೂಸಾದ ಕುಮಾರ್ ಬುರಡಿಕಟ್ಟಿ... ಈ ಪಟ್ಟಿ ಇನ್‌ಕಂಪ್ಲೀಟ್ ಅನ್ನೋದು ನನಗೂ ಗೊತ್ತು, ನಿಮಗೂ ಗೊತ್ತು. ಯಾರದ್ದಾದರು ಹೆಸರನ್ನು ಮರೆತಿದ್ದರೆ ದಯವಿಟ್ಟು ಕ್ಷಮಿಸಿ...



• ಗೌರಿ ಲಂಕೇಶ್

editorlankesh@gmail.com

ಕಂಡಹಾಗೆ

ವಕೀಲ ಮಿತ್ರರಾದ ಬಿ.ಟಿ.ವೆಂಕಟೇಶ್, ಪುರುಷೋತ್ತಮ್, ಧಾರವಾಡದ ಜಾವೇದ್, ಶಿವಮೊಗ್ಗೆಯ ಶ್ರೀಪಾಲ್ ಮತ್ತು ನಾಗೇಶ್, ಗುಲ್ಬರ್ಗಾದ ವಿಲಾಸ್ ಕುಮಾರ್, ಕೊಪ್ಪದ ಸುಧೀರ್, ಸಿದ್ದಾಪುರದ ಕೆ.ಜಿ.ನಾಯಕ್, ತುಮಕೂರಿನ ಮಾರುತಿ, ಸಾಗರದ ರಾಘವೇಂದ್ರ, ತೀರ್ಥಹಳ್ಳಿಯ ಪ್ರದೀಪ್, ಮಂಗಳೂರಿನ ಸುನೀಲ್...

ನೀವಿಲ್ಲದೆ ಈ ಪಯಣ ಸಾಗುತ್ತಿರಲಿಲ್ಲ. ಮೆನಿ ಮೆನಿ ಥ್ಯಾಂಕ್ಸ್!

ರಾಜಹನ್ಸ್ ಮಾಲೀಕ ಎ.ಬಾಲಚಂದ್ರ ಅವರು ಒಂದು ರೀತಿಯಲ್ಲಿ ನಮ್ಮ ಕುಟುಂಬದ ಸದಸ್ಯರೇ ಅನ್ನಬಹುದು. ಅಪ್ಪ ಇದ್ದಾಗ ಪತ್ರಿಕೆ ಮುದ್ರಣಗೊಳ್ಳುತ್ತಿದ್ದದ್ದು ಅವರ ಪ್ರಖ್ಯಾತ ರಾಜಹನ್ಸ್ ಪ್ರೆಸ್‌ನಲ್ಲಿಯೇ. ಅಪ್ಪನ ಬಗ್ಗೆ ಬಾಲಚಂದ್ರ ಅವರಿಗೆ ಅದೆಷ್ಟು ಅಭಿಮಾನವೋ, ನನ್ನ ಕಷ್ಟಗಳನ್ನು ನೋಡಿ ಅಷ್ಟೇ ಕಾಳಜಿ ಅವರಲ್ಲಿ. ಆ ಕಾರಣಕ್ಕೇ ಅವರು ಈಗಲೂ ಕಡಿಮೆ ದರದಲ್ಲಿ ಈ 'ಅಕ್ಕ'ನ ಸಂಸ್ಥೆಯ ಎಲ್ಲಾ ಪತ್ರಿಕೆಗಳನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಡುತ್ತಾರೆ. ಮಾತ್ರವಲ್ಲ, ಬಿಲ್ ಕಟ್ಟುವುದು ತುಂಬಾ ತಡವಾದಾಗ ಮಾತ್ರ ನೆನಪಿಸುತ್ತಾರೆ! ಬಾಲಚಂದ್ರ ಅವರಿಗೆ ತುಂಬು ಹೃದಯದ ಧನ್ಯವಾದಗಳು.

ಈ ಹತ್ತು ವರ್ಷಗಳಲ್ಲಿ ಬೆನ್ನು ತಟ್ಟಿ ಪ್ರೋತ್ಸಾಹಿಸಿದ, ಸಾಲ ಕೊಟ್ಟು ಸಹಕರಿಸಿದ, ಇನ್ನು ನನ್ನ ಕೈಯಲ್ಲಿ ಆಗಲ್ಲ ಎಂಬ ಹಂತ ತಲುಪಿದಾಗ ನನ್ನಲ್ಲಿ ಮತ್ತೆ ಹುರಿದುಂಬಿಸಿದ ಮಿತ್ರರಿಗೂ, ಗೆಳತಿಯರಿಗೂ ಧನ್ಯವಾದಗಳು.

ರಾಜ್ಯದ ಹಲವಾರು ಕಡೆ ನಮ್ಮ ಸಂಸ್ಥೆಯ ಪತ್ರಿಕೆಗಳನ್ನು ಮತ್ತು ಪುಸ್ತಕಗಳನ್ನು ಮಾರುವ ಏಜೆಂಟ್ ಮಿತ್ರರಿಗೂ ಪ್ರೀತಿಯ ಧನ್ಯವಾದಗಳು.

ಎಲ್ಲಕ್ಕಿಂತ ಮಿಗಿಲಾಗಿ ಈ ನಮ್ಮ ಪತ್ರಿಕೆಯನ್ನು ಮತ್ತು ನಮ್ಮ ಇತರೆ ಪ್ರಕಟಣೆಗಳನ್ನು ಕೊಂಡು ನೆರವಾದ ನಮ್ಮ ಎಲ್ಲ ಓದುಗರಿಗೆ ದೊಡ್ಡ ಸಲಾಂ. ನಾನಾಗಲಿ, ಇನ್ನಾರೆ ಆಗಲಿ ಅದೆಷ್ಟೇ ಉಸ್ಸಪ್ಪಾ ಅಂತ ಕೆಲಸ ಮಾಡಿದ್ದರೂ, ನೀವಿರದಿದ್ದರೆ ಇದ್ಯಾವುದೂ ಸಾಧ್ಯವಾಗುತ್ತಲೇ ಇರಲಿಲ್ಲ.

ಅಪ್ಪನಿಗೂ, ಈ ನಿಮ್ಮ ಪತ್ರಿಕೆಗೂ ಹುಟ್ಟುಹಬ್ಬದಂದು ಒಂದು 'ಮಿಯಾಂವ್' ಹೇಳಲು ಭಾನುವಾರ ಬನ್ನಿ.

ಇದು ನನ್ನ ಪ್ರೀತಿಯ ಆಹ್ವಾನ. ■

ನನ್ನನುಭವದ ಸೂಫಿ... ದಿಖಾವ ನಹಿ ಚಲಾವ (ತೋರಿಕೆಯಲ್ಲ ನಡವಳಿಕೆ)


ಬಾಲ್ಯ ನಮ್ಮ ವ್ಯಕ್ತಿತ್ವದ ಬೇಸ್‌ಲೈನ್ ಅನ್ನು ರೂಪಿಸುತ್ತದೆ. ಬಾಲ್ಯವನ್ನು ನಾವು ಕಟ್ಟಿಕೊಳ್ಳಲು ಬರುವುದಿಲ್ಲ, ಅದು ಸಿಗಬೇಕು ಅಷ್ಟೆ. ಈ ವಿಚಾರದಲ್ಲಿ ನಾನೊಂದು ರೀತಿಯಲ್ಲಿ 'ಪುಣ್ಯವಂತ' ಎಂದೇ ಹೇಳಬೇಕು. ಬಡತನ ಹಾಗೂ ಭಾವೈಕ್ಯತೆಗಳನ್ನು ನನ್ನ ವ್ಯಕ್ತಿತ್ವದೊಳಗೆ ಬೆರೆಸಿದ್ದು ನನ್ನ ಬಾಲ್ಯ. ನನ್ನ ಆಲೋಚನೆಗಳನ್ನು ರೂಪಿಸಿದ್ದರಲ್ಲಿ ಸಂಘಟನಾ ಬದುಕಿನದೆ ಪ್ರಧಾನ ಪಾತ್ರ ಎಂಬುದು ಹೌದಾದರೂ ಅದರ ಮೊಳಕೆಗಳನ್ನು ಮೂಡಿಸಿದ್ದು ಮಾತ್ರ ಬಾಲ್ಯವೆ. ನನ್ನ ತಂದೆತಾಯಿಯ ಹಿನ್ನೆಲೆ ಇದಕ್ಕೆ ಮುಖ್ಯ ಕಾರಣ.

ಅಪ್ಪ ಕಡುಬಡತನದಲ್ಲಿ ಬೆಂದು ಬಂದವರು, ಅಮ್ಮ ಸೌಹಾರ್ದ ಪರಂಪರೆಯಲ್ಲಿ ಮಿಂದು ಬಂದವರು. ಅವರ ಅನುಭವ, ಆಲೋಚನೆ ಹಾಗೂ ಬದುಕು ನಮ್ಮನ್ನೂ ರೂಪಿಸುತ್ತಾ ಹೋಯಿತು. ಅದರಲ್ಲಿ ಸೂಫಿ ಪರಂಪರೆಯದು ಮುಖ್ಯ ಪಾತ್ರ. ನನ್ನನ್ನು ಮಾನವೀಯತೆಗೆ ಪರಿಚಯಿಸಿದ, ನನ್ನಲ್ಲಿರುವಷ್ಟು ಮಾನವೀಯತೆಗೆ ತಳಪಾಯವಾಗಿ ಕೆಲಸ ಮಾಡಿದ ಬಡತನ ಹಾಗೂ ಸೂಫಿತನದ ಒಂದೆರಡು ಖಾಸ್‌ಬಾತ್ ನಿಮ್ಮೊಟ್ಟಿಗೆ ...

ಅಪ್ಪನದು ಚಿನುಮನಾಯಕನ ಹಳ್ಳಿ ಎಂಬ ಪುಟ್ಟ ಗ್ರಾಮ. ಇದು ಚಳ್ಳಕೆರೆ ಹಾಗೂ ಪಾವಗಡದ ನಡುವೆ ಇರುವ ಭೂಗುಟ್ಟುವ ಪರಶುರಾಂಪುರದ ಬಳಿ ಬರುತ್ತದೆ. ಅಪ್ಪನ ಜೊತೆ ಒಡಹುಟ್ಟಿದ ಅಕ್ಕ, ತಮ್ಮಂದಿರೆಲ್ಲಾ ಕಡುಬಡತನದಲ್ಲಿದ್ದವರೆ. ಆದರೆ ಸದಾ ಪ್ರೀತಿಯ ಕಣಜವನ್ನು ಒಡಲೊಳಗಿಟ್ಟುಕೊಂಡು ಬದುಕಿದವರು. ನಮ್ಮ ದೊಡ್ಡತ್ತೆ ಮನೆಯಲ್ಲಿ ಎಂತಹ ಬಡತನವೆಂದರೆ ಒಲೆ ಉರಿಸಲಿಕ್ಕೆ ಉರುವಲಿಗೂ ಗತಿ ಇರುತ್ತಿರಲಿಲ್ಲ. ನಾವು ಮನೆಗೆ ಹೋದೆವೆಂದರೆ ಸಾಕು, ಕೊಂಚ ಕ್ಷಣ ಅತ್ತೆ ಕಣ್ಮರೆಯಾಗುತ್ತಿದ್ದರು. ಮೆಕಾನಿಕ್ ಶಾಪ್ ಬಳಿಯ ಟೈರ್‌ಪೀಸ್‌ಗಳನ್ನು ಹುಡುಕಿ ತಂದು ಒಲೆ ಹೊತ್ತಿಸಿ, ಹತ್ತಿರದ ಬಸ್‌ಸ್ಟ್ಯಾಂಡ್ ಬಳಿ ಜನ ತಿಂದು ಬಿಸಾಕಿದ್ದ ಹಲಸಿನ ಬೀಜಗಳನ್ನು ಆಯ್ದು ತಂದು, ಸದ್ದಿಲ್ಲದೆ ಅಡುಗೆ ಮಾಡಿ ಅತ್ಯಂತ ಆಪ್ಯಾಯತೆ ಜೊತೆ ಬಡಿಸುತ್ತಿದ್ದರು. ಅದಾಗಿ ಈಗ್ಗೆ ಸುಮಾರು ನಾಲ್ಕು ದಶಕಗಳಾಗಿದ್ದರೂ ಆ ಸಾರಿನ ಸ್ವಾದ ನನ್ನ ನಾಲಿಗೆಯಿಂದ ಇನ್ನೂ ಮಾಸಿ ಹೋಗಿಯೇ ಇಲ್ಲ ಎನ್ನಬೇಕು. ನಾನು ನನ್ನ ಇಡೀ ಜೀವಿತಾವಧಿಯಲ್ಲಿ ಉಂಡಿರುವ ಅತ್ಯಂತ ರುಚಿಯಾದ ಸಾರು ಅದು ಎಂಬುದು ನನ್ನ ಭಾವನೆ.

ಇನ್ನು ಇಡೀ ಕಳ್ಳುಬಳ್ಳಿಯಲ್ಲಿ ಬಡಮಾಸ್ತರರಾದ ನಮ್ಮ ತಂದೆಯವರೇ ಅತ್ಯಂತ ಅನುಕೂಲಸ್ಥರು. ಇವರು ಮಾಸ್ತರರಾದದ್ದೂ ವಿಶೇಷವೆ. ಅವರು ಶಾಲೆಗೇ ಹೋಗದೆ ಮಾಸ್ತರರಾದವರು. ಶಿಕ್ಷಣಾಧಿಕಾರಿಯೊಬ್ಬರ ಮನೆಯಲ್ಲಿ ಜೀತಕ್ಕಿದ್ದು, ಅವರ ಮಕ್ಕಳ ಕೆಲಸ ಮಾಡುತ್ತಾ ಅಕ್ಷರ ಕಲಿತವರು. ಕಲಿತ ಜ್ಞಾನ ಅಕಸ್ಮಾತ್ತಾಗಿ ಅಧಿಕಾರಿಯ ಕಣ್ಣಿಗೆ ಬಿದ್ದು, ಅವರ ಕೃಪಾಕಟಾಕ್ಷದಿಂದಾಗಿ ನೇರವಾಗಿ ಎಲ್‌ಎಸ್ ಪರೀಕ್ಷೆ ಬರೆದು, ಪಾಸಾಗಿ, ಉದ್ಯೋಗ ಕರೆಯಿತೆಂದು ಕೆಲಸಕ್ಕೆ ಸೇರಿದವರು. ಆದರೆ ಅವರೆಂದೂ ಸಿಕ್ಕ ಮಾಸ್ತರತನಕ್ಕೆ ತೃಪ್ತಿಗೊಂಡು ಕೂತವರಲ್ಲ. ಮಾಸ್ತರಿಕೆಯೊಂದಿಗೆ ಗೂಡಂಗಡಿ ನಡೆಸುತ್ತಾ, ಎಮ್ಮೆ ಸಾಕುತ್ತಾ, ಹಾಲು ಮಾರುತ್ತಾ, ಹೊಲ ಮಾಡುತ್ತಾ, ಬಂಡೆ ಒಡೆಸುತ್ತಾ, ಇನ್ನು ಏನೇನೋ ಮಾಡುತ್ತಾ ನಮ್ಮನ್ನು ಮೇಲೆತ್ತಲು ವಿಶ್ರಾಂತಿ ಇಲ್ಲದೆ ದುಡಿದವರು. "ಎಂಥ ಕೆಲಸ ಮಾಡಲೂ ಹೇಸಿಕೆ ಪಡಬಾರದು" ಮತ್ತು "ಬದುಕಿನಲ್ಲಿ ಕಷ್ಟಬಂತೆಂದು ಸುಳ್ಳು ಹೇಳಬಾರದು" ಇದು ಅವರು ನನಗೆ ಕಲಿಸಿದ ಅತ್ಯಂತ ಅಮೂಲ್ಯವಾದ ಪಾಠಗಳು. ಬಡತನದಿಂದಾಗಿ ಪಟ್ಟ ಕಷ್ಟ, ಅನುಭವಿಸಿದ ಅವಮಾನವನ್ನು ಬಿಚ್ಚಿಬಿಚ್ಚಿ ಹೇಳಿ ನಮ್ಮ ಮನಸ್ಸು ದುರ್ಬಲರ ಪಕ್ಷಪಾತಿಯಾಗಲು ಪರಿಪಕ್ವಗೊಳಿಸಿದರು. ನಕ್ಷತ್ರಗಳ ಕೆಳಗೆ ಅಪ್ಪನ ಜೊತೆ ಮಲಗಿ "ಹುಂ" ಗುಟ್ಟುತ್ತಾ ಕೇಳಿಸಿಕೊಂಡ ಪುರಾಣ ಕಥೆಗಳಿಗೆ ಕೊನೆ ಇರಲಿಲ್ಲ, ಹಾಗೆ ನೋಡಬೇಕೆಂದರೆ ರಾಮಾಯಣ, ಮಹಾಭಾರತ ನನಗೆ ಹರಿದುಬಂದದ್ದು ಅಕ್ಷರ ಸಂಸ್ಕೃತಿಯಿಂದ ಅಲ್ಲ, ಬದಲಿಗೆ ಅಪ್ಪನ ಮೌಖಿಕ ಪರಂಪರೆಯಿಂದ. ಪ್ರತಿ ರಾತ್ರಿ ಅಪ್ಪ ಕಾಣಿಸುವ ಕುರುಕ್ಷೇತ್ರದಲ್ಲಿ ಕತ್ತಿ ಹಿಡಿದು ಓಡಾಡದೆ ನಿದ್ದೆ ಮಾಡುತ್ತಿರಲಿಲ್ಲ.

ಅಮ್ಮ ತನ್ನ ಕಥೆ ಹೇಳಿದ್ದು ಕಡಿಮೆ. ಆದರೆ ಅಜ್ಜ-ಅಜ್ಜಿಯ ಬದುಕು ಹಾಗೂ ಚಿಂತನೆಗಳನ್ನು ಪರಿಚಯಿಸಿದ್ದೆ ಹೆಚ್ಚು. ಅಜ್ಜ ಮತ್ತು ಅಜ್ಜಿಯದು ವಿರುದ್ಧ ದಿಕ್ಕಿನ ಹಿನ್ನೆಲೆ. ಅಜ್ಜ ಬಡತನವನ್ನು ಹೊದ್ದು ಹುಟ್ಟಿದವರು, ಭೂಹೀನ ಕೃಷಿ ಕೂಲಿಗಳ ಮುಸ್ಲಿಂ ಕುಟುಂಬ. ಅಜ್ಜಿಯದು ಆರ್ಥಿಕ ಶ್ರೀಮಂತಿಕೆ ಹಾಗೂ ದರ್ಪದ ರೆಡ್ಡಿ ಭೂಮಾಲೀಕ ಕುಟುಂಬ. ವಿರುದ್ಧ ದಿಕ್ಕಿನ ಇಬ್ಬರನ್ನು ಹತ್ತಿರ ತಂದದ್ದು ಸೂಫಿ ಚಿಂತನೆ. "ದೇವರ ಜಗತ್ತಿನಲ್ಲಿ ಭೇದಭಾವವಿಲ್ಲ" ಎಂಬ ಮೌಲ್ಯದಲ್ಲಿ ನಂಬಿಕೆ ಇಟ್ಟಿದ್ದ ಇವರಿಬ್ಬರು ಅದಕ್ಕೆ ತಕ್ಕಂತೆ ಬದುಕಿದವರು. ಮದುವೆಯ ನಂತರ ಊರು ತೊರೆಯಲೇಬೇಕಿತ್ತು, ಅಜ್ಜ ದೂರದೂರದ ಪ್ರದೇಶಗಳಿಗೆ ಕಾಲ್ನಡಿಗೆಯಲ್ಲೆ ಚಲಿಸಿ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುವ ಗುರುಗಳ ಪ್ರವಚನಗಳನ್ನು ಆಲಿಸಿದರು,


ಮೂಲ ಗುರು ಹೊನ್ನೂರ್ ಸಾಬ್ ಮತ್ತು ಶ್ರೀಮತಿ ಮರಿಯಮ್ಮ ಬೀ

ಅಕ್ಷರ ಕಲಿತರು, ಹಿಂದು-ಮುಸ್ಲಿಂ ಎಂಬ ಭೇದವಿಲ್ಲದೆ ಎರಡೂ ಧರ್ಮದ ಗ್ರಂಥಗಳನ್ನು ಓದಿದರು. ಆಂಧ್ರದ ಆದೋನಿ ಜಿಲ್ಲೆಯಲ್ಲಿರುವ ಗುಡಿಕಲ್ ಎಂಬ ಸೂಫಿ ಕೇಂದ್ರ ಅವರ ಮೇಲೆ ವಿಶೇಷ ಪ್ರಭಾವ ಬೀರಿತು.

ಗುಡಿಕಲ್‌ನ ಭಾವೈಕ್ಯ ಪರಂಪರೆಯನ್ನು ಅರ್ಥಮಾಡಿಕೊಳ್ಳಲು ಅದರ ಧರ್ಮಗುರುಗಳ ಫೋಟೋ ನೋಡಿದರೆ ಸಾಕು. ಬೇರೆ ಬೇರೆ ಕಾಲದಲ್ಲಿ ತೆಗೆದ ಗುರುಗಳ ಚಿತ್ರಗಳನ್ನು ಒಟ್ಟಿಗೆ ಜೋಡಿಸಿ ಫೋಟೋ ಮಾಡಲಾಗಿದೆ. ಈ ಐದು ಜನ ಗುರುಗಳಲ್ಲಿ ಮೂವರದು ಮುಸ್ಲಿಂ ಹೆಸರಾದರೆ, ಇಬ್ಬರದು ಹಿಂದೂ ಹೆಸರು. ಹಿಂದೂ-ಮುಸ್ಲಿಂ ಎಂಬ ಗಡಿಯನ್ನು ಮೀರಿದ ಗುರು ಪರಂಪರೆ. ಇಲ್ಲಿ ಶಿಷ್ಯತ್ವ ವಂಶ ಪಾರಂಪರ್ಯದ್ದಾಗಿರಲಿಲ್ಲ, ವಿಚಾರ ಪರಂಪರೆಯದಾಗಿತ್ತು, ಅಜ್ಜ-ಅಜ್ಜಿ ತಾವು ಆಲಿಸಿದ, ಅನುಭವಿಸಿದ, ಅನುಭಾವಿಸಿದ ಆಲೋಚನೆಗಳನ್ನು ಹಳ್ಳಿಹಳ್ಳಿಗೆ ಅಲೆದು ಬಿತ್ತಿ ಬೆಳೆಸತೊಡಗಿದರು. ಜಂಗಮತೆ ಅವರ ಸಹಜ ಜೀವನಶೈಲಿಯಾಗಿತ್ತು, ಹಳ್ಳಿ ಅವರ ಪ್ರಮುಖ ಕಾರ್ಯಸ್ಥಾನವಾಗಿದ್ದರಿಂದ ಮುಸ್ಲಿಂ ಹಿನ್ನೆಲೆಯವರಿಗಿಂತ ಹೆಚ್ಚಾಗಿ ಹಿಂದೂ ಹಿನ್ನೆಲೆಯ ಅನುಯಾಯಿಗಳನ್ನು ಅವರು ಹೊಂದಿದ್ದರು. ಅದರಲ್ಲೂ ಕುರುಬ, ಲಿಂಗಾಯತ, ಒಕ್ಕಲಿಗ ಮುಂತಾದ ಜಾತಿ ಹಿನ್ನೆಲೆಯವರಿದ್ದರು. ಆದರೂ ಈ ಶಿಷ್ಯವೃಂದದಲ್ಲಿ ಅಸ್ಪೃಶ್ಯರು ಇರಲಿಲ್ಲ ಎಂಬುದು ಸ್ಪೃಶ್ಯ ಮತ್ತು ಅಸ್ಪೃಶ್ಯರ ನಡುವಿನ ಗೋಡೆ ಬಲವಾಗಿದ್ದದ್ದನ್ನೇ ಸೂಚಿಸುತ್ತದೆ. ಅಸ್ಪೃಶ್ಯರನ್ನು ಹೊರತುಪಡಿಸಿದಂತೆ ಮಿಕ್ಕ ಹಿಂದೂ-ಮುಸ್ಲಿಮರಿಬ್ಬರೂ ಸಹ ಬಹಳ ಸಹಜವಾಗಿ ಇವರ ಅನುಯಾಯಿಗಳಿದ್ದರು.

ಈ ಗುರು-ಶಿಷ್ಯ ಪರಂಪರೆಯಲ್ಲಿ ಧರ್ಮ ಒಂದು ತಡೆಯಾಗಿ ಬರದಿದ್ದುದು ಅಂದಿನ ಮಟ್ಟಿಗೆ ಆಶ್ಚರ್ಯದ ವಿಚಾರವಾಗಿರಲಿಲ್ಲ, 50 ವರ್ಷಗಳ ಹಿಂದೆ ಆ ಭಾಗದ ಜನಸಂಸ್ಕೃತಿ ಇದ್ದದ್ದೇ ಹಾಗೆ. ಹಾಗೆ ನೋಡಬೇಕೆಂದರೆ ಅಜ್ಜ ಮಾತ್ರ ಈ ಭಾಗದ ಗುರುವಾಗಿದ್ದದ್ದೂ ಅಲ್ಲ, 20ನೇ ಶತಮಾನದ ಮಧ್ಯ ಭಾಗದಲ್ಲಿ ಇಂಥ ಅನೇಕ ಸಂತರು ಈ ಭಾಗದಲ್ಲಿದ್ದರು. ಇವರಿಬ್ಬರಲ್ಲಿ ಹಿಂದೂ-ಮುಸ್ಲಿಮರಿಬ್ಬರೂ ಇದ್ದರು ಜನರ ಮಟ್ಟಿಗೆ ಇವರು ಹಿಂದೂಗಳೂ ಆಗಿರಲಿಲ್ಲ, ಮುಸ್ಲಿಮರೂ ಆಗಿರಲಿಲ್ಲ, ಸನ್ಮಾರ್ಗವನ್ನು ತೋರುವ "ಗುರುಗಳು" ಮಾತ್ರವಾಗಿದ್ದರು. ದೈವ ಪರಂಪರೆಗಿಂತ ಈ ಗುರು ಪರಂಪರೆಯೇ ಹಳ್ಳಿಗಳಲ್ಲಿ ಗಾಢವಾಗಿತ್ತು ಎಂದೇ ಹೇಳಬೇಕು. ಗುರುಗಳಿಗೂ ಅಷ್ಟೆ ಮುಸ್ಲಿಂ ಅಥವ ಹಿಂದೂ ಯಾವ ಧರ್ಮವೂ ಮುಖ್ಯವಾಗಿರಲಿಲ್ಲ, ಅವರ ಮನಸ್ಸು ಅವರ ಸಂಪರ್ಕಕ್ಕೆ ಬರುವ ಎಲ್ಲಾ ಧರ್ಮ ಚಿಂತನೆಗಳೊಳಗಿನ ಒಳ್ಳೆಯದನ್ನೇ ಹುಡುಕುತ್ತಿತ್ತು ಅನಿಸುತ್ತದೆ. ಈ ಭಾಗದಲ್ಲಿ ಆಗ ಹಿಂದೂ ಮತ್ತು ಮುಸ್ಲಿಂ ಧರ್ಮಗಳೇ ಇದ್ದುದರಿಂದ ಎರಡೂ ಧರ್ಮಗಳ ಧರ್ಮ ಗ್ರಂಥಗಳಲ್ಲಿರುವ ಜೀವಪರ ಚಿಂತನೆಗಳನ್ನು ಹೆಕ್ಕಿಕೊಳ್ಳುವುದು, ಎರಡೂ ಧರ್ಮಗಳಲ್ಲಿರುವ ಪುರೋಹಿತಶಾಹಿಯ ಟೊಳ್ಳು ಹಾಗೂ ಠಕ್ಕತನವನ್ನು ಬಯಲಿಗೆಳೆಯುವುದು ಇವರ ವಿಧಾನವಾಗಿತ್ತು, ಅಜ್ಜ ಖುರಾನ್ ಮತ್ತು ಪುರಾಣಗಳೆರಡರಿಂದಲೂ ನೀತಿಪಾಠಗಳನ್ನು ಎತ್ತಿ ವಿವರಿಸುತ್ತಿದ್ದರು. ಮೂಲಭೂತವಾದಿ ಮುಲ್ಲಾ ಹಾಗೂ ಮಾಯಮಂತ್ರವಾದಿ ಸ್ವಾಮಿಗಳಿಬ್ಬರನ್ನೂ ಬಲವಾಗಿ ಟೀಕಿಸುತ್ತಿದ್ದರು. ಹಾಗಾಗಿಯೇ ಬಹಳ ಸಹಜವಾಗಿ ಅಜ್ಜ ಮುಸ್ಲಿಮರಿಗೆ ಹೊನ್ನೂರ್ ಸಾಬ್, ಹಿಂದೂಗಳಿಗೆ ಹೊನ್ನೂರ್ ಸ್ವಾಮಿ ಆಗಿಬಿಟ್ಟರು.

ನಮಾಜ್ ಅಥವ ಪೂಜೆಯಂತಹ ಯಾವ ಪದ್ಧತಿಗಳಿಗೂ ಇಲ್ಲಿ ಪ್ರಾಮುಖ್ಯತೆ ಇರಲಿಲ್ಲ. ವಿಚಾರದ ಚರ್ಚೆಗೇ ಎಲ್ಲಾ ಗಮನ. ಈ ವಿಚಾರಗೋಷ್ಠಿಗಳನ್ನು "ಕಮಿಟಿ" ಎಂದು ಕರೆಯುತ್ತಿದ್ದರು. (ಬಹುಶಃ ಎಲ್ಲರೂ ಸೇರಿ ಚರ್ಚಿಸುವ ಸಮಿತಿಗಳನ್ನು ಬ್ರಿಟಿಷರು ಕಮಿಟಿಗಳು ಎಂದು ಕರೆಯುತ್ತಿದ್ದರಿಂದ ಇವನ್ನೂ ಹಾಗೆಯೇ ಕರೆಯಲು ಪ್ರಾರಂಭಿಸಿರಬಹುದು.) ಶಿಷ್ಯರೆಲ್ಲಾ ದುಡಿಯುವ ವರ್ಗದ ಜನರೇ ಆಗಿದ್ದುದ್ದರಿಂದ ಕಮಿಟಿಗಳು ಸಾಮಾನ್ಯವಾಗಿ ರಾತ್ರಿ ಹೊತ್ತೇ ನಡೆಯುತ್ತಿದ್ದವು. ಗುರುಗಳ ಮಂಡನೆ ನಂತರ ಚರ್ಚೆ, ಮಧ್ಯಮಧ್ಯ ತತ್ವಪದಗಳು. ವಿಚಾರದ ಚರ್ಚೆ ಯೋಚನೆಗೆ ಹಚ್ಚಿದರೆ, ತತ್ವಪದಗಳು ನಿದ್ದೆಯನ್ನು ಓಡಿಸಿ, ಆತ್ಮಶುದ್ಧಿಯ ವಾತಾವರಣವನ್ನು ನಿರ್ಮಿಸುತ್ತಿದ್ದವು. ಹಳ್ಳಿಗಳನ್ನು ಸುತ್ತುತ್ತಾ ಜನರೊಟ್ಟಿಗೆ ಬೆರೆಯುತ್ತಾ, ಕಮಿಟಿಗಳನ್ನು ನಡೆಸುತ್ತಾ ಸಾಗಿದಂತೆ ಅಜ್ಜನ ವಿಚಾರವಂತಿಕೆ ಆಳಗೊಳ್ಳತೊಡಗಿತು, ಅಜ್ಜಿಯ ಹೃದಯವಂತಿಕೆ ವಿಶಾಲಗೊಳ್ಳತೊಡಗಿತು. ಎರಡರಿಂದಲೂ ಇಬ್ಬರೂ ಜನರಿಗೆ ನಿಕಟವಾಗತೊಡಗಿದರು. ಇಬ್ಬರ ಸಮಾಧಿಯೂ ಈಗ ಚಳ್ಳಕೆರೆ ಬಳಿಯ ಚಿಕ್ಕಮ್ಮನ ಹಳ್ಳಿ ಬಳಿ ಇದೆ. ಈಗಲೂ ಹಿಂದೂ-ಮುಸ್ಲಿಮರಿಬ್ಬರೂ ದರ್ಗಾಗೆ ಭೇಟಿಕೊಡುತ್ತಾರೆ. ಪ್ರತಿವರ್ಷ ಉರುಸ್ ನಡೆಯುತ್ತದೆ.


ನಾನು ಹುಟ್ಟಿ, ಮೆದಳು ಬಲಿಯುವ ಹೊತ್ತಿಗೆ ಅಜ್ಜಿ ಹಣ್ಣಾಗಿದ್ದರು, ಅಜ್ಜ ಹಾಸಿಗೆ ಹಿಡಿದಿದ್ದರು. ಹಾಗಾಗಿ ಅವರನ್ನು ಕಂಡಿದ್ದರೂ ಅವರ ವಿಚಾರಗಳನ್ನು ಅವರ ಬಾಯಿಂದಲೇ ಕೇಳಿರುವುದು ಕಡಿಮೆ. ಬದಲಿಗೆ ಅಮ್ಮ, ಅಪ್ಪ ಮಾವಂದಿರು ಮತ್ತು ಅಣ್ಣನ ಮಾತುಗಳ ಮೂಲಕ ಅಜ್ಜ-ಅಜ್ಜಿಯನ್ನು ಅರ್ಥಮಾಡಿಕೊಂಡಿದ್ದೇ ಹೆಚ್ಚು, ನಂತರದ ದಿನಗಳಲ್ಲಿ ಅಜ್ಜ ಬರೆದಿರುವ "ಸುಜ್ಞಾನ ರತ್ನ ಪ್ರಭ" ಮತ್ತು "ಸುಜ್ಞಾನ ಚಂದ್ರ ಪ್ರಭ" ಎಂಬ ಕೃತಿಗಳನ್ನು ಓದಿದೆನಾದರೂ ಅದರಲ್ಲಿನ ಕೆಲವು ವಿಚಾರಗಳು ಮಾತ್ರ ಅರ್ಥವಾದವು. ಒಟ್ಟಾರೆ ನಾನು ಅರ್ಥಮಾಡಿಕೊಂಡಂತೆ ಅಥವ ನನ್ನೊಳಗೆ ಇಳಿದು ಉಳಿದುಕೊಂಡ ಸೂಫಿ ಚಿಂತನೆಗಳ ಕೆಲವು ತುಣುಕುಗಳು ಹೀಗಿವೆ..

- ಮೈಪನ" ಇರಬಾರದು: "ಮೈಪನ" ಎಂದರೆ 'ನಾನು' ಎಂಬ "ಅಹಂ". 'ನಾನು' ಎಂಬುದು ನಾಶದ ಮೂಲ, ಎಲ್ಲಾ 'ಅವನು' ಎಂಬುದಿರಬೇಕು.
- ಹಿರಿಸ್" ಇರಬಾರದು: "ಹಿರಿಸ್" ಎಂದರೆ "ದುರಾಸೆ". ದುರಾಸೆಯೇ ದುಃಖಕ್ಕೆ ಮೂಲ. ದುರಾಸೆ ತಳವಿಲ್ಲದ ಬಾವಿ. "ಸಾಕು" ಎಂಬುದನ್ನು ಕಲಿಯಬೇಕೆ ಹೊರತು "ಬೇಕು, ಬೇಕು" ಎಂದು ಓಡಬಾರದು. ಸಾಕು ಜೊತೆ ಬರುವುದು ಸಂತೃಪ್ತಿ, ಬೇಕಿನ ಜೊತೆ ಬರುವುದು ತಣಿಯದ ಅತೃಪ್ತಿ.
- ಮೇರ" ಎಂಬುದು ಇರಬಾರದು: "ಮೇರ" ಎಂದರೆ "ನನ್ನದು". ಇಲ್ಲಿ ನನ್ನದು ಎಂಬುದು ಏನೂ ಇಲ್ಲ, ಎಲ್ಲಾ ಅವನದು. ನಾನು ಇಲ್ಲಿರುವತನಕ ಇದನ್ನು ಅಗತ್ಯವಿರುವಷ್ಟು ಬಳಸುವ ಹಕ್ಕು ನನಗಿದೆಯೇ ಹೊರತು, ಅಗತ್ಯಕ್ಕಿಂತ ಹೆಚ್ಚು ಕಬಳಿಸುವ ಸ್ವಾತಂತ್ರ್ಯ ಯಾರಿಗೂ ಇಲ್ಲ, ಹಾಗಾಗಿ ಆಸ್ತಿ ಸೇರಿಸುವುದನ್ನು ಮಾಡಬಾರದು. ಇರುವುದನ್ನು ಹಂಚಿಕೊಂಡು ಬದುಕುವುದನ್ನು ಮೈಗೂಡಿಸಿಕೊಳ್ಳಬೇಕು.
- "ಊಂಚ್ ನೀಚ್" ಎಂಬುದು 'ಗುನಃ': "ಊಂಚ್ ನೀಚ್" ಎಂದರೆ "ಮೇಲುಕೀಳು". ಮೇಲುಕೀಳು ಎಂಬುದೆಲ್ಲಾ ಸುಳ್ಳು. ಎಲ್ಲರೂ ದೇವರ ಮಕ್ಕಳು. ದೇವರ ದೃಷ್ಟಿಯಲ್ಲಿ ಎಲ್ಲರೂ ಸಮಾನರು. ದೇವರ ಮಕ್ಕಳಲ್ಲಿ ಬೇಧಭಾವ ಮಾಡುವುದು ಮತ್ತು ಮೇಲುಕೀಳೆಂದು ಕರೆಯುವುದು ಗುನಃ ಅಂದರೆ ಪಾಪ.
- ದಿಖಾವ ನಹಿ ಚಲಾವ": "ದಿಖಾವ" ಎಂದರೆ ತೋರಿಕೆ, "ಚಲಾವ" ಎಂದರೆ "ನಡವಳಿಕೆ". ದೇವರನ್ನು ಸೇರುವ ಮಾರ್ಗವೆಂದರೆ ಮೇಲೆ ಉಲ್ಲೇಖಿತ ರೀತಿಯಲ್ಲಿ ಸನ್ಮಾರ್ಗದಲ್ಲಿ ನಡೆದುಕೊಳ್ಳುವುದು ಅಥವ ಬದುಕುವುದೇ ಹೊರತು ತೋರಿಕೆಯ ವಿಧಿಗಳನ್ನು ಅನುಸರಿಸುವುದಲ್ಲ, ಅಂದರೆ ನಮಾಜು ಮಾಡುವುದು, ಅರ್ಥವಾಗದ ಅರಬ್ಬಿ ಭಾಷೆಯಲ್ಲಿ ಖುರಾನ್ ಓದುವುದು, ಹಜ್ಜಿಗೆ ಯಾತ್ರೆ ಹೋಗುವುದು, ಗಡ್ಡ ಬಿಡುವುದು, ದೇವಸ್ಥಾನಗಳಿಗೆ ಅಲೆಯುವುದು, ಜಾತ್ರೆಗಳನ್ನು ನಡೆಸುವುದು, ನಾಮ ಬಳಿದುಕೊಳ್ಳುವುದು, ಜುಟ್ಟು ಬಿಟ್ಟುಕೊಳ್ಳುವುದು ಅಲ್ಲ. ಬದಲಿಗೆ ನಾನು, ನನ್ನದು, ಮೇಲು ಎಂಬುದನ್ನು ಬಿಡುವುದು. ಸರಳವಾಗಿ, ಎಲ್ಲರಿಗಾಗಿ, ಎಲ್ಲರೊಂದಿಗೆ, ಸಮಾನವಾಗಿ ಸಹಬಾಳ್ವೆ ನಡೆಸುವುದು.

ಈ ಹಿನ್ನೆಲೆಯಿಂದಾಗಿ ಮನೆಯಲ್ಲಿ ಬಡವರ ಬಗ್ಗೆ ಅನುಕಂಪ ಹಾಗೂ ಎಲ್ಲಾ ಜಾತಿ ಧರ್ಮೀಯರ ಜೊತೆ ಅನುಬಂಧ ಬಲವಾಗಿತ್ತು, ದೊಡ್ಡವರೆಲ್ಲಾ ಸೇರಿಕೊಂಡಿದ್ದಾಗ ಒಂದನೇ ತರಗತಿಗೆ ಹೋಗುತ್ತಿದ್ದ ನನ್ನನ್ನು ಕೂರಿಸಿಕೊಂಡು "ನೀನು ಕೆಟ್ಟ ಮುಸ್ಲಿಮನ, ಒಳ್ಳೆ ಮಾದಿಗನ" ಎಂದು ಪ್ರಶ್ನೆ ಕೇಳುತ್ತಿದ್ದರು. ನಾನು "ಒಳ್ಳೆ ಮಾದಿಗ" ಎಂದು ಉತ್ತರಿಸಿದಾಗ ಎಲ್ಲಾ ಹರ್ಷಿಸಿ ಮೆಚ್ಚಿಗೆ ವ್ಯಕ್ತಪಡಿಸುತ್ತಿದ್ದರು. ಆದರೆ ಈ ಸೂಫಿ ಒಳ್ಳೆಯತನ ವ್ಯಕ್ತಿಗತ ನಡುವಳಿಕೆಯ ಸೀಮೆಯನ್ನು ದಾಟಿ ಮುಂದೆ ಹೋಗಿರಲಿಲ್ಲ, ಕೇಡು ಮಾಡದೆ, ಸಾಧ್ಯವಾದಷ್ಟು ಒಳ್ಳೆಯದನ್ನು ಮಾಡುತ್ತಾ ಬದುಕಬೇಕು ಎಂಬ ಜೀವನಾದರ್ಶವನ್ನು ಮಾತ್ರ ನನ್ನಲ್ಲಿ ಬೆಳೆಸಿತ್ತು.

ಒಳ್ಳೆತನದ ಈ ಸೀಮೆಯನ್ನು ದಾಟಿ ಹೋಗಲು ನನ್ನನ್ನು ಪ್ರೇರೇಪಿಸಿದ್ದು ಆಂಧ್ರದಲ್ಲಿ ನಡೆಯುತ್ತಿದ್ದ ಕ್ರಾಂತಿಕಾರಿ ಚಳವಳಿ. ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸಗಳನ್ನೇ ತೊರೆದು ಸಂಕಷ್ಟದಲ್ಲಿ ತೊಳಲಾಡುತ್ತಿದ್ದ ಜನರೊಟ್ಟಿಗೆ ನಿಂತು ಹೋರಾಡುತ್ತಿದ್ದ ಆದರ್ಶ ಆಳವಾಗಿ ಪ್ರಭಾವಿಸಿ ಹೋರಾಟದ ಜಗತ್ತಿಗೆ ಕಾಲಿಡುವಂತೆ ಮಾಡಿತು. ಹೋರಾಟದ ಹಾದಿಯಲ್ಲಿ ಮಾರ್ಕ್ಸ್‌ವಾದ ತುಂಡು ತುಂಡಾಗಿ ಅರ್ಥವಾಗುತ್ತಾ ಹೋಯಿತು. ಸಮಾನತೆ ಬರಬೇಕು ಎಂಬ ಆಶಯ ಗಟ್ಟಿಗೊಳ್ಳತೊಡಗಿತು. ದೇವರು ಎಂಬ ಪರಿಕಲ್ಪನೆ ಶೋಷಕರ ಕೈಯಲ್ಲಿ ಜನರನ್ನು ವಂಚಿಸುವ ಆಯುಧವಾಗಿರುವುದು ಮನವರಿಕೆಯಾಗತೊಡಗಿತು. ಇಂದು ಇಸ್ಲಾಂ, ಹಿಂದೂ, ಕ್ರೈಸ್ತ ಮತ ಎಲ್ಲವನ್ನೂ ಆಳುವವರ ಪೋಷಿಸಿ ಬಳಸಿಕೊಳ್ಳುತ್ತಿರುವುದು ಅರಿವಿಗೆ ಬರತೊಡಗಿತು. ಧರ್ಮಗಳ ಬಗ್ಗೆ ನಕಾರಾತ್ಮಕ ಧೋರಣೆ ಬೆಳೆಯತೊಡಗಿತು. ಆದರೆ ಈ ತಿಳುವಳಿಕೆ ಒಮ್ಮುಖವಾಗಿತ್ತು ಮತ್ತು ಯಾಂತ್ರಿಕವಾಗಿತ್ತು, ಪರಿಣಾಮವಾಗಿ ಒಂದು ಕಾಲಾವಧಿಯವರೆಗೆ ಒಣ ನಾಸ್ತಿಕವಾದ ನನ್ನಲ್ಲಿ ಬೆಳೆಯತೊಡಗಿತು ಎಂದು ಹೇಳಬೇಕು.

ದೇವರು ಇದ್ದಾನೋ ಇಲ್ಲವೋ ಎಂಬುದೇ ದೊಡ್ಡ ಜಿಜ್ಞಾಸೆಯಾಗಿತ್ತು, ಆದರೆ ನಮಗೆ ಬೇಡವಾದ ದೇವರು ಜನರಿಗೆ ಬೇಕಾಗಿತ್ತು, ಧರ್ಮದ ಹೆಸರಿನಲ್ಲಿ ವಂಚನೆ ನಡೆಯುತ್ತಿರುವುದು ನಿಜವಾದರೂ ಇದೇ ಧರ್ಮವನ್ನು ಮುಂದಿಟ್ಟುಕೊಂಡು ಸೂಫಿ ಸನ್ನಡತೆಯನ್ನು ಕಲಿಸಿತ್ತು, ಇದೆಲ್ಲಾ ಒಂದು ರೀತಿಯಲ್ಲಿ ನನ್ನೊಳಗೆ ದೀರ್ಘಕಾಲ ಗೋಜಲು ಗೋಜಲಾಗಿಯೇ ಇತ್ತು, ಮತ್ತೂ ಒಂದಷ್ಟು ಜೀವನಾನುಭವ ಹಾಗೂ ಓದು ಹೆಚ್ಚಿದಂತೆ ಸಂಕೀರ್ಣತೆ ಒಂದು ಮಟ್ಟದ ಸಮಗ್ರತೆಯಾಗಿ ರೂಪಗೊಳ್ಳತೊಡಗಿತು. ಮಾರ್ಕ್ಸ್ ಹೇಳಿದ "ಧರ್ಮ ಒಂದು ಅಫೀಮು, ಆದರೆ ಅದೇ ಸಮಯದಲ್ಲಿ ಅದು ಹೃದಯಹೀನ ಜಗತ್ತಿನ ಹೃದಯ" ಎಂಬ ಮಾತಿನ ಅರ್ಥ ವಿಸ್ತಾರಗೊಳ್ಳತೊಡಗಿತು. 'ಧಾರ್ಮಿಕ ವಿಧಿಗಳೆಂಬ ಸಂಕೋಲೆಗಳನ್ನು ಬಿಗಿದು, ಅದರಲ್ಲಿ ಭರವಸೆಗಳೆಂಬ ಹೂವುಗಳನ್ನು ಮುಡಿಸಲಾಗಿದೆ. ಸಂಕೋಲೆಗಳನ್ನು ಮುರಿದು ನಿಜ ಹೂವುಗಳನ್ನು ಪಡೆಯುವ ಮಾರ್ಗವನ್ನು ಕಲಿಸಬೇಕಲ್ಲದೆ ಹೂವುಗಳನ್ನು ಮಾತ್ರ ಕಿತ್ತು



ಸಂಕೋಲೆಗಳನ್ನು ಉಳಿಸುವ ಕೆಲಸವನ್ನೆಂದೂ ಮಾಡಬಾರದು' ಎಂಬ ಮಾರ್ಕ್ಸ್ ಅವರ ವಿವೇಕದ ಮಾತು ಮರ್ಮಕ್ಕೆ ನಾಟಿತು. ನಾವು ಅಫೀಮು ಎಂಬ ಅಂಶಕ್ಕೆ ಮಾತ್ರ ಒತ್ತು ನೀಡುತ್ತಿದ್ದೇವಾಗಲೀ ಅದು ಸಹೃದಯವಾಗಿಯೂ ಕೆಲಸ ಮಾಡುತ್ತಿದೆ ಎಂಬ ಅಂಶವನ್ನು ಗಮನಿಸುವುದರಲ್ಲಿ ಸೋತೆವು ಅನಿಸಿತು. ದೇವರ ಅಗತ್ಯವಿಲ್ಲದಂಥ ನಾಡನ್ನು ಕಟ್ಟಬೇಕೇ ಹೊರತು ದೇವರನ್ನು ಕೊಲ್ಲುವ ಕೆಲಸವನ್ನು ಮಾತ್ರ ಮಾಡಬಾರದು. ಅಂಥ ಜಗತ್ತು ಮತ್ತಷ್ಟು ಭಯಂಕರವಾಗಿರುತ್ತದೆ ಎಂಬ ವಾಸ್ತವ ಅರಿವಾಗತೊಡಗಿತು.

ಸಮಾಜದಲ್ಲಿನ ಅಸಮಾನತೆ ಹಾಗೂ ಅನೀತಿಯನ್ನು ಸಮರ್ಥಿಸಿಕೊಳ್ಳಲು ಶೋಷಕರು ಧರ್ಮವನ್ನು ಬಳಸಿಕೊಂಡಿರುವುದು ನಿಜವಾದರೂ, ಅದೇ ಸಂದರ್ಭದಲ್ಲಿ ಶೋಷಿತರು ಆ ಶೋಷಕ ವ್ಯವಸ್ಥೆಯನ್ನು ವಿರೋಧಿಸಲು ಸಹ ಧರ್ಮವನ್ನು ಆಧರಿಸಿರುವುದನ್ನು ನಾವು ಇತಿಹಾಸದುದ್ದಕ್ಕೂ ಕಾಣಬಹುದು. ನಮ್ಮ ನಾಡಿನ ಭಕ್ತಿ ಪಂಥಗಳೆ ಇದಕ್ಕೆ ಚಾರಿತ್ರಿಕ ಸಾಕ್ಷಿಗಳು. ವೈದಿಕ ಧರ್ಮ ಹುಟ್ಟಿದಾಗಲೇ ಅವೈದಿಕ ಧರ್ಮ ಸಹ ಹುಟ್ಟಿಕೊಂಡಿದೆ. ಬುದ್ಧ, ಜೈನ, ಸಾಂಖ್ಯ ಇತ್ಯಾದಿ ಅವೈದಿಕ ಧರ್ಮಗಳು ದೇವರಿಲ್ಲದ ಧರ್ಮವನ್ನು ಕಟ್ಟಿಕೊಡುವ ಪ್ರಯತ್ನ ಮಾಡಿವೆ. ಆಗಿನ್ನು ಸಮಾಜದಲ್ಲಿ ದೇವರ ಪರಿಕಲ್ಪನೆ ಬಲವಾಗಿ ಬೇರೂರಿರಲಿಲ್ಲ. ಕ್ರಿ.ಶ. 200ರ ನಂತರದ ಊಳಿಗಮಾನ್ಯ ಅಥವ ರಾಜ ಹಾಗೂ ಜಮೀನ್ದಾರರ ಕಾಲಘಟ್ಟದಲ್ಲಿ ದೇವರ ಪರಿಕಲ್ಪನೆಯನ್ನು ಬಲವಾಗಿ ಬಿತ್ತಿ ಬೆಳೆಸಿ, ಬಳಸಿಕೊಳ್ಳಲಾಯಿತು. ತದನಂತರ ಬಂದ ಬಂಡಾಯ ದೇವರನ್ನೇ ಆಧರಿಸಿದರೂ ದೇವರನ್ನು ಮಂದಿರ-ಮಸೀದಿಗಳೆಂಬ ಸಾಂಸ್ಥೀಕೃತ ಜೈಲುಗಳಿಂದ ಬಿಡುಗಡೆಗೊಳಿಸಿ ಜನರ ಹೃದಯದೊಳಗೆ ತರುವ ಕೆಲಸ ಮಾಡಿದವು. ಏಸು, ಮೊಹಮ್ಮದ್, ಬಸವಣ್ಣ ಗುರುನಾನಕ್, ಕಬೀರ್, ಸೂಫಿಗಳು ಎಲ್ಲರೂ ಮಾಡಿದ್ದು ಇದನ್ನೇ ತಾನೆ. ದೇವರಿಲ್ಲದ ಹಾಗೂ ದೇವರಿದ್ದ ಈ ಬಂಡಾಯ ಧರ್ಮಗಳು ಪ್ರತಿಪಾದಿಸಿದ್ದು ಸಹ "ದುರಾಸೆ ಇರಬಾರದು, ನಾನು-ನನ್ನದು ಎಂಬುದು ಹೋಗಬೇಕು, ಮೇಲುಕೀಳಿಲ್ಲದ ಸಹಬಾಳ್ವೆಯ ಬದುಕು ನಮ್ಮದಾಗಬೇಕು". ಮಾರ್ಕ್ಸ್ ಅಥವ ಅಂಬೇಡ್ಕರ್ ಆಶಿಸಿದ್ದೂ ಸಹ ಇದನ್ನೇ ತಾನೆ? "ಕಮ್ಯುನಿಸಂ" ಎಂದರೆ "ಸಮಬಾಳ್ವೆ ಅಥವ ಸಹಬಾಳ್ವೆ"ಯಲ್ಲದೆ ಮತ್ತೇನು?

ಹಾಗಾದರೆ ಈ ಧರ್ಮಗಳು ಮತ್ತು ಸಿದ್ಧಾಂತಗಳ ನಡುವೆ ವ್ಯತ್ಯಾಸಗಳಿಲ್ಲವೆ? ಇವೆ. ವ್ಯತ್ಯಾಸವಿರುವುದೆಲ್ಲಿ ಎಂದರೆ ಎಲ್ಲರ ಕನಸಾಗಿರುವ ಸಮಬಾಳ್ವೆಯನ್ನು ಸಾಕಾರಕ್ಕೆ ತರುವ ಬಗೆ ಹೇಗೆ ಎಂಬ ವಿಚಾರದಲ್ಲಿ. ಪ್ರತಿ ಜನಪರ ಧರ್ಮ ಅಥವ ಸಿದ್ಧಾಂತಗಳೂ ಅದನ್ನು ಸಾಧ್ಯವಾದಷ್ಟು ವಾಸ್ತವದ ಹತ್ತಿರಕ್ಕೆ ತರುವ ಪ್ರಯತ್ನ ಮಾಡಿವೆ. ಅವು ಆಯಾಕಾಲಘಟ್ಟಗಳಲ್ಲಿ ಒಂದಷ್ಟು ಬದಲಾವಣೆ ತಂದಿವೆ, ಆದರೆ ಮತ್ತೊಂದು ಹಂತಕ್ಕೆ ಹೋಗಲಾರದೆ ಹಿನ್ನಡೆ ಅನುಭವಿಸಿವೆ. ನಂತರದ ಜನಪರ ಸಿದ್ಧಾಂತಗಳು ಅವನ್ನು ಮತ್ತಷ್ಟು ಬೆಳೆಸುವ ಪ್ರಯತ್ನ ಮಾಡಿವೆ. ಮಾರ್ಕ್ಸ್‌ವಾದವೆಂಬುದೂ ಸಹ ಇದೇ ಧಾರೆಯ ಮುಂದುವರಿಕೆಯಲ್ಲದೆ ಮತ್ತೇನೂ ಅಲ್ಲ. ಅದು ಸಾಪೇಕ್ಷಾರ್ಥದಲ್ಲಿ ಆಧುನಿಕವಾದ, ಕ್ರಾಂತಿಕಾರಿಯಾದ ಹಾಗೂ ವಸ್ತುಸ್ಥಿತಿಗೆ ಹತ್ತಿರವಾದ ಚಿಂತನೆಯಾಗಿರುವುದೇ ಅದರ ವಿಶೇಷ. ಆದರೆ ನಮ್ಮಲ್ಲಿ ಅನೇಕರು ಈ ಸಾಪೇಕ್ಷಾರ್ಥವನ್ನು ಮರೆತು ಅದನ್ನೂ ಸಹ ಲೋಪಗಳೇ ಇಲ್ಲದ ಅಂತಿಮ ಸತ್ಯದಂತೆ ಅರ್ಥಮಾಡಿಕೊಂಡಿವುದು ದುರಂತ.

ಒಂದು ಕಾಲದಲ್ಲಿ ಬುಡಕಟ್ಟು ಸಹಬಾಳ್ವೆಯನ್ನು ಹೊಂದಿದ್ದ ಸಮಾಜ ಅಸಮಾನವಾಗಿ ವಿಭಜಿತಗೊಂಡಾಗಿನಿಂದಲೂ ಅದನ್ನು ಸಮರ್ಥಿಸುವ ಹಾಗೂ ವಿರೋಧಿಸುವ ಮೌಲ್ಯಗಳು ಸಂಘರ್ಷ ನಡೆಸುತ್ತಾ ಬಂದಿವೆ. ಸಮಬಾಳ್ವೆಯನ್ನು ಪ್ರತಿಪಾದಿಸುವ ಧರ್ಮಗಳು, ಚಿಂತನೆಗಳು, ಸಿದ್ಧಾಂತಗಳು ಹುಟ್ಟುತ್ತಾ ಆಯಾ ಕಾಲದ ದುಷ್ಟತೆಯನ್ನು ವಿರೋಧಿಸುತ್ತಾ, ಸಹಬಾಳ್ವೆಯನ್ನು ಪ್ರೇರೇಪಿಸುತ್ತಾ ಬಂದಿವೆ. ಇವೆಲ್ಲವೂ ನಮ್ಮ ಪರಂಪರೆಯ ಭಾಗ ಅಥವ ನಾವು ಸಹ ಈ ಪರಂಪರೆಯ ಭಾಗ ಎಂಬ ಅರಿವು ಅಪಾರ ಸಂತೋಷವನ್ನು ಆತ್ಮವಿಶ್ವಾಸವನ್ನು ನನ್ನಲ್ಲಿ ಮೂಡಿಸಿತು. ಬಾಲ್ಯದಲ್ಲಿ ನನ್ನೊಳಗೆ ಸೂಫಿ ಚಿಂತನೆ ಮೂಡಿಸಿದ್ದ ಸಮಾನತೆಯ ಮೊಳಕೆಯನ್ನು, ನಂತರದ ಹೋರಾಟದ ಬದುಕು ಪೋಷಿಸಿದ್ದಷ್ಟೇ ಅಲ್ಲದೆ, ಜಗತ್ತಿನ ಸರ್ವ ಜೀವಪರ ಚಿಂತನೆಗಳಿಂದಲೂ ಕಲಿಯುತ್ತಾ ಜಗತ್ತಿನ ಸರ್ವ ಅಸಮಾನತೆಗಳ ವಿರುದ್ಧ ಕೊನೆ ಉಸಿರಿನ ತನಕ ಹೋರಾಡಬೇಕೆಂಬ ವಿಶ್ವಪ್ರೇಮವನ್ನು ಕಲಿಸಿತು ಎಂದು ಹೇಳಬೇಕು.

ಕುಟುಂಬ ಹಿನ್ನಲೆಗೆ ಹಿಂದಿರುಗುವುದಾದರೆ, ಮನೆಯಲ್ಲಿ ಬಿದ್ದ ಬುನಾದಿ ನನ್ನೊಳಗಿನ ಹೊಸ ಚಿಂತನೆಗೆ ಆಧಾರವಾಗಿ ಕೆಲಸ ಮಾಡಿದಂತೆಯೇ, ಅದೇ ವಾತಾವರಣ ಮನೆಯವರಿಗೂ ನನ್ನನ್ನು ಅರ್ಥಮಾಡಿಕೊಳ್ಳಲು ಸಹಕಾರಿಯಾಯಿತು. ನಾನು ಇಂಜಿನಿಯರಿಂಗ್ ಬಿಟ್ಟು, ಮನೆ ತೊರೆದು, ಎಲ್ಲೆಲ್ಲೋ ಕೆಲಸ ಮಾಡುತ್ತಾ, ಕೊನೆಗೆ ಮನೆ ಕಡೆ ತಲೆಹಾಕಲೂ ಸಾಧ್ಯವಿಲ್ಲದಂಥ ಅಜ್ಞಾತವಾಸದಲ್ಲಿ ಕೆಲಸ ಮಾಡುತ್ತಿದ್ದರೂ ನನ್ನ ಅಮ್ಮ ನಾನು ಆಯ್ದುಕೊಂಡ ಮಾರ್ಗವನ್ನು ವಿರೋಧಿಸಿದ ಒಂದು ಸಂದರ್ಭವೂ ನನಗೆ ಜ್ಞಾಪಕವಿಲ್ಲ. ಒಳ್ಳೆ ಕೆಲಸವನ್ನೇ ಮಾಡುತ್ತಿದ್ದಾನೆ ಮಾಡಲಿ ಎಂಬುದಷ್ಟೆ ಅವರ ನಿಲುವು. ಒಮ್ಮೆ ಆಕಸ್ಮಿಕವಾಗಿ ಸಿಕ್ಕ ಉರ್ದು ಭಾಷೆಯಲ್ಲಿದ್ದ 'ತಾಯಿ' ಕಾದಂಬರಿಯನ್ನು ಅಮ್ಮನಿಗೆ ಕೊಟ್ಟು ಕಳುಹಿಸಿದ್ದೆ. ಅದಾದ ಎಷ್ಟೋ ವರ್ಷಗಳ ನಂತರ ಭೇಟಿಯಾದಾಗ ಅಮ್ಮ ನನ್ನ ಕೈ ಹಿಡಿದು ಅಳತೊಡಗಿದರು. "ನನ್ನಿಂದ ಆ ತಾಯಿಯಂತೆ ಆಗಲು ಸಾಧ್ಯವಿಲ್ಲವಪ್ಪ" ಎಂದು ದುಃಖಿಸತೊಡಗಿದರು. "ಏಕಮ್ಮ, ನೀವು ಯಾವ ರೀತಿಯಲ್ಲಿ ಕಡಿಮೆ ಇದ್ದೀರಿ?" ಎಂದು ಕೇಳಿದೆ. "ಮಗನಿಗಾಗಿ ಹೋರಾಟಕ್ಕೆ ಬಂದ ಆಕೆ, ಬರಬರುತ್ತಾ ಮಗನನ್ನು ಕಳೆದುಕೊಂಡರೂ ಬಿಡದೆ ತಾನೇ ಒಬ್ಬ ಹೋರಾಟಗಾರ್ತಿಯಾಗಿಬಿಡುತ್ತಾಳೆ. ಮನೆಬಿಟ್ಟು ಹೋರಾಟಕ್ಕೆ ಬರುವಷ್ಟು ಶಕ್ತಿ ನನ್ನಲ್ಲಿಲ್ಲ" ಎಂದು ಮತ್ತೆ ಅಳತೊಡಗಿದರು. ನಾನು ದಿಗ್ಭ್ರಾಂತನಾಗಿದ್ದೆ, ಅಮ್ಮನನ್ನು ಸಂತೈಸಲು ನನ್ನಲ್ಲಿ ಮಾತುಗಳಿರಲಿಲ್ಲ. ಅಂದಿನಿಂದ ಅವರು ಹೋಗುವ ತನಕ ಪ್ರತಿ ತಿಂಗಳು ತಮ್ಮ ಕೈಖರ್ಚಿಗೆ ಸಿಗುವ ಹಣದಲ್ಲಿ ಒಂದಿಷ್ಟನ್ನು ದೇವರಿಗೆ ಮುಡಿಪು ಎತ್ತಿಡುವಂತೆ ಎತ್ತಿಡುತ್ತಿದ್ದರು. ನಮ್ಮವರ್‍ಯಾರಾದರೂ ಸಿಕ್ಕಾಗ ಎಲ್ಲವನ್ನೂ ಕಳುಹಿಸಿಕೊಡುತ್ತಿದ್ದರು.

ಸೂಫಿ ಹಿನ್ನಲೆಯ ಕಾರಣಕ್ಕೋ ಏನೋ ನನಗೆ ಹತ್ತಿರವಿದ್ದ ಎಲ್ಲಾ ಬಂಧುಗಳು ಸಹ ನನ್ನ ತೀರ್ಮಾನದ ಜೊತೆಗಿದ್ದರು. ಆದರೆ ತಂದೆಯ ವಿಚಾರದಲ್ಲಿ ಮಾತ್ರ ಹೀಗಾಗಲಿಲ್ಲ. ಸಮಾಜಕ್ಕಾಗಿಯೇ ಸಂಪೂರ್ಣವಾಗಿ ದುಡಿಯುವ ನನ್ನ ತೀರ್ಮಾನವನ್ನು ಅವರು ಒಪ್ಪಿಕೊಳ್ಳಲಿಲ್ಲ. ನನ್ನ ಜೊತೆ ಮುನಿಸಿಕೊಂಡಂತೆಯೇ ಇರುತ್ತಿದ್ದರು. ನಾನು ಮಾತನಾಡಿಸಿದರೂ ಎಷ್ಟುಬೇಕೋ ಅಷ್ಟೆ ಮಾತನಾಡುತ್ತಿದ್ದರು. ಇದು ನನ್ನೊಳಗಿನ ದೊಡ್ಡ ನೋವಾಗಿ ಉಳಿದುಕೊಂಡುಬಿಟ್ಟಿತ್ತು. ಬಹುಶಃ ನನಗಿಂತ ಎಷ್ಟೋ ಪಟ್ಟು ಹೆಚ್ಚಿನ ನೋವನ್ನು ಅವರು ಅನುಭವಿಸುತ್ತಿದ್ದಿರಬಹುದು. ಹಾಗೆ ನೋಡಬೇಕೆಂದರೆ ನಾನು ಅವರ ಅತ್ಯಂತ ಮುದ್ದಿನ ಮಗ. ನನ್ನ ಕುರಿತು ಏನೆಲ್ಲಾ ಕನಸು ಕಂಡಿದ್ದರೋ ಏನೋ. ಅವರ ಕನಸನ್ನು ಭಗ್ನಗೊಳಿಸಿದ್ದನ್ನು ಅವರು ಸಹಿಸಿಕೊಳ್ಳದೇಹೋಗಿರಬಹುದು ಅನಿಸುತ್ತದೆ. ಆದರೆ ಅವರ ಜೀವನದ ಕೊನೆಯಲ್ಲಿ ಅಮ್ಮನಂತೆಯೇ ಅವರು ಸಹ ಒಂದು ಶಾಕ್ ಅನ್ನು ನನಗೆ ಕೊಟ್ಟರು. ಅವರು ತೀರಿಕೊಳ್ಳುವ ಕೆಲವೇ ತಿಂಗಳ ಮೊದಲು ಅವರಿಂದ ನನಗೊಂದು ಪತ್ರ ಬಂತು. ಅದು ಹೀಗಿತ್ತು:

"ಪ್ರೀತಿಯ ಪಾಷ,


ನೀನು ಮಾಡುತ್ತಿರುವ ಕೆಲಸ ಉತ್ತಮವಾಗಿದೆ. ಇನ್ನು ಮುಂದೆಯೂ ಸಹ ನಿನ್ನ ಆತ್ಮಕ್ಕೆ ಸರಿಯೆನಿಸುವ ಕೆಲಸವನ್ನೇ ಮಾಡುತ್ತ ಸಂತೋಷವಾಗಿರು. ನನ್ನ ಕಡೆಯಿಂದ ನಿನ್ನ ಬಗ್ಗೆ ಯಾವ ಕೆಟ್ಟ ಅಭಿಪ್ರಾಯವೂ ಇಲ್ಲ, ನಿನ್ನ ಕೆಲಸ ಮೆಚ್ಚುವಂತಿದೆ, ಎಲ್ಲಿದ್ದರೂ ಸುಖವಾಗಿರು.

ನಾನು ಚೆನ್ನಾಗಿದ್ದೇನೆ. ಬಾಯಲ್ಲಿ ಹಲ್ಲಿಲ್ಲ, ಕಿವಿಯಲ್ಲಿ ಹೊಸ ಮಿಷಿನ್‌ಗಳು, ಕನ್ನಡಕ ಕಣ್ಣಿಗೆ. ಡೂಪ್ಲಿಕೇಟ್ ಮ್ಯಾನ್ ಆಗಿದ್ದೇನೆ, ಒರಿಜಿನ್ಯಾಲಿಟಿ ಇಲ್ಲ.

ನಿನ್ನ,

(ಸಹಿ - ಅಬ್ದುಲ್ ಮುನಾಫ್ ಸಾಬ್)"


ಕಣ್ಣಲ್ಲಿ ನೀರು ಸುರಿಯುತ್ತಿತ್ತು, ಬದುಕು ಧನ್ಯ ಎನಿಸಿತ್ತು.



■ ನೂರ್ ಶ್ರೀಧರ್

ಗಾಳ

ಬಾ ಗಿಳಿಯೆ
ಬಳಿಗೆ ಬಾ
ಹೇಳಬೇಕಿದೆ ಗುಟ್ಟು
ಕೇಳು ಕಿವಿಗೊಟ್ಟು




ಸಣ್ಣ ಸಡಗರದ
ಗುಡುಗು ಮಿಂಚು
ಹೊಯ್ಯುವಂತಿ ಮಳೆ
ಇಳೆಯೊಳಗೆ ತಳಮಳ

ಸೋನೆ ಸೊಕ್ಕಿದಂತೆ
ಭಟ್ಟರ ಕೊಟ್ಟಿಗೆಯಲ್ಲಿ
ಮುಲುಕಾಟದ ಮುದ
ಮಜ್ಜೆ ತಂಬ್ಳಿ ದನ
ಮಗ್ಗಲು ಬದಲಿಸಿದ ದನಿ
ಮೀನ್ ಹಳ್ಳಿ ಹೋರಿ
ಹಾರಾಟ

ಅರೆರೆ!! ಬಿಗಿತಕ್ಕಲ್ಲಿದೆ
ಜಾತಿ-ಜನಿವಾರ ಭೀತಿ
ಆಗಿಲ್ಲ ಎಂಥದೂ ಮೈಲಿಗೆ
ಕಚ್ಚೆ ಮಡ್ಡಿಗೆ ಬರಬಹುದಾ
ತಾರ್ಲೆ ಹುಗ್ಗದ ರುಚಿ?

ಶುದ್ಧೀಕರಣಕ್ಕಂತೂ
ಇದ್ದೇಯಿದೆ ದಾರಿ



ಕುಶಮಾಂಡ ಹೋಮ
ಒಂದೊಂದು ಕ್ರಿಯೆಗೂ
ಪ್ರತಿಕ್ರಿಯೆಯ ನೇಮ
ಹೇಳೋದು ವೇದಾಂತ
ಹಾಕೋದು ಗಾಳ

ಹೇಳು, ಗಿಳಿಯೇ ಹೇಳು
ಅರ್ಥವಾಯ್ತಲ್ಲವಾ?
ಮಡಿಯಡಿ ಅಡಗಿದ
ಉಪ್ಪು-ಚಪ್ಪೆ
ಹುಳಿ-ಖಾರದ ಹಾಡು
ಅನರ್ಥವೇನೂ
ಇದಲ್ಲ, ಬಿಡು.




■ ವಿವೇಕಾನಂದ ತಾಂಡೇಲ

* ತಾರ್ಲೆ-ಅಗ್ಗದ ಸ್ವಾದಿಷ್ಟ ಮೀನು * ಕಚ್ಚೆ ಮಡ್ಡಿ- ಹಪ್ಪಳದ ವಿಶಿಷ್ಟ ಸಿಹಿ ತಿಂಡಿ

ಮಣ್ಣಿನ ಪರಂಪರೆಗಳ ರಕ್ಷಣೆ ಇಂದಿನ ಅಗತ್ಯ: ದಾದಾಪೀರ್ ಮಂಜರ್ಲಾ

ಸಂದರ್ಶನ

■ ಕೆ.ಬಿ.ಕಟ್ಟಿ



ಕರ್ನಾಟಕ ಸರ್ಕಾರದಿಂದ ಮೊನ್ನೆ ರಾಜ್ಯೋತ್ಸವ ಪ್ರಶಸ್ತಿ ಸ್ವೀಕರಿಸಿದ ಐವತ್ತೊಂಬತ್ತು ಗಣ್ಯರ ಪಟ್ಟಿ ಟೀಕೆ, ವಿಮರ್ಶೆ ಮತ್ತು ಆರೋಪಗಳಿಂದ ಬಹುತೇಕ ಮುಕ್ತವಾಗಿತ್ತು, ಅದಕ್ಕೆ ಪ್ರಧಾನ ಕಾರಣ ಯಾವುದೇ ಲಾಬಿಗೆ ಮಣಿಯದೆ ಕೇವಲ ಅರ್ಹತೆಯ ಆಧಾರದ ಮೇಲೆ ಯೋಗ್ಯ ಜನರನ್ನು ಆಯ್ಕೆ ಮಾಡಿ ಪ್ರಶಸ್ತಿಯನ್ನು ಕೊಟ್ಟಿದ್ದು. ಆ ಪಟ್ಟಿಯಲ್ಲಿ ರಾಯಚೂರಿನ ತತ್ವಪದ ಹಾಡುಗಾರ ದಾದಾಪೀರ್ ಮಂಜರ್ಲಾ ಕೂಡ ಇದ್ದರು.


ಮೂಲತಃ ಇಸ್ಲಾಂ ಅನುಯಾಯಿಯಾದ ಅವರು ಆಯ್ದುಕೊಂಡದ್ದು ಹಿಂದೂ ಧಾರ್ಮಿಕ ಸಾಹಿತ್ಯದ ಭಾಗವೆಂದು ಪರಿಗಣಿಸಲಾಗಿರುವ ಕನ್ನಡದ ತತ್ವಪದ, ಕೀರ್ತನೆ, ವಚನಗಳ ಹಾಡುಗಾರಿಕೆಯನ್ನು. ಐವತ್ತೆರಡು ವರ್ಷ ವಯಸ್ಸಿನ ದಾದಾಪೀರ್ ಮೂಲತಃ ರಾಯಚೂರು ಜಿಲ್ಲೆಯ ಮಂಜರ್ಲಾ ಹಳ್ಳಿಯವರು. ಅವರ ತಂದೆ ಖಾದರ್ ವಲಿ ಕೂಡ ತತ್ವಪದ ಹಾಡುಗಾರರು ಹಾಗೂ ರಚನೆಕಾರರೂ ಆಗಿದ್ದರು. ಪ್ರೀತಿ, ಪ್ರೇಮ, ಸಾಮರಸ್ಯ, ಶಾಂತಿ, ಸಹಬಾಳ್ವೆ, ಪರೋಪಕಾರಗಳಂತಹ ಉದಾತ್ತ ಮೌಲ್ಯಗಳನ್ನು ಪ್ರತಿಪಾದಿಸುವ ಕನ್ನಡದ ತತ್ವಪದ, ದಾಸರ ಕೀರ್ತನೆ, ವಚನಗಳನ್ನು ಸೊಗಸಾಗಿ ಹಾಡುತ್ತಾ ಬಯಲುಸೀಮೆಯ ಹಳ್ಳಿಗಳಲ್ಲಿ ಸುಪ್ರಸಿದ್ಧವಾಗಿದ್ದ ಖಾದರ್ ವಲಿಯವರು ಜನಸಾಮಾನ್ಯರ ಪಾಲಿಗೆ ಖಾದರ್ ದಾಸ ಹಾಗೂ ಖಾದರ್ ಪ್ರಭು ಎಂದೇ ಪ್ರಸಿದ್ಧರಾಗಿದ್ದವರು. ಮುಸ್ಲಿಂ ಧರ್ಮೀಯರಾಗಿದ್ದ ವಲಿ ಅವರಿಗೆ ಸಂಗೀತ ಕಲಿಸಿಕೊಟ್ಟ ಗುರುಗಳು ಹಿಂದೂ ಧರ್ಮೀಯರಾಗಿದ್ದರು. "ಹಿಂದೂ ಧರ್ಮವನ್ನು ಅರಿ, ಮುಸ್ಲಿಮನಾಗಿ ಮುಂದುವರಿ" ಎಂದು ತಮ್ಮ ಗುರುಗಳು ಹೇಳಿದ್ದನ್ನೇ ವಲಿಯವರು ಪಾಲಿಸಿದರು. ಅದನ್ನೇ ತನ್ನ ಮಗ ದಾದಾಪೀರ್‌ಗೂ ಹೇಳಿದರು. ತಂದೆ ಹಾಕಿಕೊಟ್ಟ ಮಾರ್ಗದಲ್ಲಿ ತಾನು ನಡೆಯುತ್ತಿರುವುದಾಗಿ ದಾದಾಪೀರ್ ಹೇಳುತ್ತಾರೆ.

ಬಾಲ್ಯದಿಂದಲೇ ತಂದೆಯೊಡಗೂಡಿ ತತ್ವಪದಗಳನ್ನು ಹಾಡುತ್ತಾ ಬಯಲುಸೀಮೆಯ ಹಳ್ಳಿಹಳ್ಳಿಗಳನ್ನು ಸುತ್ತುತ್ತಾ ಬಂದಿರುವ ದಾದಾಪೀರ್ ತನ್ನ ಇಡೀ ಬದುಕನ್ನು ತತ್ವಪದ ಪರಂಪರೆಯನ್ನು ಉಳಿಸಿ, ಬೆಳೆಸುವುದಕ್ಕಾಗಿ ಮುಡುಪಿಟ್ಟಿದ್ದಾರೆ. ಬಾಯಿ ತೆರೆದರೆ ಶಿಶುನಾಳ ಷರೀಫ, ನಿಜಗುಣ ಆರ್ಯ, ಸೊಪ್ಪಣ್ಣಾರ್ಯರ ತತ್ವಪದಗಳು, ಪುರಂದರದಾಸ, ಕನಕದಾಸ, ರಾಮದಾಸರ ಕೀರ್ತನೆಗಳು, ಬಸವಣ್ಣ, ಅಕ್ಕಮಹಾದೇವಿ, ಅಲ್ಲಮರ ವಚನಗಳು ನೀರಿನ ಝರಿಯಂತೆ ಹರಿದುಬರುತ್ತವೆ. ಈ ರಚನೆಗಳನ್ನು ಹಿಂದೂಸ್ತಾನಿ ಶಾಸ್ತ್ರೀಯ ಶೈಲಿಯಲ್ಲಿ ಹಾಡುವುದು ಅವರ ವಿಶೇಷ. ತತ್ವಪದ, ಕೀರ್ತನೆ, ವಚನಗಳ ಜೀವನಮೌಲ್ಯಗಳು ಜನರಿಗೆ ತಲುಪಬೇಕಾದರೆ ಅವುಗಳನ್ನು ಸುಮಧುರ ಸಂಗೀತದೊಂದಿಗೆ ಮೇಳೈಸಿ ಉಣಬಡಿಸಬೇಕು ಎಂಬ ಚಿಂತನೆಯೊಂದಿಗೆ ದಾದಾಪೀರ್ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತವನ್ನು ಕಲಿತಿದ್ದಾರೆ. 1987ರಿಂದ ಮೊದಲುಗೊಂಡು ಸುಮಾರು ಹತ್ತು ವರ್ಷಗಳ ತನಕ ಬೆಂಗಳೂರಿನ ಉಭಯ ಗಾನ ವಿದೂಷಿ ಡಾ. ಶ್ಯಾಮಲಾ ಜಿ ಭಾವೆ ಅವರಲ್ಲಿ ಸಂಗೀತಾಭ್ಯಾಸ ಮಾಡಿದ್ದಾರೆ. "ನಮ್ಮ ತಂದೆಯ ನಂತರ ಶಾಸ್ತ್ರೀಯ ಸಂಗೀತ ಕ್ಷೇತ್ರದಲ್ಲಿನ ನನ್ನ ಆರಂಭಿಕ ಪಯಣವನ್ನು ನಿರ್ದೇಶಿಸಿದ್ದು ಶ್ಯಾಮಲಾ ಭಾವೆಯವರೇ. ಮೂಲತಃ ಬ್ರಾಹ್ಮಣ ಕೌಟುಂಬಿಕ ಹಿನ್ನೆಲೆಯ ಶ್ಯಾಮಲಾ ಭಾವೆಯವರು ನನ್ನನ್ನು ತಮ್ಮ ಪರಿಶುದ್ಧವಾದ ಪ್ರೀತಿಯಿಂದ ತಮ್ಮ ಮಗನಂತೆಯೇ ಕಂಡರು" ಎಂದು ದಾದಾಪೀರ್ ಕಣ್ತುಂಬಿ ನೆನೆಯುತ್ತಾರೆ.

ಈಗ ಕಳೆದ ಏಳು ವರ್ಷಗಳಿಂದ ಕೊಲ್ಕತ್ತಾದ ಸುಪ್ರಸಿದ್ಧ ಹಿಂದೂಸ್ತಾನಿ ಸಂಗೀತ ಮಾಂತ್ರಿಕ ಉಸ್ತಾದ್ ರಶೀದ್ ಖಾನ್ ಅವರಲ್ಲಿ ಸಂಗೀತಾಭ್ಯಾಸ ಮಾಡುತ್ತಿದ್ದಾರೆ. ಮೂರು ತಿಂಗಳಿಗೊಮ್ಮೆ ಕೊಲ್ಕತ್ತಾಕ್ಕೆ ಹೋಗಿ ಒಂದು ತಿಂಗಳು ಅಲ್ಲೇ ಉಳಿದು ಸಂಗೀತಾಭ್ಯಾಸ ಮಾಡಿ ವಾಪಾಸು ಬರುತ್ತಾರೆ. "ಈ ಕಡೆಯಿಂದ ಟ್ರೇನ್ ಚಾರ್ಜ್ ನಾನು ಹಾಕಿಕೊಳ್ಳುತ್ತೇನೆ, ಆ ಕಡೆಯಿಂದ ನಮ್ಮ ಗುರುಗಳು ವಿಮಾನದಲ್ಲಿ ಕಳಿಸುತ್ತಾರೆ. ನನ್ನಿಂದ ಅವರಿಗೇನೂ ಲಾಭವಿಲ್ಲದಿದ್ದರೂ ಅವರೇ ಪ್ರಯಾಣದ ವೆಚ್ಚ ಭರಿಸಿ ಸಂಗೀತ ಕಲಿಸುತ್ತಾರೆ. ಅಂತಹ ಗುರುಗಳನ್ನು ಪಡೆದ ನಾನು ನಿಜಕ್ಕೂ ಅತ್ಯಂತ ಅದೃಷ್ಟಶಾಲಿ" ಅಂತ ದಾದಾಪೀರ್ ತಮ್ಮ ಗುರುಗಳ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಇಲ್ಲಿಯತನಕ ರಾಜ್ಯಾದ್ಯಂತ ಮತ್ತು ಹೊರರಾಜ್ಯಗಳಲ್ಲೂ ದಾದಾಪೀರ್ ಸಾವಿರಾರು ಕಾರ್ಯಕ್ರಮಗಳಲ್ಲಿ ತತ್ವಪದಗಳನ್ನು ಹಾಡಿದ್ದಾರೆ. ತಾವು ಹಾಡಿದ ಸುಮಾರು 1700 ಹಾಡುಗಳನ್ನೊಳಗೊಂಡ ಒಟ್ಟು 145ಕ್ಕೂ ಹೆಚ್ಚು ಕ್ಯಾಸೆಟ್‌ಗಳನ್ನು ಹೊರತಂದಿದ್ದಾರೆ. ಸ್ವತಃ ನೂರಕ್ಕೂ ಹೆಚ್ಚು ತತ್ವಪದಗಳನ್ನು ರಚಿಸಿದ್ದಾರೆ ಕೂಡ. ಮೂರು ಹಿಂದೂ ಧಾರ್ಮಿಕ ಕೃತಿಗಳನ್ನು ತೆಲುಗಿನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಇನ್ನೊಂದರ ಅನುವಾದ ಕಾರ್ಯ ಪ್ರಗತಿಯಲ್ಲಿದೆ. ಸಮಯ ಸಿಕ್ಕಾಗಲೆಲ್ಲಾ ವಚನಗಳು, ವೇದಗಳು, ರಾಮಾಯಣ, ಮಹಾಭಾರತ, ಭಗವದ್ಗೀತೆ, ಖುರಾನ್ ಮತ್ತು ಇನ್ನಿತರ ಧಾರ್ಮಿಕ ಸಾಹಿತ್ಯಗಳನ್ನು ಅಧ್ಯಯನ ಮಾಡುವುದು ಅವರ ಹವ್ಯಾಸ.

1993ರಲ್ಲಿ ಟಿ. ಸುಬ್ರಮಣಿ ರೆಡ್ಡಿ ನಿರ್ಮಾಣದಲ್ಲಿ ಜಿ.ವಿ. ಅಯ್ಯರ್ ನಿರ್ದೇಶಿಸಿದ "ಭಗವದ್ಗೀತಾ" ಎಂಬ ಸಂಸ್ಕೃತ ಚಲನಚಿತ್ರದಲ್ಲಿ 13 ಶ್ಲೋಕಗಳನ್ನು ಹಾಡಿದ ನಾಲ್ಕು ಗಾಯಕರ ತಂಡದಲ್ಲಿ ದಾದಾಪೀರ್ ಮಂಜರ್ಲಾ



ಕೂಡ ಒಬ್ಬರಾಗಿದ್ದರು.

ಪಾಶ್ಚಾತ್ಯ ಸಂಗೀತದ ಅರ್ಭಟದಲ್ಲಿ ಈ ನೆಲದ ಮಣ್ಣಿನ ಸಂಗೀತ ಪರಂಪರೆಗಳು ಮೂಲೆಗುಂಪಾಗಿರುವ ಬಗ್ಗೆ ಆತಂಕ ವ್ಯಕ್ತಪಡಿಸುವ ದಾದಾಪೀರ್ ಅವರು ತತ್ವಪದ, ಜಾನಪದ ಪರಂಪರೆಗಳನ್ನು ಉಳಿಸಿ ಬೆಳೆಸುವುದಕ್ಕಾಗಿ ಸಮಷ್ಟಿ ಪ್ರಯತ್ನಗಳ ಅಗತ್ಯತೆಯ ಬಗ್ಗೆ ಒತ್ತಿ ಹೇಳುತ್ತಾರೆ. "ನನಗೆ ಸಂದಿರುವ ರಾಜ್ಯೋತ್ಸವ ಪ್ರಶಸ್ತಿ ಈ ನಿಟ್ಟಿನಲ್ಲಿ ನನ್ನ ಜವಾಬ್ದಾರಿಯನ್ನು ಇನ್ನಷ್ಟು ಹೆಚ್ಚಿಸಿದೆ" ಎಂದು ಅವರು ಅಭಿಪ್ರಾಯಪಡುತ್ತಾರೆ.

ಧರ್ಮ, ಜಾತಿಗಳ ಹೆಸರಿನಲ್ಲಿ ಸಮಾಜದ ಶಾಂತಿಯನ್ನು ಕದಡುವ ಪ್ರಯತ್ನಗಳು ಜೋರಾಗಿ ನಡೆಯುತ್ತಿರುವ ಈ ಹೊತ್ತಿನಲ್ಲಿ ಪ್ರೀತಿ, ಪ್ರೇಮ, ಶಾಂತಿ, ಸಾಮರಸ್ಯ ಸಹಬಾಳ್ವೆಗಳಂತಹ ಮೌಲ್ಯಗಳನ್ನು ಪ್ರತಿಪಾದಿಸುವ ರಚನೆಗಳನ್ನು ಸುಶ್ರಾವ್ಯ ಸಂಗೀತದ ಮೂಲಕ ಯುವಪೀಳಿಗೆಗೆ ಉಣಬಡಿಸುವ ಮೂಲಕ ಸಮಾಜದ ಶಾಂತಿ-ಸಹಬಾಳ್ವೆಗಳನ್ನು ಪುನರ್‌ಸ್ಥಾಪಿಸಬಹುದು ಎಂದು ದಾದಾಪೀರ್ ಬಲವಾಗಿ ನಂಬಿದ್ದಾರೆ. ಪಿ.ಲಂಕೇಶ್ ಅವರ 80ನೇ ಜನ್ಮದಿನೋತ್ಸವ ಹಾಗೂ 'ಗೌರಿ ಲಂಕೇಶ್' ಪತ್ರಿಕೆಯ 10ನೇ ವಾರ್ಷಿಕೋತ್ಸವದ ಅಂಗವಾಗಿ ಹೊರಬರುತ್ತಿರುವ ವಿಶೇಷಾಂಕಕ್ಕಾಗಿ ನಡೆಸಿದ ಅವರ ಸಂದರ್ಶನದ ಆಯ್ದ ಭಾಗ ಇಲ್ಲಿದೆ.

** ಮೊಹಮ್ಮದೀಯ ಕುಟುಂಬದಲ್ಲಿ ಹುಟ್ಟಿದ ತಾವು ತತ್ವಪದದ ಕಡೆ ಆಕರ್ಷಿತರಾಗಿದ್ದು ಹೇಗೆ?*

ನಮ್ಮ ತಂದೆಯವರೂ ತತ್ವಪದ ಹಾಡುಗಾರರಾಗಿದ್ದರು. ಅವರ ಗುರುಗಳು ಹಿಂದೂಗಳಾಗಿದ್ದರು. ಪ್ರಾಯಶಃ ಆ



ಪ್ರಭಾವದಿಂದ ಅವರು ತತ್ವಪದ ಹಾಡುಗಾರಿಕೆ ಶುರು ಮಾಡಿದರು. ನಮ್ಮ ತಂದೆಯ ಪ್ರಭಾವ ಸಹಜವಾಗಿ ನನ್ನ ಮೇಲೆ ಆಗಿದೆ. ನಾನು ಚಿಕ್ಕ ಬಾಲಕನಾಗಿದ್ದಾಗಿನಿಂದಲೂ ಅಪ್ಪನ ಜೊತೆಗೂಡಿ ಹಳ್ಳಿಹಳ್ಳಿಗಳಲ್ಲಿ ತತ್ವಪದಗಳನ್ನು ಹಾಡುತ್ತಾ ನಾಡಿನ ಗ್ರಾಮೀಣ ಪ್ರದೇಶಗಳನ್ನು ಸುತ್ತಿದ್ದೇನೆ. ಅವರು ತತ್ವಪದ ರಚನೆಕಾರರೂ ಹೌದು, ಹಾಡುಗಾರರೂ ಹೌದು. ಆಧುನಿಕ ಸಂಗೀತ ವಾದ್ಯಗಳು, ಆಧುನಿಕ ಸೌಂಡ್ ಸಿಸ್ಟಮ್‌ಗಳು ಇರದಿದ್ದ ಆ ಕಾಲದಲ್ಲಿ ನಮ್ಮ ತಂದೆ ದಣಿವರಿಯದೇ ಏಕತಾರಿ ವಾದ್ಯವನ್ನೊಂದೇ ಇಟ್ಟುಕೊಂಡು ಹಳ್ಳಿಗಳನ್ನು ಸುತ್ತುತ್ತಾ ಜನಸಮೂಹಗಳಲ್ಲಿ ಭಾವೈಕ್ಯತೆಯನ್ನು ಗಟ್ಟಿಗೊಳಿಸುವ ಹಾಡುಗಳನ್ನು ಮನತುಂಬಿ ಹಾಡುತ್ತಿದ್ದರು. ತತ್ವಪದಗಳ ಮೂಲಕ ಭಾವೈಕ್ಯತೆಯನ್ನು ಜನರಲ್ಲಿ ಬಿತ್ತುತ್ತಿದ್ದರು. ಅವರು 1975ರಲ್ಲಿ ಮರಣ ಹೊಂದುವ ತನಕವೂ ನಾನು ಅವರೊಂದಿಗೆ ಹಳ್ಳಿಗಳನ್ನು ಸುತ್ತಿದ್ದೇನೆ. ಅವರ ಬದುಕು ಮತ್ತು ಸಾಧನೆ ನನ್ನ ಭವಿತವ್ಯ ನಿರ್ಮಾಣದಲ್ಲಿ ಬಹುಮುಖ್ಯ ಪಾತ್ರ ವಹಿಸಿದೆ.

ತತ್ವಪದಗಳ ಮೂಲ ಸಾರವನ್ನು ಗಮನಿಸಿದರೆ ಅವು ಯಾವುದೇ ಒಂದು ಧರ್ಮಕ್ಕೆ ಅಥವಾ ಯಾವುದೇ ಒಂದು ಜಾತಿಗೆ ಸೀಮಿತವಾಗಿಲ್ಲ ಎಂಬುದು ಅರಿವಾಗುತ್ತದೆ. ಮೂಲತಃ ಪ್ರೀತಿ, ಪ್ರೇಮ, ಶಾಂತಿ, ಸಾಮರಸ್ಯ ಹಾಗೂ ಸಹಬಾಳ್ವೆಗಳೇ ಅವುಗಳ ತಿರುಳು. ಈ ಜೀವನಮೌಲ್ಯಗಳನ್ನು ಪ್ರತಿಪಾದಿಸುವ ತತ್ವಪದಗಳನ್ನು ಒಂದು ಧಾರ್ಮಿಕ ಚೌಕಟ್ಟಿನೊಳಗೆ ಸೀಮಿತಗೊಳಿಸುವುದು ಸಾಧ್ಯವಿಲ್ಲ. ನಮ್ಮನ್ನು ನಾವು ಅರಿಯುವುದಕ್ಕೆ, ನಾವು ನಾವಾಗಿ ಬಾಳುವುದಕ್ಕೆ, ನಾವು ನಮ್ಮ ಕರ್ತವ್ಯಗಳನ್ನು ಮಾಡುವುದಕ್ಕೆ ನಮ್ಮನ್ನು ಅವು ಪ್ರೇರೇಪಿಸುತ್ತವೆ. ಕಷ್ಟದಲ್ಲಿರುವವರಿಗೆ ಕೈಲಾದ ಸಹಾಯ ಮಾಡುವುದೇ ನೈಜಧರ್ಮ ಎಂದು ಪ್ರತಿಪಾದಿಸುತ್ತವೆ. ಅವು ಕೇವಲ ಭಗವಂತನನ್ನು ಸ್ತುತಿಸುವ ಪದ್ಯಗಳಲ್ಲ, ಜೀವನ ಮೌಲ್ಯಗಳನ್ನು ಬೋಧಿಸುವ ಮಾರ್ಗದರ್ಶಿಗಳು.

** ಕರ್ನಾಟಕದಲ್ಲಿ ತತ್ವಪದ ಪರಂಪರೆ ಯಾವ ಸ್ಥಿತಿಯಲ್ಲಿದೆ?*

ಬೇರೆ ರಾಜ್ಯಗಳಿಗೆ ಹೋಲಿಸಿದರೆ ಇಲ್ಲಿ ತತ್ವಪದ ಪರಂಪರೆ ದಟ್ಟವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಸಾಕಷ್ಟು ಸಂಖ್ಯೆಯ ತತ್ವಪದ ಹಾಡುಗಾರರು ಈಗಲೂ ನಮಗೆ ಸಿಗುತ್ತಾರೆ. ಆದರೆ, ಅವರಿಗೆ ಸರಿಯಾದ ವೇದಿಕೆಗಳು ಸಿಗುತ್ತಿಲ್ಲ, ಹಾಗಾಗಿ, ತೆರೆಮರೆಯಲ್ಲೇ ಉಳಿದುಬಿಟ್ಟಿದ್ದಾರೆ. ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಸಮಾವೇಶವೊಂದರಲ್ಲಿ ನಾಡಿನ ಮೂಲೆಮೂಲೆಗಳಿಂದ ತತ್ವಪದ ಹಾಡುಗಾರರು ಬಂದಿದ್ದರು. ಇಷ್ಟೊಂದು ಜನ ಹಾಡುಗಾರರು ಇದ್ದಾರೆ ಎಂಬ ಪರಿಕಲ್ಪನೆ ನನಗೂ ಇರಲಿಲ್ಲ. ಇನ್ನೊಂದು ವಿಶೇಷ ಎಂದರೆ, ಎಲ್ಲರೂ ಒಂದೇ ರೀತಿಯ ಹಾಡುಗಾರರಲ್ಲ, ಒಬ್ಬೊಬ್ಬರು ಒಂದೊಂದು ರೀತಿ ಧಾಟಿಯಲ್ಲಿ ಹಾಡುತ್ತಾರೆ. ತತ್ವಪದ ರಚನೆಕಾರರೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಈ ಪರಂಪರೆ ಅಳಿದೇಹೋಯಿತು ಎಂಬ ಆತಂಕ, ನಿರಾಶೆಯಲ್ಲಿದ್ದ ನಮಗೆ ಅವರನ್ನೆಲ್ಲಾ ನೋಡಿ ಒಂದಿಷ್ಟು ಸಮಾಧಾನ ಆಯಿತು.

** ತತ್ವಪದ ಪರಂಪರೆಗೆ ಭವಿಷ್ಯ ಇದೆಯಾ?*

ಬದಲಾಗುತ್ತಿರುವ ಕಾಲಘಟ್ಟದಲ್ಲಿ, ಬದಲಾಗುತ್ತಿರುವ ಅಭಿರುಚಿಗಳನ್ನು ಗಮನಿಸಿದರೆ ತತ್ವಪದ ಪರಂಪರೆಗೆ ಭವಿಷ್ಯ ಇಲ್ಲ ಎನ್ನಿಸುತ್ತದೆ. ಇನ್ನಿತರ ಎಲ್ಲಾ ದೇಶಿ ಪರಂಪರೆಗಳಂತೆಯೇ ಇದೂ ಕೂಡ ಆಧುನಿಕ ಅಬ್ಬರದಲ್ಲಿ ನಿಧಾನವಾಗಿ ತೆರೆಮರೆಗೆ ಸರಿಯುತ್ತಿದೆ. ಅದನ್ನು ಪ್ರಜ್ಞಾಪೂರ್ವಕ ಪ್ರಯತ್ನಗಳ ಮೂಲಕ ಉಳಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ತತ್ವಪದ ಹಾಡುಗಾರರು ಹಾಗೂ ರಚನೆಕಾರರ ಮೇಲೆ ಇನ್ನೂ ಹೆಚ್ಚಿನ ಜವಾಬ್ದಾರಿಯಿದೆ. ಯುವಪೀಳಿಗೆಯನ್ನು ತಲುಪುವ ಪ್ರಯತ್ನಗಳು ನಡೆಯಬೇಕು. ತತ್ವಪದಗಳಲ್ಲಿರುವ ಜೀವನ ಮೌಲ್ಯಗಳನ್ನು ಯುವ ಜನಾಂಗಕ್ಕೆ ತಲುಪಿಸುವ ಕೆಲಸ ಆದರೆ ಖಂಡಿತವಾಗಿಯೂ ಈ ಪರಂಪರೆ ಉಳಿಯುತ್ತದೆ, ಬೆಳೆಯುತ್ತದೆ.

** ನಮ್ಮ ವಿಶ್ವವಿದ್ಯಾಲಯಗಳು ತತ್ವಪದ ಪರಂಪರೆಗೆ ತೃಪ್ತಿಕರ ಪ್ರಾಮುಖ್ಯತೆ ನೀಡಿವೆಯೆ?*

ಇಲ್ಲ ಎಂದೇ ಹೇಳಬೇಕಾಗುತ್ತದೆ. ತತ್ವಪದ ಪರಂಪರೆಯನ್ನು ಉಳಿಸಿ, ಬೆಳೆಸುವುದಕ್ಕೆ, ನಮ್ಮ ವಿಶ್ವವಿದ್ಯಾಲಯಗಳು ಇದುವರೆಗೂ ಹೇಳಿಕೊಳ್ಳುವಂತಹ ಕೆಲಸಗಳನ್ನು ಮಾಡಿಲ್ಲ. ಈ ನೆಲದ ಸಂಸ್ಕೃತಿ, ಪರಂಪರೆಗಳನ್ನು ಗುರುತಿಸುವ, ಅಧ್ಯಯನ ಮಾಡುವ ಹಾಗೂ ಅವುಗಳನ್ನು ಉಳಿಸಿ ಬೆಳೆಸುವುದಕ್ಕೆ, ನೆರವಾಗುವ ಮಹತ್ತರ ಜವಾಬ್ದಾರಿಯನ್ನು ಹೊತ್ತಿರುವ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕೆಲಸವೂ ಈ ದಿಶೆಯಲ್ಲಿ ತೃಪ್ತಿಕರವಾಗಿಲ್ಲ. ಇನ್ನು ಮುಂದಾದರೂ ಆ ನಿಟ್ಟಿನಲ್ಲಿ ಪ್ರಯತ್ನಗಳನ್ನು ಮಾಡುತ್ತವೆ ಎಂದು ಆಶಿಸೋಣ.

** ನಮ್ಮ ಸರ್ಕಾರ ಈ ನಿಟ್ಟಿನಲ್ಲಿ ಕಾಳಜಿ ವಹಿಸಿದೆಯೆ?*

ಸರ್ಕಾರದ ಕಡೆಯಿಂದಲೂ ಈ ನಿಟ್ಟಿನಲ್ಲಿ ಇಲ್ಲಿಯವರೆಗೆ ಅಂತಹ ಪ್ರಯತ್ನಗಳಾಗಿಲ್ಲ. ಇತ್ತೀಚೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕನಕ ಅಧ್ಯಯನ ಪೀಠ ಜಂಟಿಯಾಗಿ ಬೆಂಗಳೂರಿನಲ್ಲಿ ಒಂದು ಸಮಾವೇಶ ಏರ್ಪಡಿಸಿದ್ದವು. ಅಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಉಮಾಶ್ರೀಯವರು ತತ್ವಪದ ಪರಂಪರೆಯನ್ನು ಮುನ್ನೆಲೆಗೆ ತರುವ ವಿಷಯವಾಗಿ ಬಹಳಷ್ಟು ಕಾಳಜಿ ವ್ಯಕ್ತಪಡಿಸಿದರು. ಈ ನಿಟ್ಟಿನಲ್ಲಿ ಸರ್ಕಾರದ ಬದ್ಧತೆಯನ್ನೂ ಅವರು ವಿವರಿಸಿದರು. ಇದೊಂದು ಆಶಾದಾಯಕ ಬೆಳವಣಿಗೆ. ಅವರ ಮಾತುಗಳು ನನಗೆ ಖುಷಿ ಕೊಟ್ಟವು. ನಿಜಕ್ಕೂ ನನಗೆ ಸರ್ಕಾರದ ಮೇಲೆ ಒಂದಿಷ್ಟು ಭರವಸೆ ಮೂಡಿತು. ಈ ನಿಟ್ಟಿನಲ್ಲಿ ಒಂದಷ್ಟು ಕೆಲಸಗಳೂ ಪ್ರಾರಂಭವಾಗಿವೆ. ಎಲ್ಲಾ ತತ್ವಪದಗಳನ್ನು ಸಂಗ್ರಹಿಸಿ ಒಂದು ಗ್ರಂಥದ ರೂಪದಲ್ಲಿ ಹೊರತರುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ನನಗೂ ಒಂದಿಷ್ಟು ಜವಾಬ್ದಾರಿಗಳನ್ನು ವಹಿಸಿ ನಾನು ಹಾಡಿರುವ, ನನ್ನಲ್ಲಿ ಲಭ್ಯವಿರುವ ಎಲ್ಲಾ ತತ್ವಪದಗಳನ್ನು ಒದಗಿಸುವಂತೆ ಹೇಳಿದ್ದಾರೆ. ಈಗಾಗಲೇ ಅವುಗಳನ್ನು ನಾನು ಸರ್ಕಾರಕ್ಕೆ ಕಳಿಸಿಕೊಟ್ಟಿದ್ದೇನೆ.

** ತತ್ವಪದ ಪರಂಪರೆ ತುಳಿಯಲ್ಪಟ್ಟಿದೆಯೆ?*

ಅದು ಒಂದಷ್ಟು ಮಟ್ಟಿಗೆ ನಿಜ. ಎಲ್ಲಾ ಕಾರ್ಯಕ್ರಮಗಳಲ್ಲಿ, ಸಮ್ಮೇಳನಗಳಲ್ಲಿ ಇನ್ನಿತರ ಸಭೆ-ಸಮಾರಂಭಗಳಲ್ಲಿ ಶಾಸ್ತ್ರೀಯ ಸಂಗೀತಕ್ಕೆ ಸಿಗುವ ಮನ್ನಣೆ, ಪ್ರಾಮುಖ್ಯತೆ ಈ ನೆಲದ ಮಣ್ಣಿನಿಂದ ಹುಟ್ಟಿಬಂದ ಜಾನಪದ ಅಥವಾ ತತ್ವಪದ ಪರಂಪರೆಗೆ ಸಿಗುತ್ತಿಲ್ಲ. ತಥಾಕಥಿತ ಶಿಷ್ಟ ಪರಂಪರೆಗಳ ಆರ್ಭಟದಲ್ಲಿ ಇದು ನಲುಗಿಹೋಗಿದೆ. ಬೇರೆ ಬೇರೆ ಸಮುದಾಯಗಳ ಸಮ್ಮೇಳನಗಳು ಜರುಗುವಂತೆ ಜಾನಪದ ಹಾಡುಗಾರರ, ತತ್ವಪದ ಹಾಡುಗಾರರ, ರಚನೆಕಾರರ ಸಮ್ಮೇಳನಗಳು, ಉತ್ಸವಗಳು ನಡೆಯಬೇಕು. ಅದಕ್ಕೆ ಸಂಘಟಿತ ಪ್ರಯತ್ನಗಳು ನಡೆಯಬೇಕು. ಯಾವತ್ತೋ ಉತ್ಸಾಹ ಬಂದಾಗ ಮಾಡಿ ಬಿಡುವುದು ಆಗಬಾರದು. ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿರಬೇಕು. ತತ್ವಪದ ಸಮಾವೇಶ, ತತ್ವಪದ ಉತ್ಸವಗಳನ್ನು ಪ್ರತಿವರ್ಷ ಸರ್ಕಾರವೇ ಮುತುವರ್ಜಿ ವಹಿಸಿ ನಡೆಸಬೇಕು. ಮೈಸೂರು ದಸರಾ ಉತ್ಸವ, ಹಂಪಿ ಉತ್ಸವ ಹೇಗೆ ನಡೆಯುತ್ತವೆಯೋ ಅದೇ ರೀತಿಯಲ್ಲಿ ಜನಪದ ಮತ್ತು ತತ್ವಪದ ಉತ್ಸವಗಳೂ ನಡೆಯಬೇಕು. ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುವಂತೆ ಈ ಜನಪದ ಮತ್ತು ತತ್ವಪದ ಉತ್ಸವಗಳು ಒಂದೊಂದು ವರ್ಷ ಒಂದೊಂದು ಊರಿನಲ್ಲಿ ನಡೆಯಬೇಕು.


ಇದು ಒಬ್ಬರಿಂದ ಆಗುವ ಕೆಲಸವಲ್ಲ, ಸಮಷ್ಟಿ ಪ್ರಯತ್ನದಿಂದ ಮಾತ್ರವೇ ಏನನ್ನಾದರೂ ಮಾಡಲು ಸಾಧ್ಯ. ತತ್ವಪದ ಹಾಡುಗಾರರು, ರಚನೆಕಾರರು, ಸರ್ಕಾರ, ವಿಶ್ವವಿದ್ಯಾಲಯಗಳು, ಬುದ್ಧಿಜೀವಿಗಳು, ಪುರೋಗಾಮಿ ಸಂಘ-ಸಂಸ್ಥೆಗಳು ಎಲ್ಲರೂ ಕೈಜೋಡಿಸಿದಾಗ ಮಾತ್ರ ಅಳಿವಿನಂಚಿನಲ್ಲಿರುವ ದೇಶಿ ಪರಂಪರೆಗಳು ಉಳಿದು ಬೆಳೆಯುವುದಕ್ಕೆ ಸಹಾಯಕವಾಗುತ್ತವೆ. ಮೊಟ್ಟ ಮೊದಲು, ಈಗಿರುವ ತತ್ವಪದ ಹಾಡುಗಾರರು ಮತ್ತು ರಚನೆಕಾರರನ್ನು ಗುರುತಿಸಿ ಪ್ರೋತ್ಸಾಹಿಸುವ ಜರೂರು ಇದೆ.

** ಇಂದಿನ ದಿನಮಾನಗಳಲ್ಲಿ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಬಗ್ಗೆ ಏನಂತೀರಿ?*

ಈ ವಿಚಾರದಲ್ಲಿ ನಮ್ಮ ದೇಶವೊಂದೇ ಅಲ್ಲ, ಇಡೀ ಪ್ರಪಂಚವೇ ಅಧಃಪತನಕ್ಕಿಳಿಯುತ್ತಿದೆ. ಧರ್ಮಗಳು ಇಬ್ಭಾಗವಾಗುತ್ತಿವೆ. ಒಂದೊಂದು ಪಂಗಡಗಳ ನಾಯಕರು ಒಂದೊಂದು ರೀತಿಯಲ್ಲಿ ಧರ್ಮವನ್ನು ವ್ಯಾಖ್ಯಾನಿಸುತ್ತಾ ಯುವಪೀಳಿಗೆಯಲ್ಲಿ ಗೊಂದಲ ಹುಟ್ಟಿಸುತ್ತಿದ್ದಾರೆ. ಯಾವ ಧರ್ಮವೂ ಹಿಂಸೆಯನ್ನು ಪ್ರತಿಪಾದಿಸುವುದಿಲ್ಲ, ಯಾವ ಧರ್ಮವೂ ಅನ್ಯಧರ್ಮೀಯರ ಮೇಲೆ ದಾಳಿ ಮಾಡುವಂತೆ ಪ್ರಚೋದಿಸುವುದಿಲ್ಲ, ಯಾವ ಧರ್ಮವೂ ಧರ್ಮದ ಹೆಸರಿನಲ್ಲಿ ಶೋಷಣೆ ಮಾಡುವುದನ್ನು ಸಮರ್ಥಿಸುವುದಿಲ್ಲ, ಎಲ್ಲ ಧರ್ಮಗಳೂ ಪ್ರಧಾನವಾಗಿ ಪ್ರತಿಪಾದಿಸಿರುವುದು ಪ್ರೀತಿ, ಪ್ರೇಮ, ಶಾಂತಿ, ಸಾಮರಸ್ಯ, ಸಹಬಾಳ್ವೆ, ಪರೋಪಕಾರಗಳಂತಹ ಉದಾತ್ತ ಮೌಲ್ಯಗಳನ್ನೇ.

ಈ ತಿರುಳನ್ನು ಅರ್ಥಮಾಡಿಕೊಳ್ಳದಂತೆ ಜನರ ಹಾದಿ ತಪ್ಪಿಸುತ್ತಿದ್ದಾರೆ. ಇದು ಎಲ್ಲಾ ಧರ್ಮಗಳಲ್ಲೂ ನಡೆಯುತ್ತಿದೆ. ಧರ್ಮಗಳನ್ನು ಸರಿಯಾಗಿ ವ್ಯಾಖ್ಯಾನಿಸಿ, ಅವುಗಳು ಪ್ರತಿಪಾದಿಸುವ ಜೀವನ ಮೌಲ್ಯಗಳನ್ನು ಯುವಪೀಳಿಗೆಗೆ ಮುಟ್ಟಿಸುವುದು ಇಂದಿನ ಜರೂರು. ■

ಶ್ರೀನಿವಾಸ್ ಸುಲೇಮಾನ್ ಆದ ಒಂದು ಸತ್ಯಕತೆ



ಲಂಕೇಶ್ 80

ಇಟ್ಟಿಗೆ ಪವಿತ್ರವಲ್ಲ ಜೀವ ಪವಿತ್ರ



ಇದೊಂದು ಆಶ್ಚರ್ಯವೆನಿಸುವ ಸತ್ಯಕತೆ. ಈ ಕತೆಯ ನಾಯಕ ಶ್ರೀನಿವಾಸ್ ಉರುಫ್ ಸುಲೇಮಾನ್ ಶೇಕ್. ಈತನ ಜೀವನ ನಡೆದುಬಂದ ಹಾದಿಯೇ ವಿಚಿತ್ರ. ಅಂಥಾ ಒಂದು ಅನಿರೀಕ್ಷಿತ ತಿರುವಿನಲ್ಲಿ ಆತ ಮತಾಂತರಗೊಂಡ. ಅದೂ ಮುಸ್ಲಿಂ ಧರ್ಮಕ್ಕೆ. ಹೀಗೆ ಮತಾಂತರಗೊಳ್ಳುವವರು ಹಿಂದೂ ಧರ್ಮದ ಜಾತಿ ಶೋಷಣೆಗೆ ಒಳಗಾದ ದಲಿತರು ಎಂಬುದು ಬಹುತೇಕರ ನಂಬಿಕೆ. ಆದರೆ ಈತ ಹುಟ್ಟಿದ್ದು ಬ್ರಾಹ್ಮಣ ಜಾತಿಯಲ್ಲಿ. ಅದರಲ್ಲೂ ಬ್ರಾಹ್ಮಣರಲ್ಲಿ ತಾವೇ ಶ್ರೇಷ್ಠ ಎಂದು ಪ್ರತಿಪಾದಿಸುವ ಚಿತ್ಪಾವನ ಬ್ರಾಹ್ಮಣ ಜಾತಿಯಲ್ಲಿ. ದುಡಿದು ಉಣ್ಣುವ ಶ್ರಮಜೀವಿಯೊಬ್ಬನ ಬದುಕಿನಲ್ಲಿ ಧರ್ಮದ ಪಾತ್ರ ಎಷ್ಟೊಂದು ನಗಣ್ಯ ಎಂಬುದಕ್ಕೆ ಸುಲೇಮಾನ್ ಶೇಕ್‌ರ ಜೀವನ ಒಂದು ಜೀವಂತ ನಿದರ್ಶನ.

ಶ್ರೀನಿವಾಸ್‌ರ ಊರು ಶಿರಸಿ ತಾಲೂಕಿನಲ್ಲಿ ಹಂಚಿನಗೇರಿ ಎಂಬ ಒಂದು ಹಳ್ಳಿ. ತಂದೆ ದತ್ತಾತ್ರೇಯ ಮತ್ತು ತಾಯಿ ವಿಜಯಾ. ಇವರು ಮೂಲತಃ ಬನವಾಸಿ ಬಳಿಯ ಒಂದು ಹಳ್ಳಿಯವರು. ಬದುಕು ಅರಸುತ್ತಾ ಇಲ್ಲಿ ಬಂದು ನೆಲೆ ನಿಂತವರು. ಚಿತ್ಪಾವನ ಬ್ರಾಹ್ಮಣ ಜಾತಿಗೆ ಸೇರಿದ್ದರೂ ದತ್ತಾತ್ರೇಯ ಕೃಷಿಯನ್ನು ನಂಬಿ ಬದುಕುತ್ತಿದ್ದವರು. ಜೊತೆಗೆ ಕೆಂಪು ಕಲ್ಲಿನ ಇಟ್ಟಿಗೆ ಮಾರಾಟ ಮಾಡುತ್ತಾ ನಾಲ್ಕು ಕಾಸು ಸಂಪಾದಿಸುತ್ತಿದ್ದರು.

ಶ್ರೀನಿವಾಸ ಹುಟ್ಟಿದ್ದು 1964ರಲ್ಲಿ, ಬನವಾಸಿಯ ಬಳಿಯ ಗ್ರಾಮವೊಂದರಲ್ಲಿ. ಶ್ರೀನಿವಾಸ ಒಂದರಿಂದ ಏಳನೇ ತರಗತಿವರೆಗೆ ಕಲಿತದ್ದು ಬನವಾಸಿಯ ಮಾರಿಕಾಂಬ ಶಾಲೆಯಲ್ಲಿ. ನಂತರ ಶಿರಸಿ ತಾಲೂಕಿನ ಕೋಣನಕೇರಿಯಲ್ಲಿ ಹೈಸ್ಕೂಲ್ ಸೇರಿದ್ದರು.

ಶ್ರೀನಿವಾಸರಿಗೆ ಅಣ್ಣ, ಅಕ್ಕ, ತಮ್ಮ ಮತ್ತು ಒಬ್ಬಳು ತಂಗಿಯಿದ್ದಾರೆ. ಹೀಗೆ ಐದು ಮಂದಿ ಮಕ್ಕಳ ಕುಟುಂಬವನ್ನು ನಿಭಾಯಿಸುವುದು ದತ್ತಾತ್ರೇಯರ ಅಂದಿನ ಆದಾಯದಲ್ಲಿ ಕಷ್ಟವೇ ಇತ್ತು. ಹೀಗಾಗಿ ಶ್ರೀನಿವಾಸ ಎಸ್‌ಎಸ್‌ಎಲ್‌ಸಿ ವ್ಯಾಸಂಗಕ್ಕೆ ಹುಬ್ಬಳ್ಳಿಯ ಪರಿಚಿತರೊಬ್ಬರ ಮನೆಗೆ ಸ್ಥಳಾಂತರಗೊಂಡು ಹುಬ್ಬಳ್ಳಿಯ ಲ್ಯಾಮಿಂಟ್ಸ್ ಹೈಸ್ಕೂಲ್ ಸೇರಿದರು. 1981ರಲ್ಲಿ ಎಸ್‌ಎಸ್‌ಎಲ್‌ಸಿ ಮುಗಿಸಿದರು.

ಎಸ್‌ಎಸ್‌ಎಲ್‌ಸಿವರೆಗೆ ಹೇಗೋ ಆಯಿತು. ಮುಂದೆ ಕಾಲೇಜು ಸೇರುವುದು ಹೇಗೆ? ಮನೆಯವರಿಂದ ಬೆಂಬಲ ಸಿಗುವುದು ಕನಸಿನ ಮಾತಾಗಿತ್ತು. ಇಂಥಾ ಸನ್ನಿವೇಶದಲ್ಲಿ ಇವರಿಗೆ ಆಸರೆಯಾಗಿ ಬಂದಿದ್ದು ಹುಬ್ಬಳ್ಳಿಯ ಗೋಪಾಲ್ ಎಸ್ ಕಂಕಣವಾಡಿ ಎಂಬ ಒಬ್ಬ ವೈದ್ಯರು. ಡಾಕ್ಟರ್ ಗೋಪಾಲ್ ಬೆಂಗಳೂರಿನ ಕೆಂಗೇರಿಯಲ್ಲಿ ಒಂದು ಕ್ಲಿನಿಕ್ ತೆರೆದಿದ್ದರು. ಆ ಕ್ಲಿನಿಕ್‌ನಲ್ಲಿ ಸಹಾಯಕನ ಕೆಲಸ ಮಾಡುತ್ತಾ ಅಲ್ಲೇ ವಿದ್ಯಾಭ್ಯಾಸ ಮುಂದುವರೆಸುವಂತೆ ಡಾಕ್ಟರ್ ನೀಡಿದ ಸಲಹೆಯನ್ನು ಒಪ್ಪಿ ಬೆಂಗಳೂರಿಗೆ ಸ್ಥಳಾಂತರಗೊಂಡರು. ಅಲ್ಲಿಗೆ ಮನೆಯವರೊಂದಿಗೆ ಸಂಪರ್ಕ ಕ್ಷೀಣಿಸತೊಡಗಿತ್ತು.

ಡಾಕ್ಟರ್ ಗೋಪಾಲ್‌ರದು ಅಂತರಜಾತೀಯ ವಿವಾಹ. ಪ್ರಗತಿಪರವಾಗಿ ಚಿಂತಿಸುತ್ತಿದ್ದ ವ್ಯಕ್ತಿ ಅವರು. ರೋಗಿಗಳ ಶುಶ್ರೂಷೆಯಿಂದ ಜನಪ್ರಿಯತೆ ಗಳಿಸಿದ್ದವರು. ಇಂಥಾ ಡಾಕ್ಟರ್ ಆಶ್ರಯದಲ್ಲಿ ಎರಡು ವರ್ಷ ಇದ್ದ ಶ್ರೀನಿವಾಸ್ ಕೆಂಗೇರಿ ಜೂನಿಯರ್ ಕಾಲೇಜಿನಲ್ಲಿ ಪಿಯುಸಿ ಮುಗಿಸಿದರು.

ತಾನು ಸ್ವತಂತ್ರವಾಗಿ ನಾಲ್ಕು ಕಾಸು ದುಡಿಯಬೇಕು ಅನಿಸಿದ್ದೇ ತಡ, ಶ್ರೀನಿವಾಸ್ ವಾಪಸ್ ಹುಬ್ಬಳ್ಳಿಗೆ ಮರಳಿ ಬಂದುಬಿಟ್ಟರು. ಮನೆಯಿಂದ ದೂರವಾದ ನಿರಾಶ್ರಿತರಿಗೆ ಆಶ್ರಯತಾಣವೆಂದರೆ ಹೋಟೆಲ್‌ಗಳು ತಾನೇ? ಹಾಗೆ ಶ್ರೀನಿವಾಸ್ ಹೋಟೆಲೊಂದರಲ್ಲಿ ಕೆಲಸಕ್ಕೆ ನಿಂತರು. ಯಾಕೋ ಏನೋ? ಹೋಟೆಲ್‌ನ ಕೆಲಸ ತೃಪ್ತಿ ಕೊಡಲಿಲ್ಲ, ಕೆಲವು ಗೆಳೆಯರ ಸಹಾಯದಿಂದ ಆಟೋರಿಕ್ಷಾ ಓಡಿಸಲು ಕಲಿತರು.

ಆಟೋರಿಕ್ಷಾಗೆ ಪರ್ಯಾವಸಾನಗೊಂಡಿದ್ದು ಶ್ರೀನಿವಾಸರ ಬದುಕಿನಲ್ಲಿ ಮತ್ತೊಂದು ತಿರುವಿಗೆ ಕಾರಣವಾಯ್ತು, ಆಟೋ ಲೈನ್‌ನಲ್ಲಿರುವಾಗಲೇ ನಾಕಷ್ಟು ಮುಸ್ಲಿಂ ಡ್ರೈವರ್‌ಗಳ ಗೆಳೆತನವಾಯ್ತು. ಯುವಕ ಶ್ರೀನಿವಾಸ್‌ರದು ಉದಾರ ಮನಸ್ಥಿತಿ. ಜಾತಿ ಮತಗಳಿಗೆ ಅಂಟಿಕೊಳ್ಳುವ ಸ್ವಭಾವದವರಾಗಿರಲಿಲ್ಲ, ಹಾಗೇ ಆತ್ಮೀಯವಾಗಿದ್ದ ಗೆಳೆಯರೊಂದಿಗೆ ಕಲೆತು ಮಸೀದಿಗೆ ಹೋಗಲು ಆರಂಭಿಸಿದರು. ಪ್ರಾರ್ಥನೆ ಮಾಡಲು ಎಲ್ಲರ ಜೊತೆ ಸೇರಬೇಕೆನಿಸಿತು. ಮಸೀದಿಯ ಮುಖ್ಯಸ್ಥರೊಂದಿಗೆ ಚರ್ಚಿಸಿ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡರು. ಹೀಗೆ ಬ್ರಾಹ್ಮಣ ಶ್ರೀನಿವಾಸ ಮುಸಲ್ಮಾನ ಸುಲೇಮಾನ್ ಶೇಕ್ ಆಗಿ ಬದಲಾದರು. ಇದು ನಡೆದದ್ದು 1984ರಲ್ಲಿ, ಆಗ ಸುಲೇಮಾನ್‌ಗೆ 20 ವರ್ಷ ವಯಸ್ಸು.

ನೀವು ಮತಾಂತರಗೊಂಡಿದ್ದು ಯಾಕೆ ಅಂತ ಕೇಳಿದರೆ "ಅಲ್ಲಿನ ಸ್ವಚ್ಛ ವಾತಾವರಣ ಇಷ್ಟ ಆಯ್ತುರೀ. ಎಲ್ರೂ ಶಿಸ್ತಿನಿಂದ ಪ್ರಾರ್ಥನೆ ಮಾಡೋದು ನಂಗೆ ತುಂಬಾ ಇಷ್ಟ ಆಯ್ತು. ಎಲ್ಲಕ್ಕಿಂತ ಹೆಚ್ಚಾಗಿ ನನ್ನ ಗೆಳೆಯರೆಲ್ಲೂ ಅಲ್ಲಿಗೆ ಪ್ರಾರ್ಥನೆಗೆ ಹೋಗ್ತಿದ್ರು. ನಾನೂ ಅವರೊಟ್ಟಿಗೆ ಸೇರಲು ನಿರ್ಧಾರ ಮಾಡ್ದೆ ನೋಡ್ರಿ" ಎಂಬುದು ಸುಲೇಮಾನ್‌ರ ವಿವರಣೆ. ಪ್ರಾರ್ಥನೆ ಎಲ್ಲಿ ಬೇಕಾದರೂ ಮಾಡಬಹುದಲ್ಲವೇ? ಮಸೀದಿಗೇ ಹೋಗಬೇಕು ಅಂತಾ ಏನಿದೆ? ಅಂತ ಕೇಳಿದರೆ "ನನ್ನ ಪಾಲಿಗೆ ಅಲ್ಲಾ ಅಂದ್ರೂ ಒಂದೇ; ರಾಮ ಅಂದ್ರೂ ಒಂದೇ. ನಾನು ಮಸೀದಿಗೆ ಹೋಗೋದ್ರಿಂದ ಯಾರಿಗಾರ ನಷ್ಟ ಆಗೈತೇನ್ರಿ?" ಅಂತ ಮರು ಪ್ರಶ್ನೆ ಹಾಕುವ ಸುಲೇಮಾನ್ ದೇವನೊಬ್ಬ ನಾಮ ಹಲವು ಎಂಬ ತತ್ವವನ್ನು ಆಚರಣೆಗೆ ತಂದವರು.

ಶ್ರಮಜೀವಿ ಸುಲೇಮಾನ್ ಕ್ರಮೇಣ ಆಟೋರಿಕ್ಷಾ ಒಂದರ ಮಾಲಿಕರಾದರು. 1989ರಲ್ಲಿ ವಿವಾಹವೂ ಆಯಿತು. ನಿಮ್ಮದು ಲವ್ ಮ್ಯಾರೇಜಾ? ಅಂತ ಕುತೂಹಲದಿಂದ ಕೇಳಿದರೆ ಸುಲೇಮಾನ್ ಗಾಬರಿಗೊಳ್ತಾರೆ. "ಹಂಗ್ಯಾಕನ್ತೀರಿ ಸರ್ರ, ನನಗೆ ಲವ್‌ಗಿವ್ ಗೊತ್ತಿಲ್ರೀ. ಗುರುಹಿರಿಯರೆಲ್ಲ ಕಲೆತು ಆಶೀರ್ವಾದ ಮಾಡಿ ಮದ್ವಿ ಮಾಡಾರ್ರಿ" ಅಂತ ಮುಗ್ಧ ಉತ್ತರ ನೀಡುತ್ತಾರೆ.

ಹೆತ್ತ ತಾಯಿ ತಂದೆ ಮತ್ತು ಬಂಧುಗಳಿಂದ ದೂರಾಗಿ ಬದುಕಿನ ಹಲವು ಅನಿರೀಕ್ಷಿತ ತಿರುವುಗಳಲ್ಲಿ ನಡೆದ ಸುಲೇಮಾನ್‌ಗೆ ತನ್ನ ಊರಿಗೆ ಹೋಗಿ ತಾಯಿ ತಂದೆಯರನ್ನು ನೋಡಬೇಕೆನಿಸಿತು. ಮದುವೆಯಾದ ಹೊಸದರಲ್ಲೇ ಪತ್ನಿ ಸಮೇತರಾಗಿ ಊರಿಗೆ ಹೋದರು.

ಊರಿನಲ್ಲಿ ಮನೆಯವರು ಬಂಧುಬಳಗದವರೆಲ್ಲರದು ಒಂದೇ ಒತ್ತಡ. ನೀನು ವಾಪಸ್ ಊರಿಗೆ ಬಂದುಬಿಡು. ನಮ್ಮೊಟ್ಟಿಗೆ ಇದ್ದುಬಿಡು ಎಂಬುದು.

ಸುಲೇಮಾನ್ ಶೇಕ್‌ಗೆ ಆಗ ಶುರುವಾಗಿದ್ದು ನಿಜವಾದ ಧರ್ಮಸಂಕಟ. ಸಾಕಷ್ಟು ತೊಳಲಾಟ ಅನುಭವಿಸಿದ ನಂತರ ಅಂತಿಮವಾಗಿ ವಾಪಸ್ ಹುಬ್ಬಳ್ಳಿಗೆ ಹೋಗುವುದಾಗಿ ತೀರ್ಮಾನಿಸಿದರು. ನೀವು ಯಾಕೆ ಅಂಥಾ ನಿರ್ಧಾರ ತೆಗೆದುಕೊಂಡಿರಿ, ಊರಿನಲ್ಲೇ ಉಳಿಯಬಹುದಿತ್ತಲ್ಲಾ ಅಂತ ಕೇಳಿದರೆ "ಊರಲ್ಲಿ ಉಳೀಬೇಕು ಅಂದ್ರೆ ನಮ್ಮಾಕೆನ ಬಿಟ್ಟು ಹೋಗಬೇಕಾಗ್ತಿತ್ರೀ, ಅದು ನ್ಯಾಯಾನ ಹೇಳ್ರಿ ಸರ್ರ" ಎಂಬುದು ಸುಲೇಮಾನ್‌ರ ಉತ್ತರ. ಯಾಕೆ ನ್ಯಾಯ ಅಲ್ಲ ಅಂತೀರಿ ಅಂತ ಮತ್ತೆ ಕೆದಕಿದರೆ "ಅಲ್ರೀ ಸರ್ರ, ನಾವು ಗಂಡಸ್ರು ಬೇಕಾದಂಗೆ ಮದ್ವಿ ಆಗ್ಬೋದು, ಬಿಡ್ಬೋದ್ರಿ. ಆದ್ರೆ ನಮ್ಮ ಸಮಾಜದಾಗೆ ಒಂದು ಹೆಣ್ಣಿಗೆ ಮತ್ತೆ ಜೀವ್ನ ರೂಪಿಸಿಕೊಳ್ಳೋದು ಹೆಂಗ್ ಸಾಧ್ಯ ಹೇಳ್ರಿ? ಒಂದು ಹೆಣ್ಣಿಗೆ ಅನ್ಯಾಯ ಮಾಡಿ ನಾನು ಸುಖವಾಗಿರ್ತೀನಿ ಅಂದ್ರ ಹೆಂಗ್ ಹೇಳ್ರಿ?" ಅಂತ ಮರುಪ್ರಶ್ನೆ ಹಾಕುತ್ತಾರೆ. ನಿಮ್ಮ ಹೆಂಡತಿಯನ್ನೂ ಕರೆದುಕೊಂಡು ಹೋಗಬಹುದಿತ್ತಲ್ಲಾ? ಅಂತ ಕೇಳಿದರೆ "ಅದೆಲ್ಲಾ ಹೇಳೋಕೆ ಚಂದ ಇರ್ತೈತ್ರಿ. ಅಲ್ಲಿ ಹೋದ್ರೆ ಪರಿಸ್ಥಿತಿನೇ ಬ್ಯಾರೆ ಇರ್ತೈತ್ರಿ" ಎಂಬುದು ಸುಲೇಮಾನ್‌ರ ಪ್ರಾಕ್ಟಿಕಲ್ ಜ್ಞಾನ. ಹಾಗೆ ಮುಂದುವರೆದು "ತಾಯಿ ಆಗ್ಲಿ, ಹೆಂಡ್ತಿ ಆಗ್ಲಿ, ಅಕ್ಕ ತಂಗೀರಾಗ್ಲಿ, ಯಾವ್ದೇ ಹೆಣ್ಣಿಗೆ ನೋಯಿಸ್ಬಾರ್ದು. ಹೆಣ್ಣಿನ ಶಾಪ ಬಿದ್ದರೆ ಒಳ್ಳೇದಾಗೋದಿಲ್ರಿ" ಎಂಬ ಉಪದೇಶವನ್ನೂ ಕೊಡುತ್ತಾರೆ.

ಇವರ ತಂಗಿ ಸ್ಮಿತಾಳಿಗೆ ಶ್ರೀನಿವಾಸಣ್ಣ ಎಂದರೆ ಸ್ವಲ್ಪ ಅಕ್ಕರೆ ಹೆಚ್ಚು, ಮದುವೆಯಾಗಿ ಗಂಡನ ಮನೆ ಸೇರಿರುವ ಸ್ಮಿತಾ ಅಣ್ಣನ ವಿಳಾಸ ಹುಡುಕಿ ಹುಬ್ಬಳ್ಳಿಗೆ ಬಂದಿದ್ದನ್ನು, ತನ್ನನ್ನು ಹಿಡಿದು ಗೋಳಾಡಿದ್ದನ್ನು ನೆನೆಸಿಕೊಂಡು ಈಗಲೂ ಭಾವುಕರಾಗುತ್ತಾರೆ.

ಇಂಥಾ ಸುಲೇಮಾನ್ ಬದುಕಿನ ನೊಗ ಎಳೆಯಲು ಆಟೋ ಓಡಿಸುವುದನ್ನೇ ಕಾಯಕ ಮಾಡಿಕೊಂಡಿದ್ದಾರೆ. ಎಸ್.ಎಂ. ಕೃಷ್ಣರ ಕಾಲದಲ್ಲಿ ಆಶ್ರಯ ಯೋಜನೆಯಲ್ಲಿ ಮನೆಯೊಂದನ್ನು ಪಡೆದುಕೊಂಡು ಅದರಲ್ಲೇ ವಾಸವಿದ್ದಾರೆ.

ಬಡವರ ಕಾರ್ಮಿಕರ ಪರವಾಗಿ ಹೋರಾಡುತ್ತಿದ್ದ ಕಾರ್ಮಿಕ ಮುಖಂಡ ಅಬ್ದುಲ್ ರಹಮಾನ್ ಮುಧೋಳ ಅವರ ಬಗ್ಗೆ ಸುಲೇಮಾನ್‌ಗೆ ಅಪಾರ ಗೌರವ. ಆಟೊ ಡ್ರೈವರ್‌ಗಳನ್ನು ಸಂಘಟಿಸುತ್ತಿರುವ ದೇವಾನಂದ ಜಗಾಪುರ ಅವರೊಂದಿಗೆ ಒಡನಾಟ ಇಟ್ಟುಕೊಂಡಿದ್ದಾರೆ.

ಹೀಗಿದ್ದರೂ ಸುಲೇಮಾನ್ ಊರಿನ ಜೊತೆ ಸಂಪರ್ಕ ಕಡಿದುಕೊಳ್ಳಲಿಲ್ಲ, ಆಗಾಗ್ಗ ಊರಿಗೆ ಹೋಗಿ ತಂದೆತಾಯಿಯರನ್ನು ನೋಡಿಕೊಂಡು ಬರುತ್ತಿದ್ದರು. ತಂದೆ ದತ್ತಾತ್ರೇಯರೂ ಮಗನ ಮನೆಗೆ ಹುಬ್ಬಳ್ಳಿಗೆ ಬಂದು ಹೋಗುತ್ತಿದ್ದರು. ದುರದೃಷ್ಟವಶಾತ್ ಕೆಲ ವರ್ಷಗಳ ಹಿಂದೆ ಸುಲೇಮಾನ್‌ರಿಗೆ ಹೃದಯಾಘಾತವಾಯಿತು. ಸುದ್ದಿ ತಿಳಿದ ತಂದೆ ದತ್ತಾತ್ರೇಯ ಅವರು ಮಗನ ಸಹಾಯಕ್ಕೆ ನಿಂತರು. ಚಿಕಿತ್ಸೆಗೆಂದು 30 ಸಾವಿರ ಹಣವನ್ನೂ ಕೊಟ್ಟರು. ಹೀಗಿತ್ತು ತಂದೆ ಮಗನ ಬಾಂಧವ್ಯ. ಪಿತೃವಾತ್ಸಲ್ಯಕ್ಕೆ, ಮನಸ್ಸಿನ ಭಾವನೆಗಳಿಗೆ ಕಡಿವಾಣ ಹಾಕಲು ಯಾವ ಮತ-ಧರ್ಮಕ್ಕೆ ಸಾಧ್ಯವಿದೆ?

ಇಲ್ಲಿಗೆ 3 ವರ್ಷಗಳ ಹಿಂದೆ ತಂದೆ ದತ್ತಾತ್ರೇಯರು ತಮ್ಮ 72ನೇ ವಯಸ್ಸಿನಲ್ಲಿ ತೀರಿಕೊಂಡರು. ಬದಲಾದ ಸಾಮಾಜಿಕ ಸನ್ನಿವೇಶದ ಕಾರಣಕ್ಕಾಗಿಯೋ ಏನೋ? ತಂದೆಯ ಸಾವಿನ ಸುದ್ದಿಯನ್ನು ಬಂಧುಗಳು ಹುಬ್ಬಳ್ಳಿಯಲ್ಲಿದ್ದ ಮಗನಿಗೆ ತಿಳಿಸಲೇ ಇಲ್ಲ.

ತಮ್ಮ ತಂದೆಯ ಅಂತಿಮ ದರ್ಶನ ಮಾಡಲಿಲ್ಲವಲ್ಲಾ ಎಂಬ ಕೊರಗು ಸುಲೇಮಾನ್‌ರಲ್ಲಿ ಉಳಿದುಕೊಂಡಿದೆ. ಈ ವಿಷಯದಲ್ಲಿ ಊರಿನಲ್ಲಿರುವ ತಮ್ಮ ಸೋದರ ಮತ್ತಿತರ ಬಂಧುಗಳು ಚಿತಾವಣೆ ಮಾಡಿ ತನಗೆ ಮೋಸ ಮಾಡಿದ್ದಾರೆಂದು ತೀವ್ರ ಬೇಸರ ವ್ಯಕ್ತಪಡಿಸುತ್ತಾರೆ.

ಸುಲೇಮಾನ್ ದಂಪತಿಗಳಿಗೆ ಮೂವರು ಮಕ್ಕಳು. ಮಗ ಬಿಕಾಂ ಫೈನಲ್. ಹಿರಿ ಮಗಳು ಬಿಕಾಂ ನಾಲ್ಕನೇ ಸೆಮ್‌ನಲ್ಲಿ ಕಲಿಯುತ್ತಿದ್ದಾಳೆ. ಕಿರಿ ಮಗಳು ದ್ವಿತೀಯ ಪಿಯುಸಿ. ಎಲ್ಲ ತಂದೆತಾಯಿಗಳಂತೆ ಇವರಿಗೆ ಒಂದೇ ಚಿಂತೆ. ತನ್ನ ಇಬ್ಬರು ಹೆಣ್ಣುಮಕ್ಕಳಿಗೆ ಒಳ್ಳೆಯ ವರ ನೋಡಿ ತನ್ನ ಜವಾಬ್ದಾರಿ ಪೂರೈಸಬೇಕು ಎಂಬುದು.

ಹಿಂದೂ ಮುಸ್ಲಿಮ್ ಗಲಭೆಗಳ ಬಗ್ಗೆ ಸುಲೇಮಾನ್‌ರದ್ದು ಖಡಕ್ ಉತ್ತರ. "ಹಿಂಗೆ ಜಗ್ಳಾ ಆಡ್ತಿರಬೇಕು ಅಂತಾ ಯಾವ ಗುರು ಬೋಧ್ಸಿದಾರೆ ಹೇಳಿ? ಯಾವ ಗ್ರಂಥದಲ್ಲಿ ಬರ್ದಿದೆ ಹೇಳಿ? ಈ ಜಗ್ಳಾ, ಗಲಾಟೆ ಎಲ್ಲಾ ರಾಜಕೀಯದೋರು ಮಾಡಿಕೊಂಡಿರೋದ್ರಿ" ಅಂತ ಸ್ವಲ್ಪ ಕೋಪದ ದನಿಯಲ್ಲೇ ಉತ್ತರಿಸುತ್ತಾರೆ.

ಇತ್ತೀಚೆಗೆ ಯೋಗಿ ಆದಿತ್ಯನಾಥ ಹುಬ್ಬಳ್ಳಿಗೆ ಬಂದು ಭಾಷಣ ಮಾಡಿಹೋಗಿದ್ದು, ನೆಮ್ಮದಿಯಾಗಿದ್ದ ಹುಬ್ಬಳ್ಳಿಯಲ್ಲಿ ಟೆನ್ಷನ್ ಶುರುವಾಗಿದ್ದು, ರಾತ್ರಿವೇಳೆಯಲ್ಲಿ ಒಂದು ಮಸೀದಿಯ ಗೋಡೆಯ ಮೇಲೆ ಯಾರೋ ಅವಾಚ್ಯ ವಾಕ್ಯಗಳನ್ನು ಬರೆದುಹೋಗಿದ್ದು, ಇದರಿಂದ ಆ ಏರಿಯಾದಲ್ಲಿ ಗಲಾಟೆ ವಾತಾವರಣ ನಿರ್ಮಾಣ ಆಗಿದ್ದು, ನಂತರ ಗೋಡೆಗೆ ಸುಣ್ಣ ಬಳಿದು ಅವಾಚ್ಯ ವಾಕ್ಯಗಳನ್ನು ಅಳಿಸಿಹಾಕಿದ್ದು ಹೀಗೆ ಎಲ್ಲವನ್ನೂ ಒಂದೇ ಉಸಿರಿನಲ್ಲಿ ಹೇಳುತ್ತಾರೆ.

ಮಾಂಸಾಹಾರದ ಬಗ್ಗೆ ಪ್ರಸ್ತಾಪಿಸುವುದೇ ತಡ, "ಇಲ್ರೀ, ನಾನು ಬೀಫ್ ತಿನ್ನಂಗಿಲ್ರಿ" ಅಂತಾ ತಟಕ್ಕನೆ ಉತ್ತರಿಸುತ್ತಾರೆ. ಯಾಕೆ ಅಂತ ಪ್ರಶ್ನಿಸಿದರೆ "ಯಾಕೋ ಇಷ್ಟ ಆಗಂಗಿಲ್ರಿ, ಅದರಾಗ ಚರ್ಬಿ ಜಾಸ್ತಿ ಇರ್ತೈತ್ರಿ. ಅದ್ರ ಸಲುವಾಗಿ ಈಗ ಬಾಳಾ ಮಂದಿ ತಿನ್ನೋದು ಬಿಟ್ಟಾರ್ರಿ. ಆದ್ರೆ ಮೀನು ತಿಂತೀವ್ರಿ. ಅದ್ರಲ್ಲೇನದ ಬಿಡ್ರಿ, ಕರಾವಳಿಯಲ್ಲಿ ಬ್ರಾಹ್ಮಣ್ರು ಕೂಡ ತಿಂತಾರಲ್ರಿ. ಚಿಕನ್, ಮಟನ್ ತಿನ್ನೋದು ಅಭ್ಯಾಸ ಆಗೈತಿ... ಅಷ್ಟೆ ನೋಡ್ರಿ" ಎಂಬ ಆತನ ಮುಗ್ಧ ಉತ್ತರದಲ್ಲಿ ಯಾವುದೇ ಕಲ್ಮಶ ಬೆರೆತಂತೆ ಕಾಣುವುದಿಲ್ಲ.

ಸುಲೇಮಾನ್ ಧಾರ್ಮಿಕ ದೃಷ್ಟಿ ನೋಡಿ. "ಗಂಡು ಹೆಣ್ಣು ಎರಡೇ ಧರ್ಮರೀ. ತಾಯಿ ಹೊಟ್ಟೇಲಿದ್ದಾಗ ಯಾರ್ದೂ ಧರ್ಮ ಇರೋದಿಲ್ರಿ. ದೇವ್ರು ನಮ್ಗ ಜನ್ಮ ಕೊಡ್ತಾನ್ರಿ. ಧರ್ಮ ಕೊಡೋಂಗಿಲ್ರಿ. ಕೂಸಿಗೆ ಹೆಸರು ಇಟ್ಟಾಗಲಿಂದ ಆದರ ಜಾತಿ ಧರ್ಮ ಶುರುವಾಗುತ್ತೆ ನೋಡ್ರಿ. ನಾನು ಶ್ರೀನಿವಾಸ ಅಂದರೆ ಹಿಂದೂ. ಸುಲೇಮಾನ್ ಅಂದರೆ ಮುಸ್ಲಿಂ. ಅಷ್ಟೇ ಫರಕ್ಕು ನೋಡ್ರಿ."



• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಹಣ-ಆಸ್ತಿಗೆ ಧರ್ಮ ಇದೆಯೆ?


ಶ್ರೀನಿವಾಸನೇನೋ ಹುಬ್ಬಳ್ಳಿ ಸೇರಿಕೊಂಡು ಸುಲೇಮಾನ್ ಆಗಿ ಬದಲಾದ. ಅಣ್ಣ ಉದ್ಯೋಗದ ಮೇಲೆ ನಾಸಿಕ್‌ದಲ್ಲಿದ್ದಾನೆ. ಅಕ್ಕತಂಗಿಯರು ಮದುವೆ ಆಗಿ ಗಂಡನ ಮನೆಗೆ ಸೇರಿಕೊಂಡಿದ್ದಾರೆ. ಇನ್ನು ಪಿತ್ರಾರ್ಜಿತ ಆಸ್ತಿಗೆ ಯಾರು ಒಡೆಯರು? ಊರಲ್ಲಿದ್ದ ಒಬ್ಬನೇ ತಮ್ಮನ ಅದೃಷ್ಟ ಖುಲಾಯಿಸಿಬಿಟ್ಟಿದೆ.

ಒಂದು ವೇಳೆ ಶ್ರೀನಿವಾಸ ವಾಪಸ್ ಊರಿಗೆ ಬಂದುಬಿಟ್ಟರೆ ಕತೆಯೇನು? ಆದ್ದರಿಂದಲೇ 'ನಮ್ಮ ಧರ್ಮ ಬಿಟ್ಟು ಹೋದವನಿಗೆ ಆಸ್ತಿ ಯಾಕ ಕೊಡಬೇಕು" ಅನ್ನೋ ವಾದ ಮುಂದಿಟ್ಟಿದ್ದಾನೆ. "ನಮ್ಮ ಮಾನ ಮರ್ಯಾದೆ ಕಳೆದಿದ್ದೀಯ. ಇನ್ನು ನೀನು ನಮ್ಮ ಮನೆ ಕಡೆ ತಲೆ ಹಾಕಬೇಡ" ಎಂದು ತಾಕೀತು ಮಾಡಿದ ತಮ್ಮನ ಮಾತುಗಳು ಸುಲೇಮಾನ್‌ರ ಮನಸ್ಸಿಗೆ ಘಾಸಿ ಮಾಡಿದೆ.

ತಂದೆ ಎಂದೂ ಇಂಥಾ ಮಾತು ಆಡಿದವರಲ್ಲ, ಆದರೆ ತಮ್ಮ? ಹಣ ಆಸ್ತಿಯ ಲೆಕ್ಕಾಚಾರದಲ್ಲಿ ಅನುಕೂಲಸಿಂಧು ವಾದ ಮಾಡುತ್ತಿದ್ದಾನೆ. ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಪಡೆಯಲು ಕೇಸು ಹಾಕುವಂತೆ ಕೆಲವರು ಸಲಹೆ ಮಾಡಿದ್ದೂ ಉಂಟು. ಅಂಥವರಿಗೆ ಸುಲೇಮಾನ್ ವೇದಾಂತಿಯಂತೆ ಉತ್ತರಿಸುತ್ತಾರೆ. "ನಮ್ಮಂಥೋರು ಈ ಭೂಮಿ ಮ್ಯಾಲೆ ಕೋಟಿ ಕೋಟಿ ಮಂದಿ ಬಂದು ಹೋಗ್ಯಾರ. ರಟ್ಟೆ ಮುರಿದು ರೊಟ್ಟಿ ಉಣ್ಣೋದರಲ್ಲಿ ಸುಖ ಐತಿ. ಆಸ್ತಿಗಾಗಿ ಬಡಿದಾಡೋದರಲ್ಲಿ ಸುಖ ಐತ್ಯೆ?" ಅಂತ ಪ್ರಶ್ನಿಸುತ್ತಾರೆ.

ಈ ಕಾಯಕಜೀವಿಯ ಜೀವನ ತತ್ವಕ್ಕೆ ಪಾಠವಾಗಬಲ್ಲ ಮತ - ತತ್ವ ಯಾವುದಾದರೂ ಇದೆಯೆ?

ಕಾರವಾರ: "ಚೆಂಬು" ಶೆಟ್ಟಿ ಕೈಗೆ ಕೆಡಿಎ!!


ಕೆ. ಶಂಭು ಶೆಟ್ಟಿ

ಕಾರವಾರ ಕಾಂಗ್ರೆಸ್ ದಿಗಿಲು ಬಿದ್ದಿದೆ! ಶಾಸಕ ಸತೀಶ್ ಸೈಲ್‌ನೇ ಸಾಕ್ಷಾತ್ ದಿಕ್ಕೆಟ್ಟಿದ್ದಾನೆ!! ಕಾರವಾರ ನಗರಾಭಿವೃದ್ಧಿ ಪ್ರಾಧಿಕಾರ (ಕೆಡಿಎ)ದ ಅಧ್ಯಕ್ಷತೆಗೆ ಅಯೋಗ್ಯ ಶಂಭು ಶೆಟ್ಟಿಯನ್ನು ನೇಮಿಸಿದ ಪ್ರಕಟಣೆ. ಬೆಂಗಳೂರಲ್ಲಿ ಹೊರಬೀಳುತ್ತಿದ್ದಂತೆಯೇ ಇತ್ತ ಕಾರವಾರದಲ್ಲಾದ ಗಡಿಬಿಡಿ-ಗೊಂದಲವಿದು. ಸ್ಥಳೀಯ ಕಾಂಗ್ರೆಸಿಗರಿಗಷ್ಟೇ ಅಲ್ಲ ಪಕ್ಷೇತರ ಶಾಸಕ ಸೈಲ್‌ನ ಬೆಂಬಲಿಗರಿಗೂ ಆಗದ ಮತ್ತು ಜನರೊಂದಿಗೆ ಧಿಮಾಕಿನಿಂದ ಮಾತಾಡುವ ಹಸಿಹುಂಬ ಶಂಭು ಶೆಟ್ಟಿಯನ್ನು ಕೆಡಿಎಗೆ ರೆಕಮೆಂಡ್ ಮಾಡಿದ ಮನೆಹಾಳ ಯಾರೆಂಬುದೇ ಜನರಿಗೆ ಅರ್ಥವಾಗುತ್ತಿಲ್ಲ. ಜಿಲ್ಲಾ ಮಂತ್ರಿ ದೇಶಪಾಂಡೆಯಾ? ಶಂಭುಶೆಟ್ಟಿಯ ತವರೂರು ಉಡುಪಿ ಮಂತ್ರಿ ಸೊರಕೆಯಾ? ಅಥವಾ ನಾಟಕ ಪ್ರವೀಣ ಶಾಸಕ ಸೈಲ್ ಸಾಹೇಬನಾ? ಈ ಪ್ರಶ್ನೆಗಳೇ ಈಗ ಊರತುಂಬ ಎದ್ದಿದ್ದು ಹಾರಾಡುತ್ತಿವೆ....


ಯಾವ ಕೋನದಿಂದ ನೋಡಿದರೂ ಶಂಭು ಶೆಟ್ಟಿಗೆ ಕಾರವಾರ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗುವ ಅರ್ಹತೆ ಇಲ್ಲವೆಂಬುದು ಕಣ್ಣಿಗೆ ರಾಚುತ್ತದೆ. ನಗರಸಭೆ ಸದಸ್ಯತ್ವಕ್ಕೆ ಸ್ಪರ್ಧಿಸಿದಾಗ ಜನರಿಂದ ತಿರಸ್ಕೃತನಾಗಿದ್ದ ಶಂಭು ಶೆಟ್ಟಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಿರುವುದು ವಿಪರ್ಯಾಸವೇ ಸರಿ. ಮೊದಲನೆಯದಾಗಿ ಈತ ನಿಷ್ಠಾವಂತ ಕಾಂಗ್ರೆಸಿಗನಲ್ಲ; ಶಾಸಕ ಸೈಲ್‌ನ ಖಾಸಗೀ ಚೇಲಾ. ಆದರೆ ಶಂಭು ಮಾತ್ರ ಮಾತೆತ್ತಿದರೆ ತಾನು ಬ್ಯಾಂಕ್ ನೌಕರ ಸಂಘ ಇಂಟೆಕ್ ಸಂಘಟಕ; ಕಾಂಗ್ರೆಸ್ ಕಟ್ಟಿ ಬೆಳೆಸಿದಾತ ಎಂದು ಒಂದೇಸಮನೆ ಬಡಬಡಿಸುತ್ತಾನೆ. ಹೊಟ್ಟೆಪಾಡಿಗೆ ಸಿಂಡಿಕೇಟ್ ಬ್ಯಾಂಕ್ ಚಾಕರಿ ಮಾಡಿಕೊಂಡಿದ್ದ ಈತ ಕಾರವಾರಕ್ಕೆ ಬಂದಿದ್ದು ಸದ್ರಿ ಉದ್ಯೋಗದ ನಿಮಿತ್ತ. ಅದೇನಾಯ್ತೋ ಏನೋ! ಇದ್ದಕ್ಕಿದ್ದಂತೆ ವಿಆರ್‌ಎಸ್ ತೆಗೆದುಕೊಂಡ ಶಂಭು ಶೆಟ್ಟಿ ಫರ್ನಿಚರ್ ಇಂಡಸ್ಟ್ರಿ ನಡೆಸುತ್ತೇನೆಂದು ಹೊಂಟಿದ್ದ. ಅಲ್ಲಿ ಇಲ್ಲಿ ಸಾಲ ಮಾಡಿಕೊಂಡು ದಿವಾಳಿ ಎದ್ದಿದ್ದ.


ಫರ್ನಿಚರ್ ದಂಧೆ ಬರ್ಕತ್ತಾಗದೇ ಹೋದರೂ ಪುಢಾರಿಗಿರಿ ಜೋರಾಗಿತ್ತು. ವಸಂತ ಅಸ್ನೋಟಿಕರ್ ಅಂಡರ್‌ವರ್ಲ್ಡ್‌ಗೆ ಆಹುತಿಯಾದಾಗ ಅಸ್ನೋಟಿಕರ್ ಫ್ಯಾಮಿಲಿ ಹಿತೈಷಿಯಾಗಿ ಒಳನುಸುಳಿದ್ದ ಈ ಅಧಿಕ ಪ್ರಸಂಗಿ ಅಲ್ಲಿ ಹೆಚ್ಚು ದಿನ ಉಳಿಯಲಿಲ್ಲ. ಶುಭಲತಾ ಎಮ್ಮೆಲ್ಲೆಯಾಗಿದ್ದಾಗ ಬೇಳೆ ಬೇಯಿಸಿಕೊಳ್ಳಲಾಗದೇ ಆನಂದ ಅಸ್ನೋಟಿಕರ್ ಮೇಲೆ ಸಿಟ್ಟಾಗಿದ್ದ. ಆನಂದ ಕಾಂಗ್ರೆಸ್ ಕ್ಯಾಂಡಿಡೇಟಾಗಿದ್ದಾಗ ಈ ಶಂಭು ಶೆಟ್ಟಿ ಬೆಂಬಲಿಸಿದ್ದು ಅಸ್ನೋಟಿಕರ್ ಫ್ಯಾಮಿಲಿ ಹಿತಶತ್ರು ಗಣಪತಿ ಉಳ್ವೇಕರ್‌ಗೆ! ಈ ಉಳ್ವೇಕರ್ ಗುರು ಪುತ್ರ ಆನಂದ್ ಜೊತೆ ರಾಜಿ ಮಾಡಿಕೊಂಡಾಗ ಶಂಭು ಶೆಟ್ಟಿ ಕಾಂಗ್ರೆಸ್ ಕ್ಯಾಂಡಿಡೇಟಾಗಿದ್ದ ಸತೀಶ್ ಸೈಲ್ ಕ್ಯಾಂಪಿಗೆ ಹಾರಿದ್ದ. ಆ ಬೈ ಎಲೆಕ್ಷನ್‌ನಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದ ಆನಂದ್ ಅಸ್ನೋಟಿಕರ್ ಎದುರು ಸೈಲ್ ಸೋಲಲು ಈ ಶಂಭುಶೆಟ್ಟಿಯ 'ಪ್ರಚಾರ ವೈಖರಿ'ಯೂ ಒಂದು ದೊಡ್ಡ ಕಾರಣವಾಗಿತ್ತು.


ಎಲ್ಲ ತನಗೆ ಗೊತ್ತಿದೆ ಎಂದು 'ಸರ್ವಜ್ಞ' ಗೆಟಪ್‌ನಲ್ಲಿ ಹಾರಾಡುವ ಶಂಭುಶೆಟ್ಟಿಯ ಅಹಂಕಾರ ತನಗೆ ಮುಳುವಾಗಿದ್ದು ಸೈಲ್‌ಗೆ ಗೊತ್ತಾಗಿತ್ತು. ಈ ಶಂಭುನನ್ನು 'ಆಫೀಸ್ ಬಾಯ್' ಮಾಡಿ ರೂಮಲ್ಲಿ ಕೂಡಿಹಾಕಿದ್ದ. ಈತ ಪ್ರಚಾರಕ್ಕೆಂದು ಫೀಲ್ಡಿಗೆ ಹೋದರೆ ಗಂಡಾಂತರ ಖಂಡಿತ ಎಂಬುದು ಸೈಲ್‌ಗೆ ಖಾತ್ರಿಯಾಗಿತ್ತು. ಹಾಗಂತ ಆಜ್ಞಾಧಾರಕನಾಗಿ ತನ್ನ ಸೇವೆ ಮಾಡುವ ಶಂಭುನನ್ನೂ ದೂರ ಮಾಡುವ ಮನಸ್ಸು ಆತನಿಗೆ ಶಾಸಕನಾದಾಗಲೂ ಬರಲಿಲ್ಲ. ಶಂಭು ಶೆಟ್ಟಿಯನ್ನು ಬಗಲಲ್ಲಿಟ್ಟುಕೊಂಡಿರುವುದೇ ಸೈಲ್‌ನ ಹೆಸರು ಕೆಡಲು ಕಾರಣವೆಂದು ಕಾರವಾರದಲ್ಲಿ ಯಾರನ್ನು ಕೇಳಿದರೂ ಹೇಳುತ್ತಾರೆ.

ಶಂಭು ಶೆಟ್ಟಿ ಆದಿರು ಕಳ್ಳ ಸತೀಶ್ ಸೈಲ್‌ನ ನಿಷ್ಠಾವಂತ ಬಂಟ ಎಂಬುದರಲ್ಲಿ ಎರಡು ಮಾತಿಲ್ಲ. ದೇವರ ತಲೆ ಮೇಲಿನ ಹೂ ತಪ್ಪಿದರೂ, ಶಂಭು ಸೈಲ್ ಮನೆ ಬಾಗಿಲು ಕಾಯೋದು ತಪ್ಪೋದಿಲ್ಲ. ಸೈಲ್ ಜೈಲು ಪಾಲಾದಾಗ ಆತನಿಗೆ ಬೇಕಾದ್ದು ಸಪ್ಲೈ ಮಾಡುತ್ತಿದ್ದುದ್ದು, ಲೀಗಲ್ ಕೆಲಸದ ದೇಖರೇಖಿ ನೋಡುತ್ತಿದ್ದುದು, ಶಾಸಕಗಿರಿ ಕಾರವಾರದಲ್ಲಿ ನಿಭಾಯಿಸುತ್ತಿದ್ದುದು ಇದೇ ಶಂಭು ಶೆಟ್ಟಿ! ಸರ್ಕಾರಿ ಕಚೇರಿಗಳಿಗೆಲ್ಲಾ ನುಗ್ಗಿ ಕೇಂಕರಿಸುತ್ತಿದ್ದ ಈ ನಕಲಿ ಶಾಸಕನ ದಂಡು ಹಫ್ತಾ ವಸೂಲಿಗೂ ಇಳಿದಿತ್ತು. ಕಾಮಗಾರಿಗಳನ್ನು ಪೀಸ್-ಪೀಸ್ ವರ್ಕ್ ಮಾಡಿ ಬೇಕಾದವರಿಗೆ ಹಂಚಿ ಪರ್ಸೆಂಟೇಜ್ ಪಡೆದದ್ದೂ ಇದೆ. ಸೈಲ್ ಶಾಸಕನಾದ ಒಂದೇ ವರ್ಷದಲ್ಲಿ ಶಂಭು ಶೆಟ್ಟಿಯ ದಾರಿದ್ರ್ಯ ನೀಗಿದೆಯೆಂದು ಕುಹಕವಾಡುವವರು ಕಾರವಾರದಲ್ಲೇನೂ ಕಮ್ಮಿಯಿಲ್ಲ. ಆಗಲೇ ಶಂಭು ಶೆಟ್ಟಿಗೆ ಚೆಂಬು ಶೆಟ್ಟಿ ಎಂಬ ಬಿರುದು ಬಂದಿದ್ದು!!


ಉಡುಪಿ ಮೂಲದ ಬಂಟರ ಮನೆತನದ ಶಂಭು ಶೆಟ್ಟಿ ಕಾರವಾರದಲ್ಲೇ ಕಳೆದ 25 ವರ್ಷದಿಂದ ಠಿಕಾಣಿ


ದೇಶಪಾಂಡೆ


ವಿನಯಕುಮಾರ್ ಸೊರಕೆ


ಸತೀಶ್ ಸೈಲ್

ಮಲೆಬೆನ್ನೂರು: 'ಲಯನ್ಸ್' ಶಿಕ್ಷಣ ಸಂಸ್ಥೆಯಲ್ಲಿ ಬಸವರಾಜನ ಲೂಟಿ ಪುರಾಣ



ಹರಿಹರ ತಾಲೂಕಿನ ನಂದೀಗುಡಿಯ ವೃಷಭಾಪುರಿ ಮಠಕ್ಕೆ ಕಳಂಕದ ಕಿರೀಟವಿಟ್ಟು ಕೋಟ್ಯಾಂತರ ರೂಪಾಯಿಗೆ ಎಳ್ಳೂನೀರು ಬಿಟ್ಟ ಡಾ.ಟಿ.ಬಸವರಾಜ ಬರೀ ಮಠವನ್ನು ಮಾತ್ರ ನುಂಗಲಿಲ್ಲ, ಈತ ಹೆಚ್ಚೂಕಮ್ಮಿ 1980 ರಿಂದಲೂ ಮಲೆಬೆನ್ನೂರು ಲಯನ್ಸ್ ಎಜುಕೇಶನ್ ಅಸೋಸಿಯೇಶನ್ ಎಂದ ಶಿಕ್ಷಣ ಸಂಸ್ಥೆಯನ್ನೂ ಲೂಟಿ ಹೊಡೆದಿರುವ ಆಸಾಮಿ.

ಲಕ್ಷಾಂತರ ಭಕ್ತರಿರುವ ಮಠದ ಕೋಟ್ಯಾಂತರ ರೂಪಾಯಿ ಲೂಟಿಹೊಡೆದ ಬಸವರಾಜನಿಗೆ ಶಿಕ್ಷಣ ಸಂಸ್ಥೆಯಿಂದ ದೋಚುವುದೇನು ಮಹಾ ಕೆಲಸವೇನಲ್ಲ. ಹೇಗೆ ಮಠದಲ್ಲಿ ಸಂರಕ್ಷಣಾ ಸಮಿತಿ ಕಟ್ಟಿ ತಾನೇ ಕೀ ಪೋಸ್ಟಲ್ಲಿ ಕೂತು ಕೋಲೆಬಸವನಂತೆ ವರ್ತಿಸುವ ಜನರನ್ನೇ ನಿರ್ದೇಶಕರನ್ನಾಗಿ ಮಾಡಿ ಮೆರೆದನೋ ಹಾಗೆಯೇ ಈ ಲಯನ್ಸ್ ಎಜುಕೇಶನ್ ಅಸೋಸಿಯೇಷನ್‌ನಲ್ಲೂ ಗಾಂಪರ ಗುಂಪೊಂದನ್ನು ಕಟ್ಟಿಕೊಂಡು ಕೊಳ್ಳೆ ಹೊಡೆಯುತ್ತಿದ್ದಾನೆ.

ಹಾಗೆ ನೋಡಿದರೆ ಈ ಅಸೋಸಿಯೇಷನ್‌ನ ಕಮಿಟಿಯಲ್ಲಿ ಸಾಮಾನ್ಯರೇನಿಲ್ಲ, ಏಳು ಜನ ನಿರ್ದೇಶಕರಲ್ಲಿ ಅಧ್ಯಕ್ಷರಾಗಿರುವ ಹೆಚ್.ಜಿ.ಚಿದಾನಂದಪ್ಪ ಶ್ರೀಮಂತ ಕುಳವೇ. ಇದೇ ಡಾ.ಟಿ.ಬಸವರಾಜ ಕಾರ್ಯದರ್ಶಿ. ಡಾ.ಎಸ್.ಎಸ್.ಸಾತೇನಹಳ್ಳಿ ನಿರ್ದೇಶಕ. ಡಾ. ಚಂದ್ರಕಾಂತ, ಮಾರಪ್ಪ, ಚಿದಾನಂದಪ್ಪ, ಬಿ.ವೀರಯ್ಯ, ಇವರೆಲ್ಲರೂ ನೊಳಂಬ ಲಿಂಗಾಯತ ಸಮುದಾಯದಲ್ಲಿ ಗೌರವಕ್ಕೆ ಪಾತ್ರರಾಗಿರುವವರು. ಆದರೂ ಇವರೆಲ್ಲ ಬಸವರಾಜನ ಕಳ್ಳವ್ಯವಹಾರಗಳು ಕಂಡರೂ ಸುಮ್ಮನಿರುವುದೇ ಅಚ್ಚರಿಯ ಸಂಗತಿ.

ಬಸವರಾಜ 1979-80ರಲ್ಲಿ ಆರಂಭಗೊಂಡ ಮಲೆಬೆನ್ನೂರು ಲಯನ್ಸ್ ಕ್ಲಬ್ಬಿಗೆ ಮೊದಲು ಗಂಟುಬಿದ್ದ. ಹಾಗೆ ಕ್ಲಬ್ಬನ್ನು ಹೊಕ್ಕವನು ಜಿಲ್ಲಾ ಗೌವರ್ನರಾಗಿಯೂ ನೇಮಕಗೊಂಡ. ಅಂದಿನಿಂದ ಲಯನ್ಸ್ ಕ್ಲಬ್ಬನ್ನು ತನ್ನ ಹಿಡಿತದಲ್ಲೇ ಇಟ್ಟುಕೊಂಡಿದ್ದಾನೆ. ಬಸವರಾಜನ ಮಗ ಡಾ. ಅಪೂರ್ವ, ಅವನ ಸೊಸೆ ಡಾ.ಪ್ರೀತಿ ಅಪೂರ್ವ ಮತ್ತು ಬಸವರಾಜನ ಖಾಸಾ ಅಳಿಯ ಶಾಂತರಾಜ ಇವತ್ತು ಕ್ಲಬ್ಬಿನ ಕಾರ್ಯದರ್ಶಿಗಳಾಗಿದ್ದಾರೆ. ಅಲ್ಲಿಗೆ ಲಯನ್ಸ್ ಕ್ಲಬ್ ಬಸವರಾಜ ಅಂಡ್ ಫ್ಯಾಮಿಲಿಯ ಖಾಸಗಿ ಕ್ಲಬ್‌ನಂತಾಗಿಹೋಗಿದೆ.

ಮಲೆಬೆನ್ನೂರಿಗೆ ಆದ್ಯಾವಾಗಲೋ ಒಕ್ಕರಿಸಿಕೊಂಡ ಜೆ.ಎಂ.ಜೈನ್ ಎಂಬ ಮಾರ್ವಾಡಿ ಮಲೆಬೆನ್ನೂರಿನ ರಾಜಕಾರಣವಷ್ಟೆ ಅಲ್ಲದೆ ಆರ್ಥಿಕ ಮಹಿವಾಟಿನ ಮೇಲೆ ಹಿಡಿತ ಸಾಧಿಸಿದ್ದಾನೆ. ಇಂಥಾ ಮಾರ್ವಾಡಿಯನ್ನ ಬಸವರಾಜ ಲಯನ್ಸ್ ಕ್ಲಬ್ಬಿನ ಮೆಂಬರ್ ಮಾಡಿದ್ದಾನೆ. ಅಷ್ಟೇ ಅಲ್ಲ, ಈ ಜೆ.ಎಂ. ಜೈನ್‌ನ ಸಹೋದರ ಆರ್.ಎಂ.ಜೈನ್ ಕ್ಲಬ್ಬಿನ ಸದಸ್ಯನಾಗಿರದಿದ್ದರೂ 2014ರಲ್ಲಿ ಅದೇ ಕ್ಲಬ್ಬಿನ ಅಧ್ಯಕ್ಷ ಕೂಡ ಆಗಿದ್ದ. ಎಲ್ಲಾ ಬಸವರಾಜನ ಮಹಿಮೆ!

ಇದು ಕ್ಲಬ್ಬಿನ ಕಥೆಯಾದರೆ ಲಯನ್ಸ್ ಎಜುಕೇಶನ್ ಅಸೋಸಿಯೇಶನ್‌ನದ್ದು ಮತ್ತೊಂದು ಕರ್ಮಕಥೆ. 1989ರಲ್ಲಿ ಈ ಶಿಕ್ಷಣ ಸಂಸ್ಥೆಯೆಂಬ ವ್ಯಾಪಾರೀಕರಣಾರದ ಅಂಗಡಿ ಪ್ರಾರಂಭವಾಯಿತು. 2005-06ರಲ್ಲಿ ಸರ್ಕಾರದ ಅನುದಾನದಲ್ಲಿ ಎಲ್.ಕೆ.ಜಿ.ಯಿಂದ ಏಳನೇ ತರಗತಿಯ ವರೆಗೂ ಕನ್ನಡ ಮಾಧ್ಯಮದ ಶಾಲೆಯನ್ನು ಆರಂಭಿಸಿತು. ಅಂದಿನಿಂದ ಇಲ್ಲಿಯವರೆಗೆ 1,250 ಮಕ್ಕಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಪ್ರತೀವರ್ಷ ಅಪಾರ ಮೊತ್ತದ ಡೊನೇಷನ್ ಕಟ್ಟಿಸಿಕೊಳ್ಳಲಾಗುತ್ತದೆ. ಅದರ ಜೊತೆಗೆ ಅಡ್ಮಿಶನ್ ಫೀ ಅಂತ ಪೋಷಕರಿಂದ 3,000- 3,500 ರೂಪಾಯಿಗಳನ್ನು ಕೀಳಲಾಗುತ್ತಿದೆ. ಅದೊಂದು ಬಾಬತ್ತೆ ಕಳೆದ ಒಂದು ದಶಕದಲ್ಲಿ ಕೋಟಿ ರೂಪಾಯಿಗಳನ್ನು ದಾಟುತ್ತದೆ.

ಕಳೆದ ಹಲವಾರು ವರ್ಷಗಳಿಂದ ಇಂತಹ ಸಂಸ್ಥೆಯ ಆಡಳಿತ ಮಂಡಳಿಯ ಕಾರ್ಯದರ್ಶಿಯಾಗಿರುವವನು ಇದೇ ಬಸವರಾಜ. ಮೊದಲೇ ಹೇಳಿದಂತೆ ಇಲ್ಲೂ ಏಳು ಜನ ಕೋಲೆಬಸವರನ್ನು ನಿರ್ದೇಶಕರನ್ನಾಗಿ ಇಟ್ಟುಕೊಂಡಿರುವ ಬಸವರಾಜ. ಲೂಟಿ ಹೊಡೆಯುತ್ತಿದ್ದಾನೆ. ಇದಕ್ಕೆ ಒಂದು ಉದಾಹರಣೆಯೆಂದರೆ ಇದರ ಬ್ಯಾಂಕ್ ಅಕೌಂಟಿನ ನಿಗೂಢತೆ.

ಮಲೆಬೆನ್ನೂರಿನ ಶ್ರೀ ನಂದಿಪತ್ತಿನ ಸಹಕಾರ ಸಂಘದಲ್ಲಿ ಶಾಲಾ ಕಮಿಟಿ ಅಧ್ಯಕ್ಷ ಗುರುಸಿದ್ದಪ್ಪ (ಈಗವರಿಲ್ಲ) ಹಾಗು ಕಾರ್ಯದರ್ಶಿ ಬಸವರಾಜನ ಹೆಸರುಗಳಲ್ಲಿ ಜಾಯಿಂಟ್ ಖಾತೆ (ನಂಬರ್ 978) ತೆರೆಯಲಾಗಿತ್ತು. ಆದರೆ ಇದು ನಾಮಕಾವಸ್ತೆ ಅಕೌಂಟಷ್ಟೇ. ಯಾಕೆಂದರೆ ಈ ಖಾತೆಗೆ ಜಮಾ ಆಗುತ್ತಿದ್ದದ್ದು ಬಿಡಿಗಾಸು. ಆದರೆ ಅದೇ ಸಹಕಾರ ಸಂಘದಲ್ಲಿರುವ ಬಸವರಾಜನ ಖಾಸಗಿ ಅಕೌಂಟಿಗೆ (ನಂಬರ್ 1605/ಎ) ಪ್ರತಿ ಬಾರಿ ಜಮೆ ಆಗುತ್ತಿದ್ದದ್ದು ಸಾವಿರಗಟ್ಟಲೆ. ಬಸವರಾಜನ ಅಕೌಂಟಿಗೆ ಶಾಲೆಯ ದುಡ್ಡು ಹರಿದುಬರುತ್ತಿದೆ ಎಂಬುದು ಬಯಲಾಗುತ್ತಿದ್ದಂತೆ ಇತ್ತೀಚೆಗೆ ಬಸವರಾಜ ತನ್ನ ಖಾತೆಯನ್ನು ರದ್ದುಮಾಡಿದ್ದಾನೆ. ನಿಜವಾಗಲೂ ಬಸವರಾಜ ಸರ್ಕಾರದಿಂದಲೂ, ಸಂಸ್ಥೆಯಿಂದಲೂ ದೋಚಿರುವ ಹಣ ಎಷ್ಟು ಎಂಬುದು ತನಿಖೆ ಆಗಬೇಕಿದೆ.

ಅದೆಲ್ಲಾ ಏನೇ ಇರಲಿ, ಕಳೆದ ಹಲವಾರು ವರ್ಷಗಳಿಂದ ಈ ಲಯನ್ಸ್ ಎಜುಕೇಶನ್ ಸೊಸೈಟಿಯ ಕಮಿಟಿ ಮೀಟಿಂಗನ್ನೇ ಬಸವರಾಜ ಕರೆದೇ ಇಲ್ಲ. ಮೀಟಿಂಗ್ ಕರೀ ಅಂತಾ ಬಸವರಾಜನಿಗೆ ಹೇಳುವ ತಾಕತ್ತು ಯಾವ ನಿರ್ದೇಶಕನಿಗೂ ಇಲ್ಲ. ಇದೆಲ್ಲದರಿಂದ ಕೊನೆಗೂ ರೋಸತ್ತಿ ಹೋದವರು ನಿರ್ದೇಶಕರಲ್ಲಿ ಒಬ್ಬರಾದ ಬಿ.ವೀರಯ್ಯ, ಕಳೆದ ವರ್ಷ ವೀರಯ್ಯನವರು ಖುದ್ದು ಅಧ್ಯಕ್ಷ ಮತ್ತು ಕಾರ್ಯದರ್ಶಿಗೆ ನೋಟಿಸ್ ನೀಡಿ "1992 ರಿಂದ 2014 ರವರೆಗೆ ಆಡಳಿತ ಮಂಡಳಿಯ ಮೀಟಿಂಗ್ ಕರೆದೇ ಇಲ್ಲ. ಸಂಸ್ಥೆಗೆ ಬಂದ ದುಡ್ಡು ಶಾಲಾಭಿವೃದ್ಧಿಗೆ ಬಳಕೆ ಆಗಿಲ್ಲ. ಶಾಲೆ ಅದ್ವಾನಗಳ ಗೂಡಾಗಿದೆ. ಇದೆಲ್ಲದರ ಬಗ್ಗೆ ಚರ್ಚೆ ಆಗಬೇಕು" ಎಂದು ಹೇಳಿದರು.

ತನ್ನನ್ನೇ ಪ್ರಶ್ನಿಸಿದ್ದಕ್ಕೆ ಬಸವರಾಜನ ಪಿತ್ಥ ನೆತ್ತಿಗೇರಿತು. ಆತ 27.12.2014 ರಂದು ವೀರಯ್ಯನವರಿಗೆ ಒಂದು ನೋಟಿಸ್ ನೀಡಿ. "1992 ರಿಂದ 2013 ರವರೆಗೂ ಅಧ್ಯಕ್ಷರಾದ ಗುರುಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆದುಕೊಂಡು ಬಂದಿದೆ. 2013 ರಿಂದ 2014ರ ವರೆಗೆ 12 ಸಭೆಗಳು ನಡೆದಿವೆ. ನಿರ್ದೇಶಕರಾದ ತಮಗೂ ಸಭೆ ನಡೆಯುವ ಸಂಗತಿಯ ಬಗ್ಗೆ, ಸಭೆಯಲ್ಲಿ ಬರುವ ನಡಾವಳಿಯ ಬಗ್ಗೆ ಮಾಹಿತಿ ನೀಡಿದ್ದರೂ 12 ಸಭೆಗಳಿಗೆ

ಹೊಡೆದಿದ್ದಾನೆ. ಇವತ್ತಿಗೂ ಬಾಡಿಗೆ ಮನೆಯಲ್ಲಿರುವ ಈತನ ಆಸ್ತಿ-ದೌಲತ್ತು ಸ್ಥಳೀಯರಲ್ಲಿ ಬೇಸರ ಮೂಡಿಸಿ ಬಿದ್ದಾವುದೋ ಕಾಲವಾಗಿದೆ. ಹೀಗಾಗಿಯೇ ಆತನಿಂದ ಕಾರವಾರ ನಗರಸಭೆ ಚುನಾವಣೆಯಲ್ಲಿ ಗೆಲ್ಲಲಿಕ್ಕಾಗಲಿಲ್ಲ! ಆಗಂತ ಧಿಮಾಕು-ಅಧಿಕ ಪ್ರಸಂಗವೇನೂ ಬಿಟ್ಟಿಲ್ಲ. ಇಂಥ ಜನರಿಗೆ ಬೇಡದ ಶಂಭುಶೆಟ್ಟಿ ಕಂಡರೆ ಶಾಸಕ ಸೈಲ್‌ಗೆ ಮಾತ್ರ ಏನೋ ಮುಲಾಜು-ಬಿಥೆ!! ತಾನು ಜೈಲಲ್ಲಿದ್ದಾಗ ಸೇವೆ ಮಾಡಿಕೊಂಡಿದ್ದ ಶಂಭುಗೆ ಕೆಡಿಎ ಕುರ್ಚಿ ಇನಾಮಾಗಿ ನೀಡಲು ಆತ ನಿರ್ಧಾರ ಮಾಡಿದ್ದರು. ಶಂಭು ಶೆಟ್ಟಿ ಕಾಡ ತನ್ನ ಜೀವನದ ಈ ಕೊನೆ ಆಸೆ ಈಡೇರಿಸುವಂತೆ ಶಾಸಕ ಸಾಹೇಬರಿಗೆ ದುಂಬಾಲು ಬಿದ್ದಿದ್ದ. ಬೆಂಬಲಿಗರು ಶಂಭು ಶೆಟ್ಟಿಗೆ ಕೆಡಿಎ ಕಾರು ಕೊಡಿಸಿದರೆ ಇಮೇಜಿಗೆ ಧಕ್ಕೆಯಾಗುತ್ತದೆಂದು ಎಷ್ಟೇ ಹೇಳಿದರೂ ಸೈಲ್ ಋಣಭಾರದಲ್ಲಿ ಅಸಹಾಯಕನಾಗಿ ಹೋಗಿದ್ದ. ಸೈಲ್‌ನ ವೀಕ್ನೆಸ್ ಸ್ಪಡಿ ಮಾಡಿದ್ದ ಚಾಲಾಕಿ ಶಂಭು ಶೆಟ್ಟಿ ಒಂದು ಹಂತದಲ್ಲಿ ಬ್ಲ್ಯಾಕ್‌ಮೇಲ್ ಮಾಡಿಯೇ ಕೆಡಿಎ ಹೊಡೆದುಕೊಂಡಿದ್ದಾನೆ.

ಶಾಸಕ ಸೈಲ್‌ನ ರೆಕಮೆಂಡೇಷನ್ ಪತ್ರ ಪಡೆದುಕೊಂಡಿದ್ದ ಶಂಭು ಶೆಟ್ಟಿ ಅದನ್ನು ಹಿಡಿದುಕೊಂಡು ನಗರಾಭಿವೃದ್ಧಿ ಮಂತ್ರಿ ವಿನಯಕುಮಾರ್ ಸೊರಕೆ ಆಫೀಸಿನಲ್ಲಿ ವರ್ಕ್‌ಔಟ್ ಮಾಡಿದ್ದಾನೆ. ಉಡುಪಿ ಮೂಲದ ನಂಟು ಬಳಸಿ ಸ್ವಜಾತಿ ಮಂಟರ ಲಾಬಿ ಪ್ರಯೋಗಿಸಿ ಕೆಡಿಎ ಪೀಠವೇರಲು ಪರ್ಯಾಚರಣೆ ನಡೆಸಿದ್ದಾನೆ. ಇದಕ್ಕೆ ಜಿಲ್ಲಾ ಉಸ್ತುವಾರಿ ಮಂತ್ರಿ ದೇಶಪಾಂಡೆಯೂ ಒಪ್ಪಿಗೆಯ ಮುದ್ರೆ ಒತ್ತಿದ್ದಾರೆ. ಹಾಗೆ ದೇಶಪಾಂಡೆ ಸಮ್ಮತಿ ಸೂಚಿಸಲು ನಿಗೂಢ ಕಾರಣವೂ ಇಂದಿತ್ತು. ಮಂತ್ರಿ ದೇಶಪಾಂಡೆ ಬಳಿ ತಾನು ಸೈಲ್‌ಗಿಂತ ನಿಮಗೇ ಹೆಚ್ಚು ನಿಷ್ಠಾವಂತನೆಂದು ಹೇಳಿ ಮಸ್ಕಾ ಹೊಡೆದಿದ್ದಾನೆ ಶಂಭು ಶೆಟ್ಟಿ! ಕಳೆದ ಲೋಕಸಭಾ ಎಲೆಕ್ಷನ್‌ನಲ್ಲಿ ತನ್ನ ಕುಲಕಂಠೀರವನಿಗೆ ಕಾರವಾರದಲ್ಲಿ ಸೈಲ್ ಲೀಡ್ ಕೊಡಿಸಲಾಗಲಿಲ್ಲವೆಂಬ ಆಕ್ರೋಶದಿಂದ ಇವತ್ತಿಗೂ ಬುಸುಗುಡುತ್ತಿರುವ ದೇಶಪಾಂಡೆ ಸೇಡು ತೀರಿಕೆಗೆ ಕೆಡಿಎ ಪೀಠ ಪ್ರಧಾನ ಬಳಸಿಕೊಂಡಿದ್ದಾರೆ!


ದೇಶಪಾಂಡೆ ತಲೆ ಮಾಸಿದ ಅನುಭವಿ. ಆತನಿಗೆ ಗೊತ್ತು; ಶಂಭು ಶೆಟ್ಟಿಯನ್ನು ಕೆಡಿಎದಲ್ಲಿ ಪ್ರತಿಷ್ಠಾಪಿಸಿದರೆ ಸೈಲ್‌ಗೆ ಹಾನಿಯೇ ಹೆಚ್ಚೆಂದು! ದುರಹಂಕಾರಿ- ಒಣ ಜರಟನೆಂದು ಹೆಸರು ಪಡೆದಿರುವ ಶಂಭು ಶೆಟ್ಟಿ ಕಂಡರೆ ಕಾರವಾರದಲ್ಲಿ ಯಾರಿಗೂ ಆಗದೆಂಬುದು ದೇಶಪಾಂಡೆಗೆ ಗೊತ್ತಿರುವ ಸಂಗತಿಯೇ. ಇಂಥವನನ್ನು ಕೆಡಿಎಗೆ ತಂದ ಅಪಕೀರ್ತಿ ಸೈಲ್‌ಗೆ ಸುತ್ತಿಕೊಂಡರೆ ಸಹಜವಾಗೇ ದೇಶಪಾಂಡೆಗೆ ಖುಷಿಯಾಗುತ್ತದೆ. ಮತ್ತೊಂದು ಕಡೆಯಿಂದ ಶಂಭು ಶೆಟ್ಟಿಯನ್ನು ಸೈಲ್‌ನ ಮೇಲೆಯೇ ಛೂಬಿಡಲಿಕ್ಕಾಗುತ್ತದೆಂಬ ದೂ (ದು)ರಾಲೋಚನೆ "ಹಿರಿಯ ನಾಯಕ" ದೇಶಪಾಂಡೆಯದಾಗಿತ್ತು, ದೇಶಪಾಂಡೆ ಲೆಕ್ಕಾಚಾರ ಹಾಕಿದಂತೆಯೇ ಆಗಿದೆ. ಒಣ ಪ್ರತಿಷ್ಠೆಯ ಶಂಭು ಶೆಟ್ಟಿಯನ್ನು ಕೆಡಿಎಗೆ ತಂದವನೇ ಶಾಸಕ ಸೈಲ್ ಎಂದು ಕಾಂಗ್ರೆಸ್ ಕಾರ್ಯಕರ್ತರು, ಆತನ ನಿಷ್ಠ ಅನುಯಾಯಿಗಳು ಮತ್ತು ಜನಸಾಮಾನ್ಯರು ಉಗುಳುತ್ತಿದ್ದಾರೆ.

ಇದರಿಂದ ಕಕ್ಕಾಬಿಕ್ಕಿಯಾಗಿರುವ ಸೈಲ್ ತಾನು ಶಂಭು ಶೆಟ್ಟಿ ಪರವಾಗಿ ಪ್ರಯತ್ನ ಮಾಡಿಲ್ಲ, ಆತ ಮಂತ್ರಿ ಸೊರಕೆ ಹಿಡಿದುಕೊಂಡು ಕೆಲಸ ಮಾಡಿಸಿಕೊಂಡು ಬಂದಿದ್ದಾನೆಂದು ಕಂಡಕಂಡವರ ಮುಂದೆ ಅಲವತ್ತುಕೊಳ್ಳುತ್ತಿದ್ದಾನೆ. ತಾನು ಸಪೋರ್ಟ್ ಮಾಡಿದ್ದು ಬಹುಸಂಖ್ಯಾತ ಕೋಮಾರಪಂತ ಸಮಾಜದ ಮೋಹನ ನಾಯ್ಕ್‌ಗೆ ಎಂದು ರೈಲು ಬಿಡುತ್ತಿದ್ದಾನೆ. ವಾಸ್ತವವಾಗಿ ಸೈಲ್ ನೆಪಕ್ಕಷ್ಟೇ ಮೋಹನ ನಾಯಕ್‌ಗೆ ಒಂದು ಶಿಫಾರಸು ಪತ್ರ ಕೊಟ್ಟಿದ್ದ, ಮನಃಪೂರ್ವಕವಾಗಿ ಪ್ರಯತ್ನ ನಡೆಸಿದ್ದು ಆಜ್ಞಾನುಧಾರಿ ಸೇವಕ ಶಂಭು ಶೆಟ್ಟಿಗಾಗಿ!!

ನಿಷ್ಠಾವಂತ ಕಾಂಗ್ರೆಸಿಗರಂತೂ ನಾಲಾಯಕ್ ಶಂಭು ಶೆಟ್ಟಿ ನೇಮಕಾತಿ ಕೇಳಿ ಉರಿದುರಿದು ಬೀಳುತ್ತಿದ್ದಾರೆ. ಕಳೆದ ಎಲೆಕ್ಷನ್‌ನಲ್ಲಿ ಕಾಂಗ್ರೆಸ್ ವಿರುದ್ಧ ಕೆಲಸ ಮಾಡಿದ್ದ ಶಂಭು ಶೆಟ್ಟಿಗೆ ಕೆಡಿಎ ಹುದ್ದೆ ಕೊಟ್ಟಿದ್ದು ದೇಶಪಾಂಡೆ ಪ್ರಮಾದ ಎಂದು ಕಾಂಗ್ರೆಸಿಗರು ಹೇಳುತ್ತಿದ್ದಾರೆ. ಸೈಲ್-ಸೊರಕೆ ಮಾಡಿದ ಕಿತಾಪತಿಗೆ ಬಲಾಢ್ಯ ಮಂತ್ರಿ ದೇಶಪಾಂಡೆಯಿಂದ ಕಡಿವಾಣ ಹಾಕಲಾಗಲಿಲ್ಲವೆಂದರೆ ನಂಬೋರ್‍ಯಾರು? ಒಟ್ಟಿನಲ್ಲಿ ಜನರೊಂದಿಗೆ ಬೆರೆಯದ ಶಂಭು ಶೆಟ್ಟಿಗೆ ಕೆಡಿಎದ ಗೂಟದ ಕಾರಿನ ಭಾಗ್ಯ ಬಂದಿರುವುದು ಕಾರವಾರದಲ್ಲಿ ಅಸಹ್ಯ ಮೂಡಿಸಿ ಬಿಟ್ಟಿದೆ. ಕಾರವಾರ ನಗರದ ಸಮಸ್ಯೆ ಈ ಶಂಭು ಶೆಟ್ಟಿಯಿಂದ ಪರಿಹರಿಸಲು ಸಾಧ್ಯವೇ ಇಲ್ಲವೆಂಬುದು ಸಾರ್ವತ್ರಿಕ ಅಭಿಪ್ರಾಯ. ಜನಸಾಮಾನ್ಯರೆಂದರೆ ಈ ವಲಸಿಗನಿಗೆ ಯಾವಾಗಲೂ ಅಲರ್ಜಿ. ಹೀಗಿರುವಾಗ ಕಾರವಾರಿಗರಿಗೇನು ಪ್ರಯೋಜನ ಶಂಭು ಶೆಟ್ಟಿಯಿಂದ.

ಶಂಭುಶೆಟ್ಟಿ ಕೆಡಿಎ ಅಧ್ಯಕ್ಷನಾಗಿರುವುದರಿಂದ ಆತನ ದೆಸೆ ಬದಲಾದೀತು; ಕಾರವಾರಿಗರಿಗೆ ಅಥವಾ ಕಾಂಗ್ರೆಸ್‌ಗೆ ಏನೂ ಪ್ರಯೋಜನವಿಲ್ಲ. ಶಾಸಕ ಸೈಲಗಂತೂ ದೊಡ್ಡ ಡ್ಯಾಮೇಜ್ ಖಂಡಿತ. ಕೆಡಿಎ ಅಧ್ಯಕ್ಷತೆಗೆ ಅರ್ಹರಾದ ಹಲವು ನಿಷ್ಠಾವಂತ ಕಾಂಗ್ರೆಸಿಗರಿರುವಾಗ ಮಂತ್ರಿ ದೇಶಪಾಂಡೆ ತನ್ನ ಹಿಡನ್ ಹಠ ತೀರಿಸಿಕೊಳ್ಳಲು ದಂಡಪಿಂಡ ಶಂಭು ಶೆಟ್ಟಿಗೆ ಪಟ್ಟ ಕಟ್ಟಿದ್ದು ಪಾರ್ಟಿಯಲ್ಲಿ ದೊಡ್ಡ ಅಸಮಾಧಾನದ ಹೊಗೆ ಸೃಷ್ಟಿಸಿದೆ. ಒಳಗಿನ ಬೆಂಕಿ ಕಾಂಗ್ರೆಸ್ ಮತ್ತು ಸೈಲ್‌ನನ್ನು ಸುಟ್ಟು ಹಾಕೋದು ಗ್ಯಾರಂಟಿ!

■ನಹುಷ



...ವೇ ಹಾಜರಾಗಿಲ್ಲ, ಆದ್ದರಿಂದ ನಿಮ್ಮನ್ನು ಸಂಸ್ಥೆಯ ...ವಸ್ಥದಿಂದ ವಜಾ ಮಾಡಬಾರದೇಕೆ?" ಎಂದು ಬೆದರಿಕೆ ...ಕಿದೆ. ಇದು ಬಸವರಾಜನ ಕಾರ್ಯವೈಖರಿಯ ಪರಿ.

ಈ ಬಸವರಾಜನ ಧರ್ಮಪತ್ನಿಯ ಹೆಸರು ...ದಾನಂದಮ್ಮ. ಈಕೆ ಮಾಜಿ ನರ್ಸ್ (ಇವರಿಬ್ಬರು ...ತೆಗೂಡಿಯೇ ನಂದೀಗುಡಿಯ ನಂದೀಶ್ವರರನ್ನು ಮಠ ...ಟ್ಟು ಓಡಿಸುವ ಪ್ಲಾನ್ ಮಾಡಿದ್ದು) 2006ರಿಂದ 2011 ...ವರೆಗೆ ಜೆಡಿಎಸ್ ಅಭ್ಯರ್ಥಿಯಾಗಿ ಈಕೆ ಮಲೆಬೆನ್ನೂರು ...ಜಿಲ್ಲಾ ಪಂಚಾಯತಿಗೆ ಆಯ್ಕೆಯಾಗಿದ್ದಳು. ಗಂಡ ...ಬಸವರಾಜನ ಹೆಗಲಿಂದಲೇ ಈ ಚಿದಾನಂದಮ್ಮನಿಗೂ ...ಜಗತವಾಗಿದೆ. ಈಕೆ ಜಿಲ್ಲಾ ಪಂಚಾಯತಿಯಲ್ಲಿ ...ಧಿಕಾರದಲ್ಲಿದ್ದಾಗ ಮಾಡಿದ ಕಳಪೆ ಕಾಮಗಾರಿಗಳಿಂದಾಗಿ ...ತ್ತ ರಾಜಕಾರಣಿಯ ಗುಟ್ಟಲ್ಲ, ಕಾರ್ಯಚಟುವಟಿಕೆಯ ಮುಖ ...ಹಿರಂಗವಾಗಿಲ್ಲ.

...ಹಾಗಂತ ಸುಮ್ಮನಿರಲಾದೀತೆ? ಗಂಡನ ಬಟ್ಟಾಲದ್ದಿರುವ ಲಯನ್ಸ್ ಶಿಕ್ಷಣ ಸಂಸ್ಥೆಯಲ್ಲಿ ಅನಧಿಕೃತ ದೊರೆಸಾನಿಯಾಗಿ ಕಾರ್ಯಭಾರ ಶುರುಹಚ್ಚಿಕೊಂಡಿದ್ದಾಳೆ. ಶಾಲೆಯ ದಾಖಲೆಗಳಲ್ಲಿ ಅಕ್ಷರ ದಾಸೋಹಕ್ಕೆಂದು ಮೂರು ಜನ ಕೆಲಸ ಮಾಡುತ್ತಿದ್ದರೂ ವಾಸ್ತವದಲ್ಲಿ ಅಲ್ಲಿರುವವರು ಇಬ್ಬರೆ. ಮೂರನೆಯವರು ಪ್ರತಿ ದಿನ ಬಸವರಾಜನ ಖಾಸಗಿ ಕ್ಲಿನಿಕ್‌ನಲ್ಲಿ ಸೇವೆ ಸಲ್ಲಿಸಬೇಕು. ಅಂದರೆ ಸೇವೆ ಬಸವರಾಜನಿಗೆ, ಸಂಬಳದ ಹೊರೆ ಮಾತ್ರ ಸರ್ಕಾರಕ್ಕೆ!

ಇಂತಿಪ್ಪ ಬಸವರಾಜ ಮತ್ತು ಅವನ ಹೆಂಡತಿಯ ಲೂಟಿ ಅದ್ಯಾವಾಗ ನಿಲ್ಲುತ್ತದೋ ನಂದೀಗುಡಿಯ ನಂದೀಶ್ವರರಿಗೇ ಗೊತ್ತು, ಹಾಗೊಂದುವೇಳೆ ಮನಸ್ಸು ಮಾಡಿ ಲೋಕಾಯುಕ್ತರು ಬಸವರಾಜನ ಮನೆ ಮೇಲೆ ದಾಳಿ ಮಾಡಿದರೆ ಗಂಡಾ-ಗುಂಡಿ ಇಬ್ಬರೂ ದಾವಣಗೆರೆ ಜಿಲ್ಲಾ ಜೈಲಲ್ಲಿ ಮುದ್ದೆಮುರಿಯೋದು ಗ್ಯಾರಂಟಿ.

■ ಟಿ.ಎನ್.ಷಣ್ಮುಖ

ನಿಮ್ಮ ಪತ್ರಿಕೆಯ ವರದಿ ದುರದೃಷ್ಟಕರ

ದಿನಾಂಕ 19ರಂದು ಶಿವಮೊಗ್ಗದಲ್ಲಿ ನಡೆದ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ಸಂಘಟನಾ ದಿನವಾದ 'ಪಾಪ್ಯುಲರ್ ಫ್ರಂಟ್ ಡೇ' ಕಾರ್ಯಕ್ರಮದ ನಂತರದ ಘಟನೆಗಳಿಗೆ ಸಂಬಂಧಿಸಿ ಲಂಕೇಶ್ ಪತ್ರಿಕೆಯ ಮಾರ್ಚ್ 11 ರ ಸಂಚಿಕೆಯಲ್ಲಿ ವರದಿಯಾದ ಸುದ್ದಿ ಆಧಾರರಹಿತವಾಗಿರುತ್ತದೆ.

2008 ರಿಂದ ಸಂಘಟನೆಯು ಫೆಬ್ರವರಿ 17 ರಂದು ಸಂಸ್ಥಾಪನಾ ದಿನವನ್ನು ದೇಶದ ವಿವಿಧ ರಾಜ್ಯಗಳಲ್ಲಿ ನಡೆಸಿಕೊಂಡು ಬರುತ್ತಿದೆ. "ಪ್ರಜಾಪ್ರಭುತ್ವಕ್ಕಾಗಿ ಒಂದಾಗೋಣ" ಎಂಬ ಘೋಷಣೆಯೊಂದಿಗೆ ಈ ಬಾರಿ ಫೆಬ್ರವರಿ 17ರಂದು ಶಿವಮೊಗ್ಗದಲ್ಲಿ ಕಾರ್ಯಕ್ರಮ ನಡೆಸುವುದೆಂದು ತೀರ್ಮಾನಿಸಿ ಪೊಲೀಸರ ಅನುಮತಿ ಕೇಳಿದಾಗ ಆ ದಿನ ಮಹಾಶಿವರಾತ್ರಿ ಇರುವುದರಿಂದ ಕಾರ್ಯಕ್ರಮವನ್ನು ಮುಂದೂಡುವಂತೆ ವಿನಂತಿಸಿದರು. ಇದಕ್ಕೆ ಸಮ್ಮತಿಸಿದ ಸಂಘಟನೆಯು ಶಿವಮೊಗ್ಗದಲ್ಲಿ ಫೆಬ್ರವರಿ 19ರಂದು ಕಾರ್ಯಕ್ರಮವನ್ನು ನಡೆಸುವುದೆಂದು ತೀರ್ಮಾನಿಸಿ ಜಿಲ್ಲಾಡಳಿತದಿಂದ ಅನುಮತಿಯನ್ನು ಪಡೆದುಕೊಂಡಿತು.

ನಿಗದಿಪಡಿಸಿದಂತೆ ಫೆಬ್ರವರಿ 19 ರಂದು ಶಿವಮೊಗ್ಗದ ಬೈಪಾಸ್ ರಸ್ತೆಯಿಂದ ಸಂಘಟನೆಯ ಕೆಡೆಟ್‌ಗಳಿಂದ ರ್‍ಯಾಲಿಯು ಶುರುಗೊಂಡು ಸೈನ್ಸ್ ಗ್ರೌಂಡ್‌ನಲ್ಲಿ ಕೊನೆಗೊಂಡು ಸಾರ್ವಜನಿಕ ಸಮಾವೇಶವೂ ನಡೆಯಿತು. ರ್‍ಯಾಲಿಯುದ್ದಕ್ಕೂ ಪಾಪ್ಯುಲರ್ ಫ್ರಂಟ್ ಜಿಂದಾಬಾದ್ ಘೋಷಣೆಯನ್ನು ಕೂಗಿಕೊಂಡು ಬರುತ್ತಿದ್ದ ಸಂಘಟನಾ ಸದಸ್ಯರು ಮತ್ತು ಬೆಂಬಲಿಗರು, ಸಾಮ್ರಾಜ್ಯಶಾಹಿ, ಮಹಾಹತುಶಾಹಿ, ಇಸ್ರೇಲ್ ವಿರುದ್ಧ ದೇಶದ ಹಿತಾಸಕ್ತಿಗೆ ಮಾರಕವಾದಂತಹ ವಿದೇಶೀ ನೀತಿ, ಅಣು ಒಪ್ಪಂದದ ವಿರುದ್ಧ ಕೋಮುವಾದಿಗಳ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು. ಇನ್ನೇನು ರ್‍ಯಾಲಿಯು ಸಮಾವೇಶ ನಡೆಯುವ ಸೈನ್ಸ್ ಗ್ರೌಂಡ್‌ಗೆ ಪ್ರವೇಶವಾಗುತ್ತಿದ್ದ ವೇಳೆ ರ್‍ಯಾಲಿಯ ಹಿಂದಿನ ಸಾಲಿನ ಕಡೆಗೆ ಸಂಘ ಪರಿವಾರದ ಗೂಂಡಾಗಳು ಕಲ್ಲು ಬಾಟಲಿಗಳನ್ನು ತೂರಿ ಅಡ್ಡಿಪಡಿಸಿದರು. ಅಲ್ಲಿಯವರೆಗೆ ಶಾಂತಿಯುತವಾಗಿ ಮುಂದುವರಿಯುತ್ತಿದ್ದ ಗುಂಪು ಕಲ್ಲು ತೂರಾಟ ನಡೆದಾಗ ಒಮ್ಮೆಲೆ ದಿಗ್ಭ್ರಮೆಗೊಂಡಿತು. ಇದೀಗ ಯಾವುದೇ ಪ್ರಚೋದನೆಯಿಲ್ಲದೇ ಪೊಲೀಸರು ರ್‍ಯಾಲಿಯ ಮಧ್ಯೆ ನುಗ್ಗಿ ಮಕ್ಕಳನ್ನೂ ನೋಡದೇ ಲಾಠಿ ಬೀಸತೊಡಗಿದರು. ದುಷ್ಕರ್ಮಿಗಳು ಶೇರ್ ಮಾಡಿದ ವೀಡಿಯೋದಲ್ಲಿ ಈ ದೃಶ್ಯ ಸ್ಪಷ್ಟವಾಗಿದೆ.

ಲಾಠಿ ಚಾರ್ಜ್ ನಂತರ ಸಂಘ ಪರಿವಾರದ ಗೂಂಡಾಗಳು ಗಾಂಧೀ ನಗರದಲ್ಲಿ ಜಮಾಯಿಸಿದ್ದಾರೆ. ನಂತರ ಮುಸ್ಲಿಮರಿಗೆ ಸೇರಿದ ಅಂಗಡಿ ಮನೆಗಳಿಗೆ ಬೆಂಕಿ ಹಚ್ಚಿದ್ದಾರೆ ಮತ್ತು ಮಸ್ಜಿದ್ ಒಂದಕ್ಕೆ ಕಲ್ಲು ತೂರಾಟ ನಡೆಸಿದ್ದಾರೆ. 3 ಆಟೋರಿಕ್ಷಾ, 2 ಗೂಡ್ಸ್ ಆಟೋ, 5 ಬೈಕ್, 4 ತರಕಾರಿ ತಳ್ಳುಗಾಡಿಗಳು, ಹಾಗೂ ಒಂದು ಮನೆಗೆ ಬೆಂಕಿ ಹಚ್ಚಿದ್ದಾರೆ. ಇದರಿಂದ ನಗರದಲ್ಲಿ ಒಟ್ಟು 12 ಮಂದಿ ಗಾಯಗೊಂಡಿದ್ದಾರೆ.

ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಜಿಲ್ಲೆಗಳಿಂದ ಕಾರ್ಯಕ್ರಮ ವೀಕ್ಷಿಸಲು ಬಂದ ಕಾರ್ಯಕರ್ತರು ಮತ್ತು ಬೆಂಬಲಿಗರು ಹಿಂದಿರುಗಿ ಹೋಗುತ್ತಿದ್ದ ವೇಳೆ ಗಾಜನೂರಿನಲ್ಲಿ ಹೊಂಚು ಹಾಕಿ ಕುಳಿತಿದ್ದ ಸುಮಾರು 300ರಷ್ಟಿದ್ದ ಸಂಘ ಪರಿವಾರದ ಗೂಂಡಾಗಳು ಕಲ್ಲು ಮತ್ತು ಮಾರಕಾಯುಧಗಳೊಂದಿಗೆ ವಾಹನದ ಮೇಲೆ ದಾಳಿ ನಡೆಸಿ ವಾಹನಗಳಲ್ಲಿದ್ದ ಜನರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ. ಇದರಲ್ಲಿ 17ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ. ರಸ್ತೆ ತಡೆಗಟ್ಟಿ ತಮ್ಮ ಮೇಲೆ ಆಕ್ರಮಣ ನಡೆಸಿದ ಗೂಂಡಾಗಳ ವಿರುದ್ಧ ವಾಹನದಲ್ಲಿದ್ದ ಮಂದಿ ಪ್ರತಿರೋಧವನ್ನು ತೋರಿದ್ದಾರೆ. ಎರಡೂ ಗುಂಪಿನಲ್ಲಿ ಕೆಲವರು ಗಾಯಗೊಂಡು ಓರ್ವ ಮೃತಪಟ್ಟಿದ್ದಾನೆ. ಮೃತ ವಿಶ್ವನಾಥ್ ಸಂಘ ಪರಿವಾರದ ಕಾರ್ಯಕರ್ತನೆಂದು ನಂತರ ತಿಳಿದುಬಂದಿದೆ. ಆದರೆ ಲಂಕೇಶ್ ಪತ್ರಿಕೆಯ ವರದಿಗಾರ ವಾಸ್ತವ ವಿರುದ್ಧವಾದ ಸುದ್ದಿಯನ್ನು ಪ್ರಕಟಿಸಿ ನಮ್ಮ ಪಿಎಫ್‌ಐ ಸಂಘಟನೆಯನ್ನು ವಿಲನ್‌ನಂತೆ ಚಿತ್ರೀಕರಿಸಿದ್ದಾರೆ.

'ಮೂರ್ಖ' ಪಿಎಫ್‌ಐ ಹುಡುಗರ ಬಾಯಿಂದ ಪಾಕಿಸ್ತಾನದ ಘೋಷಣೆಗಳೂ ಬಂದಾಗ ಪೊಲೀಸರು ಲಾಠಿ ಚಾರ್ಜ್ ಮಾಡಿದರೆಂದು ನಿಮ್ಮ ಪತ್ರಿಕೆಯಲ್ಲಿ ವರದಿಯಾಗಿದೆ. ಒಂದರ್ಥದಲ್ಲಿ ದೇಶದ ಮುಸ್ಲಿಮರು ಪಾಕ್‌ಪರರೆಂಬ ಅಪಪ್ರಚಾರಕ್ಕೆ ವಿಭಜನೆಯಷ್ಟೇ ಪ್ರಾಯವಿದೆ. ಇದೀಗ ಕರ್ನಾಟಕದ ಆತ್ಮಸಾಕ್ಷಿಯ ಪ್ರತೀಕವೆಂಬ ಹೆಸರು ಪಡೆದಿದ್ದ ಲಂಕೇಶ್ ಪತ್ರಿಕೆಯಲ್ಲೂ ಪಾಕ್ ಪರ ಘೋಷಣೆ ಕೂಗಿದ್ದರೆಂದು ತಪ್ಪಾಗಿ ಬರೆದಿರುವುದು ಅತ್ಯಂತ ದುರದೃಷ್ಟಕರ.

ಪಾಪ್ಯುಲರ್ ಫ್ರಂಟಿನ ಯಾವುದೇ ರ್‍ಯಾಲಿಯ ವೇಳೆ ಕೂಗುವ ಘೋಷಣೆಯನ್ನು ಈ ಮೊದಲೇ ಮುದ್ರಿಸಿ ಹಂಚುವುದು ರೂಢಿ. ಅದರೊಂದಿಗೆ ಹಾಳೆಯಲ್ಲಿ ಮುದ್ರಿಸದ ಯಾವುದೇ ಇತರ ಘೋಷಣೆಗಳನ್ನು ಕೂಗಬಾರದೆಂದು ಎಚ್ಚರಿಕೆಯನ್ನು ನೀಡಲಾಗುತ್ತದೆ. ಪತ್ರಿಕೆಯಲ್ಲಿ ಬರೆದಂತೆ 'ಪಿಎಫ್‌ಐ ಮೂರ್ಖರು' ಪಾಕ್ ಪರ ಘೋಷಣೆಗಳನ್ನು ಕೂಗಲಿಲ್ಲ, ಪಾಕ್ ಪರ ಘೋಷಣೆಗಳನ್ನು ಕೂಗಿದ ಕೂಡಲೇ ದೇಶದ ಮುಸ್ಲಿಮರ ಸಮಸ್ಯೆಗಳು ಪರಿಹಾರವಾಗುವುದೆಂದು ನಂಬುವಷ್ಟು ಮೂರ್ಖರಂತೂ ಪಿಎಫ್‌ಐ ಅಲ್ಲ.

ಫೆಬ್ರವರಿ 26ರಂದು ಬೆಂಗಳೂರಿನ 'ಕುಮಾರಕೃಪಾ'ದಲ್ಲಿ ಕರೆದ ಸಭೆಯಲ್ಲಿ ಗೃಹ ಇಲಾಖೆ ಸಲಹೆಗಾರ ಪೊಲೀಸ್ ಅಧಿಕಾರಿ ಕೆಂಪಯ್ಯನವರು ಗಾಜನೂರಿನಲ್ಲಿ ನಡೆದ ಕೊಲೆ ಘಟನೆಗೆ ಸಂಬಂಧಿಸಿದಂತೆ ನೀಡಿದ ಹೇಳಿಕೆಯೇನೆಂದರೆ "ಶಿವಮೊಗ್ಗದಲ್ಲಿ ಪಿಎಫ್‌ಐ ಸಮಾವೇಶದ ನಂತರ ಮಂಗಳೂರು, ಉಡುಪಿ, ಚಿಕ್ಕಮಗಳೂರು ಕಡೆಗೆ ಸಾಗುತ್ತಿದ್ದ ವಾಹನಗಳ ಮೇಲೆ ಗಾಜನೂರಿನಲ್ಲಿರುವ ದುಷ್ಕರ್ಮಿಗಳ ಗುಂಪೊಂದು ರಸ್ತೆ ತಡೆ ನಡೆಸಿ ದಾಳಿ ನಡೆಸಿದೆ. ಪ್ರತಿಯಾಗಿ ರಸ್ತೆಯಲ್ಲಿ ಗಲಾಟೆ ನಡೆದು ಹಲವಾರು ಜನರು ಗಾಯಗೊಂಡು, ಓರ್ವ ಮೃತಪಟ್ಟಿದ್ದಾನೆ. ಇದೊಂದು ಆಕಸ್ಮಿಕವಾಗಿ ನಡೆದ ಘಟನೆ. ಪ್ರಯಾಣಿಕರು ಆತ್ಮರಕ್ಷಣೆಗಾಗಿ ಪ್ರತಿದಾಳಿ ನಡೆಸಿರಬಹುದು. ಆದರೂ ಈ ಪ್ರಕರಣದ ಬಗ್ಗೆ ನಾವು ತನಿಖೆ ನಡೆಸುತ್ತೇವೆ" ಎಂದು ಸ್ಪಷ್ಟಪಡಿಸಿದ್ದಾರೆ. ವಾಸ್ತವ ಸಂಗತಿ ಹೀಗಿರುವಾಗ ನಿಮ್ಮ ಪತ್ರಿಕೆಯಲ್ಲಿ ಪಿಎಫ್‌ಐ ಸಭೆಗೆ ಕುಂದಾಪುರ, ಮಂಗಳೂರು ಕಡೆಯಿಂದ ಬಂದಿದ್ದ ಮತಾಂಧ ಮುಸ್ಲಿಮರು ಗಾಜನೂರಿನಲ್ಲಿ ಹಠಾತ್ ದಾಳಿ ಮಾಡಿ ಬೈಕಲ್ಲಿ ಬರುತ್ತಿದ್ದ ವಿಶ್ವನಾಥ್ ಶೆಟ್ಟಿಯನ್ನು ಕೊಲೆ ಮಾಡಿ ಪರಾರಿಯಾದರು ಎಂದು ತಪ್ಪಾಗಿ ವರದಿಯಾಗಿದೆ.



ಮೃತ ವಿಶ್ವನಾಥ್ ಶಿವಮೊಗ್ಗದ ಸಂಘಪರಿವಾರದ ಕಾರ್ಯಕರ್ತನಾಗಿದ್ದು ಈತ ಗಾಜನೂರಿಗೆ ಹೋದದ್ದು ಯಾವ ಉದ್ದೇಶದಿಂದಾಗಿರಬಹುದು? ಹೊಂಚು ಹಾಕುತ್ತಿದ್ದ 300 ಜನರನ್ನು ಪ್ರಚೋದಿಸಿದ್ದವರಲ್ಲಿ ವಿಶ್ವನಾಥನೂ ಓರ್ವನಾಗಿದ್ದಾನೆ. ಆದರೆ ಪತ್ರಿಕೆ ಏಕಾಏಕಿ ವಿಶ್ವನಾಥನನ್ನು ಅಮಾಯಕನೆಂದು ಘೋಷಿಸಿ ಮುಸ್ಲಿಮರನ್ನು ಮತಾಂಧರನ್ನಾಗಿಸಿದೆ.

ಶಿವಮೊಗ್ಗ ನಗರದಲ್ಲಿ ರ್‍ಯಾಲಿಯ ಮೇಲೆ ಕಲ್ಲು ತೂರಾಟ ಮಾಡಿ ವಾಹನಗಳನ್ನು ಜಖಂಗೊಳಿಸಿ, ಮನೆ, ಅಂಗಡಿ ಮೇಲೆ ದಾಳಿ ನಡೆಸಿದವರು ಸಂಘಪರಿವಾರಿಗಳು. ನಂತರ ಅತ್ತ ಗಾಜನೂರಿನಲ್ಲೂ ದಾಳಿ ನಡೆಸಲು ಶಸ್ತ್ರಸಜ್ಜಿತರಾಗಿ ಹೊಂಚುಹಾಕಿದವರೂ ಸಂಘಪರಿವಾರಿಗಳೇ.

ದೇಶದ ಸಂವಿಧಾನದ ಮೇಲೆ ಮಾತ್ರ ಭರವಸೆ ಇಟ್ಟಿರುವ ಪಿಎಫ್‌ಐ ಸಂಘಟನೆ ಸಾಂವಿಧಾನಿಕ ಹೋರಾಟದ ಮೂಲಕ ಯಶಸ್ಸನ್ನು ಕಂಡುಕೊಳ್ಳಬಹುದೆಂದು ನಂಬುತ್ತದೆ. ಅದೇ ವೇಳೆ ಸಂಘಪರಿವಾರ ಈ ದೇಶದ ಸಂವಿಧಾನವನ್ನು ಒಪ್ಪಿಕೊಳ್ಳಲಾರೆವು ಎಂದು ಪದೇ ಪದೇ ಸಾಬೀತುಪಡಿಸಿದೆ.

ಸ್ವಾತಂತ್ರ್ಯದ ನಂತರ ನೋವು, ಬಡತನ, ವಿಶ್ವಾಸ ದ್ರೋಹ, ನಿಂದನೆ ಮತ್ತು ಅವಮಾನವನ್ನು ಅನುಭವಿಸುತ್ತಾ ಬಂದ ದೇಶದ ಮುಸ್ಲಿಮ್ ಸಮುದಾಯಕ್ಕೆ ಶ್ರಮ, ತ್ಯಾಗ, ಬಲಿದಾನ, ಹುತಾತ್ಮತೆಯ ಘನ ಪರಂಪರೆಯಿದೆ. ಅವರ ರಕ್ತ, ಅಸ್ಥಿ ಮಜ್ಜೆ ಎಲುಬುಗಳಾದಿ ಇಡೀ ದೇಹವೇ ಈ ನೆಲದ ಮಣ್ಣಿನೊಂದಿಗೆ ಮಿಳಿತಗೊಂಡು ಧನ್ಯತೆಯನ್ನು ಕಂಡಿದೆ. ಪಾಪ್ಯುಲರ್ ಫ್ರಂಟ್ ಆ ರೀತಿಯ ತ್ಯಾಗ ಬಲಿದಾನದ ಮೂಲಕ ಈ ದೇಶವನ್ನು ಪೂರ್ವಿಕರು ನಡೆದ ಹಾದಿಯಲ್ಲಿ ಸಹೋದರ ಸಮುದಾಯಗಳನ್ನು ಸೇರಿಸಿಕೊಂಡು ಮುಂದುವರಿಯಲು ಪ್ರಯತ್ನಿಸುತ್ತಿದೆ. ಸಂವಿಧಾನವನ್ನು ಯಥಾವತ್ತಾಗಿ ಉಳಿಸಿಕೊಂಡರೆ ಮಾತ್ರವೇ ಜಾತ್ಯತೀತ ದೇಶವನ್ನು ಉಳಿಸಿಕೊಳ್ಳಲು ಸಾಧ್ಯವೆಂದು ಪಾಪ್ಯುಲರ್ ಫ್ರಂಟ್ ಬಲವಾಗಿ ನಂಬುತ್ತದೆ. ಇದನ್ನು ನಂಬುವ ಯಾವುದೇ ಪಕ್ಷ, ಸಂಘಟನೆ, ಸಮುದಾಯಕ್ಕೆ ಪಾಪ್ಯುಲರ್ ಫ್ರಂಟ್‌ನೊಂದಿಗೆ ಸೇರಿಕೊಳ್ಳಬಹುದು. ಒಂದು ವೇಳೆ ಯಾರೇ ಸೇರಿಕೊಳ್ಳದಿದ್ದರೂ ಪಾಪ್ಯುಲರ್ ಫ್ರಂಟ್ ಒಂದು ಹೆಜ್ಜೆಯೂ ಹಿಂದೆ ಸರಿಯದೆ ಹೋರಾಟವನ್ನು ಮುಂದುವರಿಸಲಿದೆ ಎಂಬ ಮಾತನ್ನು ಮತ್ತೊಮ್ಮೆ ದೃಢವಾಗಿ ಪುನರಾವರ್ತಿಸುತ್ತದೆ.

-ಅಬ್ದುಲ್ ಇಲ್ಯಾಸ್ ತುಂಬೆ (?)
ರಾಜ್ಯ ಸಮಿತಿ ಸದಸ್ಯರು
ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ

ಗತದ ನೆನಪಿನ ಚಿತ್ರ: ಹುಸೈನಿ ಬ್ರಾಹ್ಮಣರು ಕಲಿಸುವ ಚರಿತ್ರೆ ಪಾಠ



ಹಲವು ಖ್ಯಾತ ಹುಸೈನಿ ಬ್ರಾಹ್ಮಣರು.... ಯೋಗೇಶ್ವರ್


ಸುನೀಲ್ ಮತ್ತು ನರ್ಗೀಸ್ ದತ್




ಜೆ.ಪಿ. ದತ್


ಲಾರಾ ದತ್


ಬರ್ಖಾ ದತ್

ಖ್ಯಾತ ಚಿಂತಕ ವಾಲ್ಟರ್ ಬೆಂಜಮಿನ್, ಚರಿತ್ರೆ ಅಥವ ಗತಕಾಲ ಎನ್ನುವುದು ಒಂದು ನೆನಪು; ನಿದ್ರೆಯಲ್ಲಿ ನಾವು ಕಾಣುವ ಕನಸಿನಂತಹ ನೆನಪು; ನಿದ್ರೆಯಿಂದ ಎದ್ದು ಕನಸನ್ನು ನನಸು ಮಾಡಿಕೊಳ್ಳುವ ಆಶಯವೇ ಇತಿಹಾಸ ಪ್ರಜ್ಞೆಯ ಜಾಗೃತಿ; ವರ್ತಮಾನವನ್ನು ಗತಕಾಲ ನಿಯಂತ್ರಿಸುವುದು ಕನಸಿನಂತೆ ಎನ್ನುತ್ತಾನೆ. ಯಹೂದಿಯಾದ ವಾಲ್ಟರ್ ಬೆಂಜಮಿನ್ ಫ್ಯಾಸಿಸಂ ಜರ್ಮನಿಯಲ್ಲಿ ತನ್ನ ಬೇರನ್ನು ಬಿಟ್ಟು, ಬೃಹತ್ ಹಿಂಸಾ ಕಾರ್ಖಾನೆಯನ್ನು ಕಟ್ಟಿದ ಕಾಲದಲ್ಲಿ ಬದುಕಿ ಚಿಂತಿಸಿದವನು; ನರಬೇಟೆಯನ್ನು ತಪ್ಪಿಸಿಕೊಳ್ಳಲು ಹೆಣಗಿ, ದಾರಿಗಾಣದೆ ಆತ್ಮಹತ್ಯೆ ಮಾಡಿಕೊಂಡವನು. ಅವನ ಆತ್ಮಹತ್ಯೆಯ ಸುದ್ದಿ ಕೇಳಿ ಜರ್ಮನಿಯ ಮಹಾಕವಿ ಬರ್ಟೋಲ್ಟ್ ಬ್ರೆಕ್ಟ್ "ಹಿಟ್ಲರನ ಫ್ಯಾಸಿಸಂ ಜರ್ಮನಿಯ ಪ್ರಥಮ ಸಾಹಿತ್ಯದ ಬಲಿಯನ್ನು ತೆಗೆದುಕೊಂಡಿದೆ" ಎಂದು ಉದ್ಗರಿಸಿದ. ಈ ಮಾತನ್ನು ಹೇಳುವುದಕ್ಕೆ ಕಾರಣವಿದೆ. ಮಾರ್ಕ್ಸನ ಚಿಂತನೆಗಳಿಂದ ಪ್ರಭಾವಿತನಾಗಿದ್ದ ಬೆಂಜಮಿನ್, ಫ್ಯಾಸಿಸ್ಟ್ ಜರ್ಮನಿಯಲ್ಲಿ ಹಿಂಸೆಯ ರುದ್ರತಾಂಡವಕ್ಕೆ ಅಂತಿಮ ರಂಗ ತಯಾರಿ ನಡೆಸುತ್ತಿದುದ್ದನ್ನು ಕಂಡವನು; ಮತ್ತೂ ಈ ಹಿಂಸೆಯನ್ನು ಪ್ರತಿರೋಧಿಸಲು ಇರುವ ಮಾರ್ಗಗಳ ಬಗ್ಗೆ ಮನುಷ್ಯ ಸಮಾಜದಲ್ಲಿ ಸಂಚಯಿತವಾಗಿರುವ ಜ್ಞಾನಭಂಡಾರದಲ್ಲಿ ಉತ್ತರಗಳು ಇವೆಯೋ ಎಂದು ಬಾಯಾರಿದಂತೆ ಅರಸಿದವನು. ಹಾಗಾಗಿ, ಬೆಂಜಮಿನನಿಗೆ ನಾಝಿಗಳು ವರ್ತಮಾನದಲ್ಲಿ ಸಾಕಾರಗೊಳಿಸಲು ಸಂಕಲ್ಪ ತೊಟ್ಟಿದ್ದ ಕನಸುಗಳೂ ಗೊತ್ತಿದ್ದವು; ಅದನ್ನು ಎದುರಿಸಲು ನಡೆಯುತ್ತಿದ್ದ ಹೋರಾಟಗಳೂ ಗೊತ್ತಿದ್ದವು. ಈ ಹಿನ್ನೆಲೆಯಲ್ಲಿ ಅವನ ಗತಕಾಲದ ವ್ಯಾಖ್ಯಾನವು ಪಂಡಿತ ಚಿಂತನೆಯ ಲೋಲುಪತೆಯಾಗದೆ, ವರ್ತಮಾನವನ್ನು ಎದುರಿಸುವ ಅರಿವಿನ ಮಾರ್ಗದ ಜರೂರಿನ ಹುಡುಕಾಟವೇ ಆಗಿತ್ತು.

ಬೆಂಜಮಿನನ್ನ ಗತಕಾಲದ ವ್ಯಾಖ್ಯೆಯನ್ನು 'ಹಿಂದೂತ್ವವಾದಿ ಫ್ಯಾಸಿಸಂ' ಉಚ್ಛ್ರಾಯದಲ್ಲಿರುವ ನಮ್ಮ ದೇಶಕ್ಕೆ ಅನ್ವಯಿಸಿಕೊಂಡರೆ, 'ಹಿಂದೂತ್ವವಾದ'ದ ವರ್ತಮಾನದ ರಾಜಕೀಯವೂ ಅಂದು ಕಂಡಿರುವ ಗತಕಾಲದ ಕನಸನ್ನು ಸಾಕಾರಗೊಳಿಸುವ ವರ್ತಮಾನವೇ ಆಗಿದೆ; 'ಹಿಂದೂತ್ವ ರಾಜಕೀಯ'ವನ್ನು ಪ್ರತಿರೋಧಿಸುತ್ತಿರುವವರು ಸಾಕಾರಗೊಳಿಸಲು ಇಚ್ಛಿಸುತ್ತಿರುವ ವರ್ತಮಾನವೂ ಮತ್ತೊಂದು ಬಗೆಯ ಕನಸಿನ ಸಾಕಾರದ ಯತ್ನವಾಗಿದೆ. ಕನಸುಗಳಾಗಿ ಉಳಿದುಕೊಂಡಿರುವ ಗತದ ನೆನಪುಗಳು ಯಾವಾಗಲೂ ತುಂಡುತುಂಡಾದ, ಗೋಜಲುಗೋಜಲಾಗಿರುವ ಕನಸಿನ ಚಿತ್ರಗಳಾಗಿರುತ್ತವೆ. ವರ್ತಮಾನದ ಪ್ರಜ್ಞೆಯಾಗಿ ಆ ಚಿತ್ರಗಳನ್ನು ಜೋಡಿಸಿಕೊಂಡರೆ ಉಂಟಾಗುವ ಪರಿಣಾಮ ಮುಖ್ಯ; ಅದು ಸಮಾಜದಲ್ಲಿ ದಬ್ಬಾಳಿಕೆ, ಹಿಂಸೆ, ಅಸಮಾನತೆಯ ಯಜಮಾನಿಕೆಯ ಪ್ರಯೋಗಕ್ಕೆ ಕುಮ್ಮಕ್ಕು ನೀಡುವ ಪ್ರಜ್ಞೆಯಾಗಿದೆಯೋ ಅಥವ ಸಮಾಜದಲ್ಲಿ ಶಾಂತಿ, ಸಹಬಾಳ್ವೆ, ಸಮಾನತೆಯ ವಿವೇಕವನ್ನು ಜಾಗೃತವಾಗಿಡುವ ಪ್ರಜ್ಞೆಯಾಗಿದೆಯೋ ಎನ್ನುವುದರ ಮೇಲೆ ನಮ್ಮ ಗತದ ನೆನಪಿನ ಚಿತ್ರಶಾಲೆಯ ಮೌಲ್ಯ ನಿರ್ಣಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಕಂಡಾಗ, ಭಾರತದ ಜನಸಂಖ್ಯೆಯಲ್ಲಿ ಬೆರಳೆಣಿಕೆಯಷ್ಟಿರುವ ಹುಸೈನಿ ಬ್ರಾಹ್ಮಣರು ಜಾಗೃತವಾಗಿಟ್ಟುಕೊಂಡಿರುವ ಗತದ ನೆನಪು ಗೌರವಾರ್ಹ ಚರಿತ್ರೆಯ ಪಾಠವಾಗಿದೆ.

ಹೋದ ವರ್ಷ ಹಿಂದೂಗಳು, ಮುಸಲ್ಮಾನರು ಒಟ್ಟಾಗಿ ಬದುಕುತ್ತಿರುವ ದೆಹಲಿಯ ತ್ರಿಲೋಕಪುರಿ ಪ್ರದೇಶದಲ್ಲಿ ಹಿಂದೂತ್ವವಾದಿಗಳು ಯೋಜಿತ ಕೋಮುದ್ವೇಷ ಹುಟ್ಟುಹಾಕುವ ಪ್ರಯತ್ನ ನಡೆಸಿದರು. ಒಂದು ವಾರ ಕಾಲ ಇಡೀ ಮೊಹಲ್ಲ ಉದ್ವಿಗ್ನವಾಗಿತ್ತು, ಇಂಥ ವಾತಾವರಣದಲ್ಲಿ, ವರ್ಷದ ಮೊಹರಂ ಹಬ್ಬದ ಆಚರಣೆಯ ಕಾಲ ಬಂತು. ದೆಹಲಿಯ ಶಿಯಾ ಮುಸಲ್ಮಾನರು ಮೊಹರಂ ತಾಝಿಯ ಮೆರವಣಿಗೆಗೆ ಹೊರಟಾಗ, ಕೆಲವು ಹಿಂದೂಗಳು ಅವರ ಜೊತೆ ಸೇರಿದರು. ಮೆರವಣಿಗೆಯನ್ನು ವರದಿ ಮಾಡಲು ಹೋದ ಮಾಧ್ಯಮಗಳ ಮಂದಿಗೆ ಇದು ವಿಶೇಷವಾಗಿ ಕಂಡಿತು. ಬಹುಶಃ ತ್ರಿಲೋಕಪುರಿಯಲ್ಲಿ ನಡೆದ ಗಲಭೆ ಯತ್ನ ಮರುಕಳಿಸದಿರಲೆಂದು, ಕೆಲವು ಸೌಹಾರ್ದ ಪ್ರೇಮಿ ಹಿಂದೂಗಳು ಈ ರೀತಿ ಮಾಡುತ್ತಿರಬೇಕೆಂದು ಮಾಧ್ಯಮದವರು ಭಾವಿಸಿದರು. ಕೆಲವು ಉತ್ಸಾಹಿ ಪತ್ರಕರ್ತರು ಅವರನ್ನು ಹೋಗಿ ಮಾತನಾಡಿಸಿದಾಗ, ಮೆರವಣಿಗೆಯಲ್ಲಿ ನಡೆದಿದ್ದ ಹಿಂದೂಗಳು ತಾವು ಹುಸೈನಿ ಬ್ರಾಹ್ಮಣರೆಂದೂ, ಇದು ಲಾಗಾಯ್ತಿನಿಂದ ತಾವು ಆಚರಿಸಿಕೊಂಡು ಬರುತ್ತಿರುವ ತಮ್ಮ ಮತದ ಸಂಪ್ರದಾಯವೆಂದೂ ತಿಳಿಸಿದರು. ಇಂತಾಗಿ ಈ ಪುಟ್ಟ ಸಮುದಾಯದ ಚರಿತ್ರೆ ಮಾಧ್ಯಮದ ವರದಿಗಳಲ್ಲಿ ಮಿಂಚಿ ಮಾಯವಾಯಿತು.

ಯಾರು ಈ ಹುಸೈನಿ ಬ್ರಾಹ್ಮಣರು?

ಕ್ರಿ.ಶ. 680ರ ಅಕ್ಟೋಬರ್ ತಿಂಗಳ ಮೊದಲ ಹತ್ತು ದಿನಗಳಲ್ಲಿ (ಇಸ್ಲಾಮ್ ಪಂಚಾಂಗದ ಪ್ರಕಾರ ಮೊಹರಂನ ಹತ್ತು ದಿನಗಳು) ಉಮ್ಮಾಯಿದ್ ಖಲೀಫ ಯಾಜೀದನ 30,000ಕ್ಕೂ ಮಿಕ್ಕಿದ ಬೃಹತ್ ಸೇನೆ ಹಾಗು ಪ್ರವಾದಿ ಮೊಹಮ್ಮದರ ಮೊಮ್ಮಗ (ಮಗಳ ಮಗ) ಇಮಾಮ್ ಹುಸೈನರ ಅನುಯಾಯಿಗಳಾದ 60-70 ಜನರ ಗುಂಪಿನ ನಡುವೆ (ಇಂದಿನ ಇರಾಕಿನಲ್ಲಿರುವ) ಕರ್ಬಲದಲ್ಲಿ ಅಸಮಾನ ಯುದ್ಧವೊಂದು ನಡೆಯಿತು. ಈ ಯದ್ಧದಲ್ಲಿ ಇಮಾಮ್ ಹುಸೈನರೂ ಸೇರಿದಂತೆ, ಅವರ ಸಹೋದರ ಹಸನ್, ಆರು ತಿಂಗಳ ಹಸುಗೂಸೂ ಸೇರಿದಂತೆ, ಅವರ ಎಲ್ಲಾ ಮಕ್ಕಳೂ ಹಾಗು ಸೋದರ ಸಂಬಂಧಿಗಳು ಹತರಾದರು. ಅವರ ಉಳಿದ ಕುಟುಂಬವನ್ನು ಕೈದು ಮಾಡಿ ಸೆರೆಗೆ ತಳ್ಳಲಾಯಿತು. ಪ್ರವಾದಿ ಮೊಹಮ್ಮದರು ಇಸ್ಲಾಮ್ ಮತಾನುಯಾಯಿಗಳನ್ನು ಒಂದು ಸಮುದಾಯವಾಗಿ ಸಂಘಟಿಸಿದರು; ಆ ಸಮುದಾಯದ ಹಿತ ಕಾಯುವ ಸಲುವಾಗಿ ಖಿಲಾಫತ್ ಎನ್ನುವ ರಾಜ್ಯಾಡಳಿತ ವ್ಯವಸ್ಥೆಯನ್ನೂ ರಚಿಸಿದರು. ಖಿಲಾಫತಿನ ನಾಯಕನಾದ ಖಲೀಫನನ್ನು ಮುಸಲ್ಮಾನ ಸಮುದಾಯದ ಸಹಮತದೊಂದಿಗೆ ಚುನಾಯಿಸುವ ವ್ಯವಸ್ಥೆಯನ್ನೂ ನಿರೂಪಿಸಿದ್ದರು. ಆದರೆ, ಮೊಹಮ್ಮದರ ನಂತರದ ನಾಲ್ಕನೇ ಖಲೀಫನಾದ ಉಮಾಯಿದ್ ಖಲೀಫ ತನ್ನ ಮಗ ಯಾಜೀದನನ್ನೇ ಖಲೀಫ ಎಂದು ಘೋಷಿಸಿದ್ದನ್ನು ಇಮಾಮ್ ಹುಸೈನರು ಸೇರಿದ ಹಾಗೆ ಮುಸಲ್ಮಾನ್ ಮತಾನುಯಾಯಿಗಳ ಒಂದು ವಿಭಾಗ ಅನ್ಯಾಯವೆಂದು ಪರಿಗಣಿಸಿತು. ಖಲೀಫ ತನಗೆ ಭಿನ್ನಮತ ತೋರಿದವರ ವಿರುದ್ಧ ಅಧಿಕಾರದಂಡ ಪ್ರಯೋಗಿಸಿ ಬಾಯ್ಮುಚ್ಚಿಸಿದ. ಅವನ ನಂತರ ಅಧಿಕಾರ ವಹಿಸಿಕೊಂಡ ಯಾಜಿದ್, ದಬ್ಬಾಳಿಕೆಯನ್ನು ಮುಂದುವರೆಸಿದ. ಈ ಸಂಘರ್ಷದುದ್ದಕ್ಕೂ ಇಮಾಮ್ ಹುಸೈನ್ ಹೊಸ ಖಲೀಫನಿಗೆ ತಲೆ ಬಾಗಲು ನಿರಾಕರಿಸಿದರು ಮತ್ತು ಖಿಲಾಫತ್ತಿನ ಮೂಲ ಸ್ಫೂರ್ತಿಯನ್ನು ಪುನಃ ಸ್ಥಾಪಿಸುವುದಕ್ಕಾಗಿ ಜನಸಂಘಟನೆಯಲ್ಲಿ ತೊಡಗಿದ್ದರು. ಯಾಜೀದನ ಅಧಿಕಾರದ ಎದುರು ಬಹುಸಂಖ್ಯಾತರು ಮಣಿದರು, ಇಮಾಮ್ ಹುಸೈನರು ತಮ್ಮ ಪ್ರತಿರೋಧವನ್ನು ಜಾರಿಯಲ್ಲಿಟ್ಟು, ಯಾಜೀದನಿಗೆ ದೊಡ್ಡ ಸವಾಲಾಗಿ ಉಳಿದಿದ್ದರು. ಇಮಾಮ್ ಹುಸೈನರನ್ನು ಕೊನೆಗೊಳಿಸದೇ ತನ್ನ ಅಧಿಕಾರ ಭದ್ರವಲ್ಲ ಎಂದು ಕಂಡುಕೊಂಡ ಯಾಜಿದ್ ಹುಸೈನರನ್ನು ಕೊನೆಗೊಳಿಸಲು ರಚಿಸಿದ ತಂತ್ರದ ಭಾಗವಾಗಿಯೇ ಕರ್ಬಲ ಯುದ್ಧ ನಡೆಯಿತು. ಸಾವಿರಾರು ಸಂಖ್ಯೆಯ ಅಧಿಕಾರಸ್ಥ ಬಲದ ಸೇನೆಯ ಎದುರು, ನೂರನ್ನೂ ದಾಟದ ತನ್ನ ಅನುಯಾಯಿಗಳಿಗೆ ಸೆಣೆಸಲು ಸಾಧ್ಯವಿಲ್ಲವೆಂದು ಗೊತ್ತಿದ್ದೂ ಇಮಾಮ್ ಹುಸೈನ್ 'ಸತ್ಯಪರತೆ'ಗಾಗಿ ಸೆಣೆಸಿದ ಕಾರಣವಾಗಿ, ಕರ್ಬಲ ಯುದ್ಧ ಸತ್ಯ ಪಕ್ಷಪಾತಿ ಸಂಕಲ್ಪಕ್ಕೆ ಪ್ರತಿಮೆಯಾಯಿತು; ಇಮಾಮ್ ಹುಸೈನರು ಸತ್ಯಾಗ್ರಹಿ ನಾಯಕರಾಗಿ ಜನಮಾನ್ಯರಾದರು. ಇಂತಹ ಖ್ಯಾತ ಸಂಘರ್ಷದಲ್ಲಿ ಇಮಾಮ್ ಹುಸೈನರ ಪರವಾಗಿ ಹೋರಾಡಿದ ಹಿಂದೂ ಬ್ರಾಹ್ಮಣರ ವಂಶಸ್ಥರೆಂದು, ಇಂದಿಗೂ ಗುರುತಿಸಿಕೊಳ್ಳುವ ಸಮುದಾಯವೇ ಹುಸೈನಿ ಬ್ರಾಹ್ಮಣರು.

ತಮ್ಮ ದೈನಂದಿನ ಮತೀಯ ಆಚರಣೆಗಳಲ್ಲಿ ಹಿಂದೂ-ಮುಸಲ್ಮಾನ ಮತಗಳೆರಡರ ಆಚರಣೆಗಳನ್ನೂ ಮೇಳೈಸಿಕೊಂಡಿರುವ ಈ ಪುಟ್ಟ ಸಮುದಾಯ ಹೇಗೆ ರೂಪ ಪಡೆಯಿತು ಎಂಬುದರ ಬಗ್ಗೆ ಹಲವು ವೈವಿಧ್ಯಮಯ ಕಥನಗಳಿವೆ. ಆ ಕಥನಗಳ ಸ್ವರೂಪ ಪೌರಾಣಿಕತೆಯಿಂದ ಹಿಡಿದು ಲೌಕಿಕ ತರ್ಕ ಸೂತ್ರದವರೆಗೆ ಹಬ್ಬಿಕೊಂಡಿವೆ. ಅವುಗಳು ಹೀಗಿವೆ:

(1) ಕುರುಕ್ಷೇತ್ರ ಯುದ್ಧದ ಘೋರ ಪರಿಣಾಮದ ಫಲವಾಗಿ ದ್ರೋಣಾಚಾರ್ಯ ಪುತ್ರ ಅಶ್ವತ್ಥಾಮ ಜೀವ ಪರಿತ್ಯಕ್ತನಾಗಿದ್ದ. ಆದರೆ, ಚಿರಂಜೀವಿ ವರ ಪಡೆದವನಿಗೆ ತನ್ನ ವರವೇ ಒಂದು ದುರಂತವಾಯಿತು. ಅಶ್ವತ್ಥಾಮ ಅಫಘನಿಸ್ತಾನದ ಕಡೆ ಹೋಗಿ ನೆಲೆಸಿದ. ಅವನ ಕುಲ ವಂಶಜರೇ ಮುಂದೆ ಕರ್ಬಲ ಯುದ್ಧದಲ್ಲಿ ಇಮಾಮ್ ಹುಸೈನ್ ಪರ ಹೋರಾಡಿದರು; ಉಳಿದವರು ಕಾಲಾಂತರದಲ್ಲಿ ಇಂದಿನ ಪಾಕಿಸ್ತಾನದಲ್ಲಿರುವ ಸಿಯಾಲ್‌ಕೋಟ್ ಪ್ರಾಂತ್ಯದಲ್ಲಿ ಬಂದು ನೆಲೆಸಿದರು. ಅವರೇ ಹುಸೈನಿ ಬ್ರಾಹ್ಮಣರು. (ಮುನ್ಷಿ ಪ್ರೇಮ್‌ಚಂದರ ನಾಟಕ 'ಕರ್ಬಲ' ಪ್ರಸ್ತುತ ಪೌರಾಣಿಕತೆಯನ್ನು ಉಲ್ಲೇಖಿಸುತ್ತದೆ).

(2) ರಹಬ್ ದತ್ತ ಎಂಬ ಸಾರಸ್ವತ ಬ್ರಾಹ್ಮಣನಿಗೆ ಸಂತಾನ ಭಾಗ್ಯವಿರಲಿಲ್ಲ. ಆತನು ಪತ್ನಿ ಸಮೇತನಾಗಿ ಯಾತ್ರೆ ಕೈಗೊಂಡು ಮೆಕ್ಕಾ ತಲುಪಿ ಇಮಾಮ್ ಹುಸೈನರನ್ನು


ಮೊಹರಂ ಹಬ್ಬ ಆಚರಿಸುತ್ತಿರುವ ಹುಸೈನಿ ಬ್ರಾಹ್ಮಣರು

ದರು. ಇಮಾಮ್ ಹುಸ್ಸೈನರ ಹರಕೆಯಿಂದ ಆತನಿಗೆ ಳು ಗಂಡು ಸಂತಾನ ಪ್ರಾಪ್ತವಾಯಿತು. ರಹಬ್ ದತ್ತನ ಟುಂಬ, ಕರ್ಬಲ ಸಮೀಪದ ಕುಫಾದಲ್ಲಿ ನೆಲೆಸಿತ್ತು. ರ್ಬಾಲ ಯುದ್ಧದ ನಂತರ ಯಾಜಿದನ ದಂಡನಾಯಕರು ಮಾಮ್ ಹುಸ್ಸೈನರ ರುಂಡವನ್ನು ಪೆಟ್ಟಿಗೆಯಲ್ಲಿಟ್ಟುಕೊಂಡು ೊರಟವರು. ದಾರಿ ಮಧ್ಯೆ ಕುಫಾದಲ್ಲಿ ರಹಬ್ ದತ್ತನ ನೆಯಲ್ಲಿ ತಂಗಿದರು. ಪೆಟ್ಟಿಗೆಯಲ್ಲಿದ್ದ ಹುಸ್ಸೈನರ ರುಂಡವು ತ್ರಿ ವೇಳೆ ಪ್ರಭಾವಳಿ ಧರಿಸಿ ಖುರಾನ್ ಪಠಿಸತೊಡಗಿತು. ವರಿಂದ ರಹಬ್ ದತ್ತನಿಗೆ ಇದು ಹುಸ್ಸೈನರ ುಂಡವೆಂದೂ, ತಂಗಿರುವವರು ಹುಸ್ಸೈನರ ಹಂತಕರೆಂದೂ ಿದುಹೋಯಿತು. ಆಗ, ಆತನ ಏಳು ಮಕ್ಕಳೂ ಾಜಿದನ ಸೇನಾ ತುಕಡಿಯ ಎದುರಾಗಿ ನಿಂತು ಸೆಣಸಿ ಾರ್ಪಣೆ ಮಾಡಿದರು. ಇಂಥ ರಹಬ್ ದತ್ತನ ವಂಶಜರೇ ುಸ್ಸೈನಿ ಬ್ರಾಹ್ಮಣರು.

(3) ಇಮಾಮ್ ಹುಸ್ಸೈನರ ಹೆಂಡತಿ ಶಹರ್ ಭಾನು, ಾಸ್ಥಾನದ ಅರಸ ಚಂದ್ರಗುಪ್ತನ ಹೆಂಡತಿ ಚಂದ್ರಲೇಖ ಾನೆ ಸಹೋದರಿಯಾಗಿದ್ದಳು. ಇಮಾಮ್ ಹುಸ್ಸೈನ್ ರ್ಬಾಲ ಯುದ್ಧಕ್ಕೆ ಸೈನ್ಯ ಸಹಾಯ ಕೋರಿ ಚಂದ್ರಗುಪ್ತನಿಗೆ ತ್ರ ಕಳಿಸಿದರು. ಚಂದ್ರಗುಪ್ತ ಕಳಿಸಿದ ಸೈನ್ಯ ಕರ್ಬಲ ುಪುವ ಹೊತ್ತಿಗೆ ಯುದ್ಧ ಮುಗಿದುಹೋಗಿತ್ತು, ಆ ನ್ಯದಲ್ಲಿದ್ದ ಭೂರ ದತ್ತ ಬದುಕುಳಿದ ಇಮಾಮರ ನುಯಾಯಿಗಳ ಜೊತೆಗೂಡಿ, ಯಾಜಿದನ ವಿರುದ್ಧ ಸೆಣಸಿ ವನನ್ನು ಮುಗಿಸಿದ. ಇಂತಪ್ಪ ಭೂರ ದತ್ತನ ವಂಶಜರೆ ುಸ್ಸೈನಿ ಬ್ರಾಹ್ಮಣರು.


(4) ಅಫಘಾನಿಸ್ತಾನದಲ್ಲಿ, ಕ್ರಿ.ಶ. 830-950ರವರೆಗೆ ೋಮದತ್ತ ಎಂಬ ಅರಸನಿಂದ ಸ್ಥಾಪಿಸಲ್ಪಟ್ಟ ದತ್ತವಂಶ ಾಜ್ಯಭಾರ ನಡೆಸಿತ್ತು. ರಹಬ್ ದತ್ತ ಅವರ ೂರ್ವಜನಾಗಿರಬೇಕು. ಹುಸ್ಸೈನಿ ಬ್ರಾಹ್ಮಣರು ಈ ಂಶಸ್ಥರು.

(5) ಕ್ರಿ.ಶ. 400ರಿಂದಲೇ ಇಂದಿನ ರಾಜಸ್ಥಾನವನ್ನು ಳಗೊಂಡ ಸಿಂಧ್ ಪ್ರಾಂತ್ಯದ ಅರಸರು ಮಧ್ಯಪ್ರಾಚ್ಯದ ಪ್ರಾಂತ್ಯಗಳೊಂದಿಗೆ ವ್ಯಾಪಾರ ಸಂಬಂಧ ಹೊಂದಿದ್ದರು. ಹೀಗಾಗಿ, ಸಿಂಧಿ ಬ್ರಾಹ್ಮಣರು ಅಲ್ಲಿ ನೆಲೆಸಿರಬಹುದು. ಇಮಾಮ್ ಹುಸ್ಸೈನರ ಸಂಪರ್ಕಕ್ಕೂ ಬಂದಿರಬಹುದು. ಅವರ ವಂಶಸ್ಥರೇ ಹುಸ್ಸೈನಿ ಬ್ರಾಹ್ಮಣರಾಗಿರಬಹುದು.

ಹೀಗೆ, ಈ ಯಾವ ಕಥನಗಳಿಗೂ ಾಖಲೆಗಳಿಲ್ಲವಾದರೂ, ದತ್ತ, ತ್ಯಾಗಿ, ಶರ್ಮ ಎಂಬಿತ್ಯಾದಿ ಂಶ ನಾಮಾಂಕಿತರಾದ ಬ್ರಾಹ್ಮಣರು ತಮ್ಮನ್ನು ಇಮಾಮ್ ುಸ್ಸೈನರ ಬಲಿದಾನದ ಜೊತೆ ಗುರುತಿಸಿಕೊಳ್ಳುತ್ತಾರೆ. ುಟ್ಟಿದ ಮಕ್ಕಳಿಗೆ ಕೊರಳಲ್ಲಿ ಪುಟ್ಟ ಗಾಯ ಮಾಡಿ, ಇಮಾಮ್ ಹುಸ್ಸೈನರ ಬಲಿದಾನದ ಸಂಕೇತ ಾಯುಕಿರುವವರೆಗೂ ದೇಹದಲ್ಲಿರುವ ಹಾಗೆ ೋಡಿಕೊಳ್ಳುತ್ತಾರೆ. ಖ್ಯಾತ ನಟ ಸುನೀಲ್ ದತ್, ಆತನ ಪತ್ನಿ ಪ್ರಖ್ಯಾತ ನಟಿ ನರ್ಗಿಸ್, ಭಾರತದ ಸೇನೆಯಲ್ಲಿ ಸೇವೆಗೈದ ರಾಮ್ ಸರೂಪ್ ಬಕ್ಷಿ ಮುಂತಾದವರೆಲ್ಲಾ ತಮ್ಮನ್ನು ಹುಸ್ಸೈನಿ ಬ್ರಾಹ್ಮಣರೆಂದೇ ಗುರುತಿಸಿಕೊಂಡಿರುವವರು. ಮತ್ತೂ 'ವಹಾ! ದತ್ ಸುಲ್ತಾನ್/ ಹಿಂದೂ ಧರಮ್, ಮುಸಲ್ಮಾನ್ ಕಾ ಇಮಾಮ್/ ಅರ್ಧ ಹಿಂದೂ ಆಧ ಮುಸಲ್ಮಾನ್' ಎಂಬ ಜನಪದ ಕಥನಗಳಿವೆ. ಗತದ ಜೊತೆಗಿನ ನೆನಪನ್ನು, ವರ್ತಮಾನದ ಅಸ್ತಿತ್ವ ಪ್ರಜ್ಞೆಯಾಗಿ ಉಳಿಸಿಕೊಂಡಿರುವ ಈ ಪುಟ್ಟ ಸಮುದಾಯವಿನ್ನೂ ಇದೆ. ಹಾಗೆಯೇ ತೀವ್ರ ಾತೀಯವಾದಕ್ಕೆ ವಾಲದಂತಹ ಜಾನಪದ ಕಥನಗಳನ್ನು ಜೀವಂತವಾಗಿಟ್ಟುಕೊಂಡಿದೆ. ಅಂತಹ ಒಂದು ಕತೆ ಹೀಗಿದೆ:


ಫಿರ್ ರಹೂನ್ ಎಂಬ ಬಲು ಚಾಲಾಕಿ ಪಗಡೆ ಆಟಗಾರನಿದ್ದ. ಆತ ತನ್ನೆದುರು ಆಡಿ ಸೋತವರು ಒಂದೋ ತಮ್ಮ ರುಂಡ ಕತ್ತರಿಸಿ ಕೊಡಬೇಕು ಇಲ್ಲವೇ ಇಸ್ಲಾಂ ಧರ್ಮ ಸ್ವೀಕರಿಸಬೇಕು ಎಂದು ಪಂಥಾಹ್ವಾನ ನೀಡುತ್ತಿದ್ದ. ಸೋಲರಿಯದ ಸರದಾರ ರಹೂನ್ ಹೀಗೆ ಹಲವು ಮಂದಿಯನ್ನು ಇಸ್ಲಾಮಿಗೆ ಮತಾಂತರ ಮಾಡಿದ್ದ. ಒಂದು ಸಾರಿ ಶಿವದತ್ತ ಎಂಬ ಹುಸ್ಸೈನಿ ಬ್ರಾಹ್ಮಣ ರಹೂನ್ ಜೊತೆ ಆಟಕ್ಕಿಳಿದು ಅವನನ್ನು ಸೋಲಿಸಿದ. ರಹೂನ್ ತಾನು ಹಾಗು ಪತ್ನಿ, ಮಕ್ಕಳ ರುಂಡ ಛೇದನಕ್ಕೆ ಮುಂದಾದ; ಶಿವದತ್ತ ಅದು ಅವಶ್ಯಕವಿಲ್ಲವೆಂದು ತಡೆದ. ರಹೂನ್ ಆಗ ಹುಸ್ಸೈನಿ ಬ್ರಾಹ್ಮಣರ ಐತಿಹ್ಯವನ್ನು ತಿಳಿದುಕೊಂಡು ಮತಾಂತರವನ್ನು ನಿಲ್ಲಿಸಿದ.

ಇದು ಹುಸ್ಸೈನಿ ಬ್ರಾಹ್ಮಣರ ಮೇಲ್ಮೆಯನ್ನು ಪ್ರಚುರ ಪಡಿಸುವ ಸಲುವಾಗಿ ಕಟ್ಟಿದ ಕಟ್ಟುಕತೆ ಇರಬಹುದು. ಆದರೆ ಮತ್ತೊಂದು ಮತವನ್ನು ಹೀನವಾಗಿ ಕಾಣದ, ಸಹಬಾಳ್ವೆಯ ಅವಶ್ಯಕವಿರುವ ವಿವೇಕವನ್ನು ಎತ್ತಿ ಹಿಡಿಯುವ ಇಂತಹ ಕತೆಗಳು, ನೀತಿಕತೆಗಳಾಗುವ ಅರ್ಹತೆ ತಂತಾನೆ ಪಡೆದುಕೊಳ್ಳುತ್ತವೆ. ಸಂತಾನಾಭಿವೃದ್ಧಿಯು ಹೊರತು ... ಬಗೆಯೊಂದಲ್ಲೂ ... ಉಳಿಸಿಕೊಳ್ಳುವ ... ಇಲ್ಲದ ಸಮುದಾಯದ ... ಗತದ ... ಕಳೆದು ... ಚರಿತ್ರೆಯು ...



● ಕೆ.ಫಣಿರಾಜ್

ಲಂಕೇಶ್ ಕುಟೀರ!



1984ನೇ ವರ್ಷದಲ್ಲಿ ಇದ್ದಕ್ಕಿದ್ದಂತೆ ಒಂದು ದಿನ ಲಂಕೇಶರು ತಮ್ಮ ದಿನಚರಿಯ ವಿಷಯದಲ್ಲಿ ತಿರುಗಿಬಿದ್ದರು. ಅದಾಗಲೇ ಅವರು ಕೇಳಿದ್ದೆಲ್ಲಾ ಸಿಕ್ಕಿದಂತೆ ಎಲ್ಲದರಲ್ಲೂ ಸೈ ಎನ್ನಿಸಿಕೊಂಡಿದ್ದರು. ಜನತಾ ಪಕ್ಷ ಅಧಿಕಾರಕ್ಕೆ ಬಂದಿತ್ತು. ಕರ್ನಾಟಕ ಅದುವರೆಗೂ ಕಂಡರಿಯದಂತಹ ದಕ್ಷ ಮಂತ್ರಿ ಮಂಡಲ ರಚನೆಯಾಗಿತ್ತು. ಅಂದಿನ ಸರ್ಕಾರದ ಬಹುತೇಕ ಮಂತ್ರಿಗಳು ಲಂಕೇಶರ ಹಂಗಿಗೆ ಬಿದ್ದಂತೆ ಜಾಗರೂಕತೆಯಿಂದ ನಡೆದುಕೊಳ್ಳುತ್ತಿದ್ದರು. ಸಂಜೆಯಾಗುತ್ತಿದ್ದಂತೆ ದುಷ್ಟಕೂಟದ ಗೆಳೆಯರು ಸೇರುತ್ತಿದ್ದರು. ಅಷ್ಟೊತ್ತಿಗಾಗಲೇ ಪತ್ರಿಕೆ ಆಫೀಸಿನ ಮಹಡಿ ಮೇಲೆ ಒಂದು ಲಾರಿ ಲೋಡಾಗುವಷ್ಟು ಖಾಲಿ ಆರ್‌ಸಿ ಬಾಟಲಿಗಳ ರಾಶಿ ನನ್ನನ್ನು ದಂಗುಬಡಿಸಿತ್ತು. "ಅಯ್ಯೋ ಅಯ್ಯೋ ಇದೇನಿಷ್ಟೊಂದು ಬಾಟ್ಲನ್" ಎಂಬ ನನ್ನ ಉದ್ಗಾರಕ್ಕೆ ಸತ್ಯಮೂರ್ತಿ "ಇದು ನಾಲ್ಕನೆ ರಾಶಿ ಕಂಡ್ರಿ" ಎಂದಿದ್ದರು. ವಾರಕ್ಕೊಮ್ಮೆ ರೂಪುಗೊಳ್ಳುವ ಪತ್ರಿಕೆಗೆ ವಾರದ ಚರ್ಚೆಯೆಲ್ಲಾ ಹೂರಣವಾಗಿ ಬಸಿಯುತ್ತಿದ್ದ ಕಾರಣಕ್ಕೆ ಈಗಲೂ ಹಳೆಯ ಸಂಚಿಕೆ ನಿಧಿ ಸಿಕ್ಕಂತೆ ಖುಷಿ ನೀಡುತ್ತವೆ. ಆಗ ಪ್ರತಿವಾರವೂ ನಮಗೆ ಅಚ್ಚರಿ ಮೂಡಿಸಬೇಕೆಂಬ ಹಟದಿಂದ ಲಂಕೇಶರು ಪ್ರತಿಕ್ಷಣವೂ ಹೊಸ ಕಾಲಂ,



ಹೊಸ ಲೇಖಕ ಮತ್ತು ಭಾಷೆಗಾಗಿ ತಲೆ ಕೆಡಿಸಿಕೊಳ್ಳುತ್ತಾ ಹೊಸ ಅನುಭವಗಳಿಗೂ ಹಾತೊರೆಯುತ್ತಿದ್ದರು. ಅಂತಹ ಹೊತ್ತಿನಲ್ಲಿ ಅವರಿಗೆ ಈ ಬೆಂಗಳೂರನ್ನು ಬಿಟ್ಟು ಎಲ್ಲಾದರೂ ಹಳ್ಳಿಯಲ್ಲಿದ್ದು ಜನರನ್ನು ಮಾತನಾಡಿಸಿ, ಅವರ ಮನೋಗತಗಳೇನಿವೆ ಎಂಬುದನ್ನು ತಿಳಿದುಕೊಳ್ಳುವ ಕುತೂಹಲ ಉಂಟಾಯ್ತು. ಆಗ ನಾನು ಯಾವುದೇ ಕೀಳರಿಮೆ ಮುಜುಗರವಿಲ್ಲದೆ ಮಾತನಾಡುತ್ತಿದ್ದುದು ಅವರಿಗೆ ಮೆಚ್ಚುಗೆಯಾಗಿದ್ದ ಕಾರಣಕ್ಕೆ ನಾನು ರೂಪುಗೊಂಡ ಪ್ರದೇಶದಲ್ಲಿ ಒಂದಿಷ್ಟು ದಿನ ಇದ್ದುಬರುವ ಮನಸ್ಸಾಯಿತೇನೊ. "ಚಂದ್ರೇಗೌಡ ನನಿಗೆ ಯಾಕೋ ಇಲ್ಲಿ ಬೋರಾಗಿದೆ. ಯಾವುದಾದ್ರು ಹಳ್ಳಿಲಿ ಇದ್ದು ಬರೋಣ ಅನ್ಸಿದೆ. ನಿಮ್ಮೂರ್‍ಯಂಗಯ್ಯ ಇರಬವುದೆ?" ಎಂದರು. "ಅದಕೇನು ಸಾರ್ ಒಳ್ಳೆದೊಂದು ಗುಡುಸ್ಲಾಯ್ಕೊಡ್ತಿನಿ. ಇದ್ದು ಬರಬವುದು" ಎಂದೆ.

"ಗುಡುಸ್ಲು ಅಂದ್ರೆ ಊರೂರೊರಗಡೆ ಹಾಕಬ್ಯಾಡ ಜನಗಳು. ಬಂದೋಗತರ ಇರ್ಲಿ. ಅವರ ಬದುಕು ಮಾತು ತಿಳಕಬೇಕು" ಎಂದರು.

"ಇವ್ರನ್ಯಾಕ್ ಬಂದವ್ರುನಿಲ್ಲಿ ಅಂತ ಅನುಮಾನ ಪಟ್ರೆ ಏನೇಳದು ಸಾರ್" ಎಂದೆ.

"ಏನಿಲ್ಲ, ಹಳ್ಳಿ ಬದುಕು. ಅಲ್ಲಿರಂಗಿದಿಯೋ ಅಥವಾ ಊರುಬುಟ್ಟು ಓಡಂಗಿದಿಯೋ ಅಂತ ತಿಳಕಳಕ್ಕೆ ಬಂದವ್ರೆ ಅನ್ನು."

"ಬಂದವ್ರುರಿಗೇನಾರ ಕೊಡ್ತಿರೊ ಅಥವಾ ಬರಿ ಮಾತಾಡ್ತಿರೋ" ಎಂದೆ. ನಗಾಡಿದ ಅವರು "ಓಹೊ, ಕೈ ಬಾಯಿ ನೋಡಂಗಾಗ್ಯವ್ರುರೇನಯ್ಯಾ" ಅಂದರು.

"ಅಂಗೇನು ಇಲ್ಲ ಸಾರ್, ಲಂಕೇಶ್ ಇಲ್ಯಾಕ್ ಬಂದವ್ರನೆ, ಏನಿರಬವುದು? ಮಧ್ಯೆ ರಾವ್ರುಳಾಸುರನ ಹೆಸರು ಬ್ಯಾರೆ ಮಡಿಕಂಡವ್ರನೆ. ಇಂತ ಅನುಮಾನ ಇಡೀ ಊರಿನಲ್ಲೇ ದೊಡ್ಡ ಚರ್ಚೆನೆ ಹುಟ್ಟಾಕಬಹುದು" ಎಂದೆ.

ಅದಕ್ಕೆ ಇನ್ನು ಏನೇನೋ ಸೇರಿಸಿ ಅಲ್ಲಿದ್ದವರೆಲ್ಲಾ ಗಹಗಹಿಸಿ ನಕ್ಕರು. ಅದಾಗಲೇ ರಸವತ್ತಾಗಿ ಮಾತನಾಡುವಷ್ಟು ಎಣ್ಣೆ ರಂಗೇರಿಸಿತ್ತು ನಾನು ಹೊರಡುವ ಸಮಯವಾದ್ದರಿಂದ ಗುಡಿಸಲು ನಿರ್ಮಿಸುವ ಆಜ್ಞೆ ಹೊತ್ತು ಹೊರಟೆ.

ಊರಿಗೆ ಹೋದವನೆ ಗ್ರಾಮೀಣ ಭಾಗದ ಗುಡಿಬರಿಗೆ ತಕ್ಕಂತೆ ಮನೆ ಕಟ್ಟಿಕೊಡುವ ಸೀನಾಚಾರಿಯನ್ನು ಕರೆದು, ಒಂದು ಫುಟಾಣಿ ಗುಡಿಸಲನ್ನು ಹಾಕುವ ಚರ್ಚೆ ಆರಂಭಿಸಿದೆ. ಅಲ್ಲಿಗೆ ನಮ್ಮಣ್ಣ ಸೋದರ ಮಾವನ ಮಕ್ಕಳು ಮತ್ತು ಇತರ ಗಣ್ಯ ವ್ಯಕ್ತಿಗಳೆಲ್ಲಾ ಸೇರಿಕೊಂಡರು. ಊರಿಗೆ ಯಾರೇ ಬಂದರೂ ಊಟಕ್ಕೆ ಕರೆದು ತನ್ನ ಎಮ್ಮೆ ದನ ವಹಿವಾಟು ಮತ್ತು ಉಸಿರೆತ್ತದೆ ಕೆಲಸ ಮಾಡುವ ಮಕ್ಕಳನ್ನೆಲ್ಲಾ ತೋರಿಸುವ ಪುಟ್ಟಸ್ವಾಮಿಗೌಡ ರೇಗಿ,

"ಅಲ್ಲ ಕಂಡ್ಳ ಚಂದ್ರ, ನಾವು ಹಿಂಗ್ಯಲ್ಲ ಬದುಕಿ ಲ್ಯಂಕೇಸನಂಥಾ ಮನುಸ ನಮ್ಮೂರಿಗೆ ಬಂದಾಗ ಗುಡ್ಳಲ್ಲಿರಸದು ಯಾವ ನ್ಯಾಯವ್ರುಲ. ಅಕ್ಕಪಕ್ಕದೂರಿಗೆ ಗೊತ್ತಾದ್ರೆ ಅವ್ವಂತ ಗತಿಗ್ಯಟ್ಟವು ಅಂತ ಬೈಯ್ಯಕ್ಕುಲವೇನ್ಲ? ಅದ್ಯಲ್ಲ ಬ್ಯಾಡ? ಹ್ಯಂಗಿದ್ರು ನಮ್ಮಂಗಡಿ ಮನೆ ಖಾಲಿಯಿದೆ. ಅಲ್ಲಿರ್ಲಿ ಬುಡ್ಳ" ಎಂದ. ಪುಟ್ಟಸ್ವಾಮಿಗೌಡರ ಎದುರಾಳಿಯಾದ ಪಾರಲಕ್ಕೆ ಗೌಡರು "ಚಂದ್ರು, ಲ್ಯಂಕೇಸು ಯಾರ ಮನೆತಕ್ಕೋಗದೂ ಬ್ಯಾಡ. ನಮ್ಮ ವಸಮನೆಲೆ ಜಾಗದೆ ಅಲ್ಲಿರ್ಲಿ. ಅವ್ರುರ ಜೀವಮಾನದಲ್ಲಿ ತಿಂದಿರಬಾರ್ದು ಅಷ್ಟು ಬಾಡಾಕನ. ಅದೆಷ್ಟು ತಿಂತರೊ ತಿನ್ನಿ, ನಾನು ಬಂಬಾಯಿಗೋಗಿದ್ದಾಗ ತಂದಿರೊ ವಿಸ್ಕಿ ಅಂಗೇ ಅದೇ. ನೀನು ಸುಮ್ಮನೆ ನಮ್ಮನೆತಕ್ಕೆ ಕರಕಂ ಬಾ" ಎಂದ.

ಆಗ ನಾನು "ಏ ಅಂಗಲ್ಲ ಕಣಣ್ಣ ಅವ್ರುರು ಬಂದ್ರೆ ಕರಕಂಡೋಗಿ ಇರಿಸಿಗಳಕ್ಕೆ ನಮ್ಮನೆನೆ ಇಲವೆ. ಆದ್ರೆ ನಮ್ಮನಿಗೆ ನಮ್ಮ ಸಮಂದಿಕರೆ ಬರದಿಲ್ಲ. ಅಂಗೆ ನಿಮ್ಮ ನಿಮ್ಮ ಮನಿಗಳಿಗೆ ನಿಮಿಗದೋರು ಬರದಿಲ್ಲ. ಅಂಗಾಗಿ ಯಾರದೊ ಮನೆಲಿದ್ದು ಇನ್ಯಾರಿಗೋ ಉರಿಯತ್ಸದು ಲಂಕೇಶ್‌ಗೆ ಇಷ್ಟ ಇಲ್ಲ. ನಮ್ಮ ಹಳ್ಳಿ ಜನ ಯಂಗವ್ರುರೆ ಅಂತ ಅವ್ರುರಿಗೆ ಚೆನ್ನಾಗಿ ಗೊತ್ತು. ಅದ್ಕೆ ಅವ್ರುರು ಊರೊರಗೆ ಒಂದು ಗುಡ್ಯಾಕಿ ಅಲ್ಲಿಗೆ ಯಲ್ಲಾರು ಬತ್ತರೆ ಮಾತಾಡುಸ್ತಿನಿ ಅಂದವ್ರುರೆ" ಎಂದೆ.

"ಅದೇನು ಮಾತಾಡುಸ್ತರಪ್ಪ."

"ಈಗ ನೀನು ಕಾಯಾಪಾರ ಮಾಡ್ತಿ, ನಮ್ಮ ಇಡೀ ಏರಿಯಾದಿಂದ ಬೊಂಬಾಯಿಗೆ ಕಾಯಿ ಲೋಡು ಕಳುಸೋರೆ ನೀವು. ಅದನ್ನೇ ವಿಚಾರುಸ್ತಾರೆ. ಇನ್ನ ನಮ್ಮ ಪುಡಸಾಮಣ್ಣ ವಳ್ಳೆ ಎತ್ತು ಕಟ್ಟಿ ದನಿನ ಜಾತ್ರಿಗೆ ತಗಂಡೋಗಿ ಮಾರ್‍ತನೆ. ಅಂತ ಅನುಭವ ಕೇಳ್ತರೆ. ಅದ್ಕೆ ಗುಡುಸ್ಲೆ ವಳ್ಳೆದು" ಎಂದೆ. ಇಂತ ಸಾಧಾರಣ ವಿಷಯ ತಿಳಿಯಲು ಊರಿಗೆ ಬಂದು ವಡ್ಡರಂತೆ ಗುಡಿಸಿಲಾಕಿಸಿಕೊಂಡು ವಾಸ ಮಾಡುವ ಬಗ್ಗೆ ಅವರಿಗೆ ಅನುಮಾನ ಬಂತು. ಬರಿ ಇದಿಷ್ಟೇ ಸಂಗತಿಗಾಗಿ ಲಂಕೇಶ್ ಇಲ್ಲಿಗೆ ಬರಲಾರ ಅನಿಸಿತು. ಆದ್ದರಿಂದ "ಆಯ್ತು ಅದೆಲ್ಲಾಕ್ಸಪ್ಪ ಗುಡ್ಳು" ಎಂದು ಗೊಣಗಿಕೊಂಡು ಜಾಗ ಖಾಲಿ ಮಾಡಿದರು. ಅಷ್ಟರಲ್ಲಿ ಸೀನಾಚಾರಿ "ಊಟುಕ್ಕೇನು ಮಾಡ್ತರೊ" ಎಂದ. "ಯಲ್ಲಾರ ಮನಿಗೂ ಕರದ್ರಾಯ್ತು ಬುಡು" ಎಂದೆ.

"ಯಲ್ಲಾರ ಮನಿಗೂ ಬಂದುಣ್ಣಕ್ಕೆ ಅವ್ರುರೇನು ನಾಟಕದ ಮೇಷ್ಟ್ರುಲಾ. ಬಂದಾ ಅಂತ್ಲೆ ಇಟ್ಟಗೊ. ಇವೇನು ಬೇಕಾದ್ದೆ ಮಾಡ್ಯಾಕ್ಯವೆ. ಅದೇ ಇಟ್ಟು ಸಾರು ಕಾಳು. ಇಂತ ಪರಮಾನೆ ಊಟ ಮಾಡಕ್ಕೆ ಯಲ್ಲಾರ ಮನಿಗೂ ಬಂದನಂತೆ. ಹೇಳಿಬುಟ್ಟ ಬಂದಿಲ್ಲಿ" ಎಂದು ವ್ಯಂಗ್ಯವಾಗಿ ನಕ್ಕ "ಏ, ಸೀನಣ್ಣ ಲಂಕೇಶ್ ಅಂದ್ರೇನು ತಿಳಕಂಡಿದ್ದಿ? ಬಡವರು ಕರದೇಟಿಗೆ ಬತ್ತರೆ, ಅದೇ ಶ್ರೀಮಂತರು ಏಟು ಕರದ್ರು ಬರದಿಲ್ಲ ಗೊತ್ತೆ" ಎಂದೆ. "ಅಂಗರವನು ವಳ್ಳೆ ಇವ್ರುನೆಯ ಬುಡು" ಎಂದ ಸೀನಾಚಾರಿ "ಈಗ ಗುಡಸಲೆಲ್ಲಿ ಹಾಕಬೇಕೇಳು" ಎಂದ.

ನನಗೆ ಅವನ ಮನೆಯ ಹಿಂಭಾಗವೇ ಸೂಕ್ತ ಅನ್ನಿಸಿತು. ಏಕೆಂದರೆ ಅಲ್ಲಿಂದ ಇನ್ನೂರು ಮೀಟರ್ ನಡೆದರೆ ಹಿರೇ ಕೆರೆ, ಅದರ ಏರಿಗೇ ಒತ್ತು ಕೊಂಡಂತಿರುವ ಈಶ್ವರನ ಗುಡಿ, ಏರಿ ಮೇಲೆ ಹುಣಸೇಮರಗಳು. ಕೆರೆಕೋಡಿಯಲ್ಲಿ ಒಲೆಯಾಕಾರದ ಕಲ್ಲುಗಳು. ಅದರ ಮೇಲೆ ಕುಳಿತು ಬಹಿರ್ದೆಸೆ ಮಾಡಿದರೆ, ಕೆರೆ ನೀರಲ್ಲಿ ತೊಳೆದುಕೊಂಡು ನೆಟ್ಟಗೆ ಗುಡಿಸಲಿಗೆ ಬರಬಹುದು. ನನ್ನ ಈ ಕಲ್ಪನೆಯಲ್ಲಾಗಲೇ ಲಂಕೇಶರ ಆಕೃತಿ ಚಲಿಸುತ್ತಿತ್ತು, ನನ್ನ ಕಡೆಗೂ ಮೆಚ್ಚುಗೆಯ ನಗು ಸೂಸುತ್ತಿತ್ತು, ಉತ್ಸಾಹದಿಂದ ನಾನು "ಸೀನಣ್ಣ ನಿನ್ನ ಮನೆ ಹಿತ್ತಲ ಕಡೇಲಿ ಬೇಲಿ ಅದಲ್ಲ ಅದರ ಮಗ್ಗಲ್ಲೇ ಹಾಕು. ಬೆಳಗ್ಗೆ ಸೂರ್ಯನ ಬೆಳಕು ಬೀಳದೆ ಆ ಗುಡಸಲಮ್ಯಾಲೆ. ಲಂಕೇಶ್‌ಗೆ ಸೂರ್ಯೋದಯ ಕಂಡ್ರೆ ಭಾಳ ಇಷ್ಟ" ಅಂದೆ.

"ಲೋ ಚಂದ್ರ ನಿನ್ನಂಥೋನ್ನ ಆ ಲಂಕೇಶ ಹತ್ರದಲ್ಲಿಟಗಂಡವ್ರುನಲ್ಲ ಹೇಳು" ಎಂದ.

"ಯಾಕೋ ಅಂಗಂತಿ?"

"ಇನ್ನೇನ್ಲ ಮತ್ತೆ, ನಮ್ಮನೆ ಇತ್ಲು ಬೇಲಿಲೇ ಕಂಡ್ಲ ಈ ಪಾಸಾಲೆ ಹೆಂಗಸರ್‍ಯಲ್ಲ ಬಂದು ಯರಡಕ್ಕೋಗದು. ಲಂಕೇಸನಿಗೆ ಸೂರ್ಯ ಹುಟ್ಟದು ಕಾಣದಿಲ್ಲ, ಬರೀ ಹೆಂಗಸರೇ ಕಾಣ್ತರೆ. ಅಂಥಾ ಜಾಗದಲ್ಲಿ ಗುಡ್ಯಾಕ್ಸನಂತೆ ಗುಡ್ಳ" ಎಂದು ಬಿದ್ದು ಬಿದ್ದು ನಕ್ಕ. ಇದರಿಂದ ನಾನು ಮಂಕಾದೆ. "ಅಲ್ಲ ಕಂಡ್ಳ ಅವ್ರುರು ಗುಡ್ಲಾಕು ಅಂದೇಟಗೆ ಓಡಿಬಂದಿದ್ದಿಯಲ್ಲಾ ಆಯ್ತು ಹಾಕನ. ಅವ್ರುರೇನು ನ್ಯಲ್ದಮ್ಯಾಲೆ ಮನಿ ಕಂಡರೆ? ಈ ಏರಿಯಾದಲ್ಲೇನು ವಸಿ ಸ್ವಳೆ ಇದ್ದವೇನ್ಲ? ಸ್ವಳೆ ಪರದೆ ಕಟ್ಟಬೇಕು, ಗುಡಸಲೊಳಗೆ ಒಂದು ಬಚ್ಚಲ ಮನೆ ಬ್ಯಾಡವೇನ್ಲ? ಬೆಳಕಿಗೇನು ಮಾಡ್ತಿ? ಸೀಮೆಯಣ್ಣೆ ಬುಡ್ಡಿ ತಂದು ಮಡಗ್ತಿಯಾ? ಅವ್ರುರೊಬ್ಬರೇ ಬತ್ತರೊ ಜ್ವತೆಲ್ಯಾರ ಇರತರ್ಲ."

"ವಬ್ಬರೆ ಬತ್ತರೆ, ಜ್ವತೆಲಿ ನಾವಿರದಿಲವೇನೊ."

"ನಾವಂತೂ ಇರದಿಲ್ಲ ಬುಡು. ಆದ್ರು ನೀನು ಇಂತ ಕ್ಯಲಸ ಒಪ್ಪಿಗಂಡು ಬಂದಿದ್ದಿಯಲ್ಲಾ, ಯಾರ ಮರಿಯಾದಿ ತಗಿಯಕ್ಕೆ ಮಾಡಿದ್ದಿಲ" ಎಂದ.

ನನಗೆ ವಾಸ್ತವ ಸಂಗತಿಗಳು ಅರಿವಿಗೆ ಬರತೊಡಗಿದವು. ಲಂಕೇಶರಿಗೊಂದು ಗುಡಿಸಲಾಕಿ ಕೊಡುವ ಉತ್ಸಾಹ ಬಿಟ್ಟು ನನ್ನ ಮುಂದೆ ಇನ್ಯಾವ ಸಮಸ್ಯೆಗಳೂ ಗೋಚರಿಸಿರಲೇಯಿಲ್ಲ. ಅಷ್ಟರಲ್ಲಿ ನಮ್ಮಣ್ಣ ಬಾಯಿಬಿಟ್ಟು "ಚಂದ್ರ ಹಿಂಗೆ ಮಾಡಿದರ್‍ಯಂಗೆ" ಎಂದ.

"ಹ್ಯಂಗೊ?"

"ಲ್ಯಂಕೇಸು ಗುಡ್ಳಲ್ಲಿರಬೇಕು ಅಂತಿ. ಹ್ಯಂಗಿದ್ರು ನಮ್ಮ ಕ್ವಟಗೆನೂ ಗುಡ್ಳಲವೆ. ಅದ್ನೆ ಕಿಲೀನ ಮಾಡಿನ್ಯ ಸಾರಿಸಿ ರಂಗೋಲೆ ಬುಡಿಸಿ ವಳ್ಳೆ ಡಕಾವಾಗಿ ಕಾಣಂಗೆ ಮಾಡಿ ಇರಸನ ತಗೊ" ಎಂದು ಸುಲಭದ ಪರಿಹಾರ ಹೇಳಿದ. ಇದನ್ನ ಆಡಿಕೊಂಡ ಸೀನಾಚಾರಿ "ಆಹಹ ಇವ್ರುನ ಕೊಟಗೆ ಏರ್‌ಕಂಡಿಷನ್ ರೂಮು ನೋಡು. ಅದರೊಳಗಿರೊ ಸ್ವಳೆ ಚೆಗಟ ಈ ಊರಿಗೇ ಆಯ್ತದೆ. ಅಲ್ಲಿಗೆ ತಗೊಂಡೋಗಿ ಲಂಕೇಸನ್ನ ಇರಿಸ್ಯನಂತೆ. ಲೇ ಚಂದ್ರ ಸುಮ್ಮನೆ ನಾನೇಳದ ಕೇಳು. ಲಂಕೇಶು ನಮ್ಮೂರ ನೋಡದೋ ಆದ್ರೆ ವೀರಭದ್ರ ಸ್ವಾಮಿ ಹಬ್ಬಕ್ಕೆ ಬರೇಳು. ಹಲಸಿನಕಾಯಿ ಹಾಕಿದ ಅವ್ರುರೆ ಸ್ವಾಡಗೆ ಊಟ ಉಂಡೋಗ್ಲಿ, ಇಲ್ಲ ಮಾರ್‍ನವಮಿ ಪಕ್ಷಕ್ಕೆ ಬರೇಳು. ಬೇಕಾದೊಟು ಬಾಡ ತಿಂದೋಗಬವುದು. ಈಗ ಕರಿಯದು ಬ್ಯಾಡ. ನಾನಂತೂ ಗುಡ್ಯಾಕಿ ಅವ್ರುರ ಕೈಲಿ ಬೈಸಿಗಳದಿಲ್ಲ. ಅವ್ರುರೇನು ಅಂತ ನನಿಗೊತ್ತು ಕಂಡ್ಳ. ಗುಡ್ಳು ಅಂದ್ರೆ ನಿಮಗೆ ಯಮ್ಮೆಕ್ವಟಗೆ ಇದ್ದಂಗೆ ಕಾಣ್ತದೆ. ಲ್ಯಂಕೇಸೇಳಿರದು ರುಶಿಮುನಿಗಳು ಕಟ್ಟಿಗತ್ತಿದರಲ್ಲ ಅಂತವು ಕಂಡ್ಳ. ಅವುಕೆ ಕುಟೀರ ಅಂತರೆ. ಅಂತೆದ ಇಲ್ಲಿ ಕಟ್ಟಕ್ಕಾದತ್ಲ? ಬೇಕಾದ್ರೆ ಇನ್ನೊಂದು ಸತಿ ಹೋಗಿ ಗುಡುಸ್ಲು ಯಂಗಿರಬೇಕು ಅಂತ ಕೇಳು ಹೇಳ್ತನೆ" ಎಂದ. ನನ್ನ ಸಾಹಸವನ್ನು ಗೇಲಿ ಮಾಡುತ್ತ ಹೊರಟ. ನಾನು ಏನೂ ಮಾಡಲಾಗದ ಸ್ಥಿತಿಯಲ್ಲಿ ಎರಡು ದಿನ ದೂಡಿದೆ. ಅಷ್ಟರಲ್ಲಿ ಲಂಕೇಶರಿಂದ ಕಾಗದ ಬಂತು.


ಪ್ರಿಯ ಚಂದ್ರೇಗೌಡ,

ನೀನು ನಿಮ್ಮೂರಿನಲ್ಲಿ ನನಗಾಗಿ ಗುಡಿಸಲು ಕಟ್ಟುವ ತಾಪತ್ರಯ ಬೇಡ. ಸುಬ್ಬಣ್ಣನವರು ಹೆಗ್ಗೋಡಿನ ಸಮೀಪ ಒಂದು ಮನೆಯನ್ನು ನೋಡಿದ್ದಾರಂತೆ. ಅಲ್ಲಿಗೆ ಹೋಗಿ ಇದ್ದು ಬರುವ ಆಲೋಚನೆಯಲ್ಲಿದ್ದೇನೆ.

ಇತಿ

ಲಂಕೇಶ್

ಪತ್ರ ಓದಿ ನನ್ನ ತಲೆಯ ಮೇಲಿನ ಭಾರ ಇದ್ದಕ್ಕಿದ್ದಂತೆ ಇಳಿದಂತಾಯ್ತು. ಜೊತೆಗೆ ಇನ್ನೆಂದೂ ಇಂತಹ ಕೈಲಾಗದ ಜವಾಬ್ದಾರಿ ಹೊತ್ತುಕೊಳ್ಳಬಾರದೆನಿಸಿತು. ... ಕೂಡ ಮಾತು ಕೊಡುವ ... ದೆಸೆಯಿಂದ ಆಲೋಚನೆ ... ನನ್ನನ್ನು ಎಚ್ಚರಿಸುತ್ತಲೇ ಇದೆ.



● ಬಿ. ಚಂದ್ರೇಗೌಡ

ನಟರಾಜ್ ಕಗ್ಗೊಲೆಯ ಹಿಂದೆ ಬಿಜೆಪಿ?



ಬಿಬಿಎಂಪಿಯ ಇನ್ನೂರು ಮಂದಿ ಕೌನ್ಸಿಲರ್‌ಗಳು ಮಾಜಿಗಳಾಗಲು ಇನ್ನೊಂದು ತಿಂಗಳಷ್ಟೇ ಬಾಕಿ. ಮುಂಬರುವ ಪಾಲಿಕೆ ಚುನಾವಣೆಗಿದು ರಕ್ತಸಿಕ್ತ ಮುನ್ನುಡಿಯೋ ಅಥವಾ ರಾಜಧಾನಿಗಿನ್ನೆಂಥಾ ದುರವಸ್ಥೆ ಕಾದಿದೆ ಎಂಬುದರ ಮುನ್ಸೂಚನೆಯೋ ಗೊತ್ತಾಗುತ್ತಿಲ್ಲ. ಕೊಲೆಯಾದ ಕುದೂರು ನಟರಾಜ್ ರಾಜಗೋಪಾಲನಗರದ ಜನಪ್ರಿಯ ಯುವ ನೇತಾರ. ಮುಂಬರುವ ಪಾಲಿಕೆ ಚುನಾವಣೆಯಲ್ಲಿ ಹಾಲಿ ಕೌನ್ಸಿಲರ್ ಬಿಜೆಪಿಯ ಗಂಗಾಧರನನ್ನು ನಿರಾಯಾಸವಾಗಿ ಮಣ್ಣುಮುಕ್ಕಿಸುವ ಶಕ್ತಿ ಛಲ, ಒಳಿತೆಲ್ಲವನ್ನೂ ಮೈಗೂಡಿಸಿಕೊಂಡೇ ಸಂಘಟನೆಗಿಳಿದಿದ್ದವನನ್ನು ಈಗ ಬಿಜೆಪಿ ನೆರಳಲ್ಲೇ ಅರಳಿದ ರೌಡಿ ಕ್ಯಾಕಸ್ ಕೊಂದು ಮುಗಿಸಿದೆ.


ಅಲ್ಲಿಗೆ ದಾಸರಹಳ್ಳಿ ಬಿಜೆಪಿ ಶಾಸಕ ಮುನಿರಾಜು ಮತ್ತವರ ರಿಯಲ್ ಎಸ್ಟೇಟ್ ಸಾಮ್ರಾಜ್ಯಕ್ಕೊದಗಿದ ಅತಿ ಸೂಕ್ಷ್ಮ ಅಪಾಯಕ್ಕೂ ತಡೆ ಬಿದ್ದಂತಾಯ್ತು!

ಬಿ. ನಟರಾಜ್‌ಕುಮಾರ್ ಯಾನೇ ಕುದೂರು ನಟರಾಜ್ ಕೊಲೆಯಾದ ರೀತಿಯೇ ಪೀಣ್ಯ-ದಾಸರಹಳ್ಳಿಯ ರಿಯಲ್ ಎಸ್ಟೇಟ್ ರಾಜಕಾರಣದ ಪರಿಣಾಮದಂತಿದೆ. ಮಾರ್ಚ್ 3ರ ಮಂಗಳವಾರ ಬೆಳಗ್ಗೆ ತಿಗಳರಪಾಳ್ಯದಲ್ಲಿ ತಾನು ಕಟ್ಟಿಸುತ್ತಿದ್ದ ಮನೆಯ ಕಾಮಗಾರಿಯ ಪರಿಶೀಲನೆಗೆಂದು ಬಂದ ನಟರಾಜ್ ಅಕ್ಕಪಕ್ಕದ ಒಂದಿಬ್ಬರು ಪರಿಚಿತರೊಂದಿಗೆ ಸಮೀಪದ ಬೇಕರಿಗೆ ಹೋಗಿ ಟೀ ಕುಡಿದಿದ್ದಾರೆ. ಅವರನ್ನು ಬೀಳ್ಕೊಟ್ಟು ಇನ್ನೇನು ಕಟ್ಟಡವನ್ನು ಹೊಕ್ಕಬೇಕೆನ್ನುವಷ್ಟರಲ್ಲಿ ಒಂದು ಆಟೋ ಇನ್ನೆರಡು ಬೈಕುಗಳಲ್ಲಿ ಹಂತಕ ಪಡೆ ದಾಳಿಯಿಟ್ಟಿದೆ. ಕೈಯಲ್ಲಿ ಉದ್ದುದ್ದದ ಲಾಂಗುಗಳನ್ನು ಹಿಡಿದು ಮುನ್ನುಗ್ಗುತ್ತಿದ್ದವರನ್ನು ಕಂಡಿದ್ದೇ ಅಪಾಯದ ಬಗ್ಗೆ ಕಿಂಚಿತ್ತೂ ಅರಿವಿಲ್ಲದ ನಟರಾಜ್ ಎದ್ದೂಬಿದ್ದೂ ಓಡಲು ಹೋಗಿ ತೋಡಿದ್ದ ಗುಂಡಿಯೊಳಕ್ಕೆ ಎಡವಿದ್ದಾರೆ. ಅಷ್ಟೇ-

ಜನಾನುರಾಗಿ

ಅರೆಕ್ಷಣದಲ್ಲೇ ನಟರಾಜ್ ನಿಶ್ಚಲಕಾಯವಾಗಿ ಬಿದ್ದಿದ್ದ. ತಲೆ ಹೋಳಾಗಿ ಮೆದುಳು ಛಿದ್ರವಾಗಿತ್ತು, ಬಲಗೈ ತುಂಡಾಗಿ ಚರ್ಮವಷ್ಟೇ ನೇತಾಡುತ್ತಿತ್ತು, ಎದೆ, ಬೆನ್ನು, ಹೊಟ್ಟೆಯೆನ್ನದೇ ಮೈತುಂಬಾ ಮಚ್ಚೇಟುಗಳು. ಐದೇ ನಿಮಿಷದಲ್ಲಿ ಕೆಲಸ ಮುಗಿಸಿದ ಹಂತಕರು ಬಂದಷ್ಟೇ ವೇಗವಾಗಿ ಮರೆಯಾದರು. ಅದು ತಿಂಗಳಾನುಗಟ್ಟಲೇ ಹೊಂಚು ಹಾಕಿ ಸಾಧಿಸಿದ್ದ ವ್ಯವಸ್ಥಿತ ಕಗ್ಗೊಲೆ.


ನಟರಾಜ್‌ಗೆ ರಾಜಕಾರಣವೆಂಬುದು ಇಂದು ನಿನ್ನೆಯದೇನಲ್ಲ, ತಂದೆ ಭೋಜರಾಜ್ ಪ್ರತಿಷ್ಠಿತ ಮೈಕೋ ಫ್ಯಾಕ್ಟರಿಯಲ್ಲಿ ಅಧಿಕಾರಿಯಾಗಿದ್ದರು. ತಾಯಿ ಗಂಗಮ್ಮ ಹತ್ತು ವರ್ಷದ ಹಿಂದೆಯೇ ಸಿಎಂಸಿ ಚುನಾವಣೆಗೆ ಜೆಡಿಎಸ್ ಅಭ್ಯರ್ಥಿಯಾಗಿ ನಿಂತು ಕೂದಲೆಳೆಯಲ್ಲಿ ಸೋತಿದ್ದರು. ಆದರೆ ನಟರಾಜ್ ಆ ಕಾಲದಿಂದಲೂ ಕಾಂಗ್ರೆಸ್ ಬಾವುಟ ಹಿಡಿದವರು. ಭೋಜರಾಜ್-ಗಂಗಮ್ಮ ದಂಪತಿಗಳ ನಾಲ್ವರು ಮಕ್ಕಳ ಪೈಕಿ ನಟರಾಜ್ ಹಿರೀಕ. ತಮ್ಮ ದೇವೇಂದ್ರಕುಮಾರ್ ಹಲವಾರು ವ್ಯಾಪಾರ ಉದ್ದಿಮೆಯಲ್ಲಿದ್ದ. ನಟರಾಜ್ ದುಡ್ಡು ಆಸ್ತಿಗಾಗಿ ರಾಜಕೀಯಕ್ಕೆ ಬಂದವನಲ್ಲ. ತಿಗಳರ ಪಾಳ್ಯದಲ್ಲಿ ಜೆಡಿಎಸ್-ಡೀಕೆ ವಾಟರ್ ಸಪ್ಲೈ ರಾಜಗೋಪಾಲನಗರದ ಮಾರುತಿ ಟಾಕೀಸ್ ಬಳಿ ಜೆಡಿಎನ್ ಮೋಟಾರ್ಸ್ ಎಂಬ ಕಾರುಗಳ ಷೋರೂಮ್, ಪಕ್ಕದಲ್ಲೇ ವಿನಾಯಕ ಎಂಟರ್‌ಪ್ರೈಸಸ್ ಹೆಸರಿನ ಬೈಕ್ ಷೋರೂಮ್- ಹೀಗೆ ತರಹೇವಾರಿ ವ್ಯವಹಾರಗಳ ಹುಟ್ಟು ಶ್ರೀಮಂತ. ನಟರಾಜ್‌ನ ದೊಡ್ಡ ಆದಾಯವಿದ್ದದ್ದು ಟ್ರಾನ್ಸ್‌ಪೋರ್ಟ್ ದಂಧೆಯಲ್ಲಿ. ದೇಶದ ತರಹೇವಾರಿ ಕಾರು, ಲಾರಿಗಳ ಫ್ಯಾಕ್ಟರಿಗಳಿಂದ ಅವುಗಳ ಬೆಂಗಳೂರಿನ ಗೋಡೌನುಗಳಿಗೆ ಲಾರಿ, ಕಾರುಗಳನ್ನು ಸಾಗಿಸಿ ತಂದುಕೊಡುವುದೇ ನಟರಾಜ್‌ನ ಮುಖ್ಯ ಕಸುಬಾಗಿತ್ತು. ಪೀಣ್ಯದ ಅರವಿಂದ್ ಮೋಟಾರ್ಸ್, ಐಷರ್, ಭಾರತ್ ಬೆಂಜ್ ಇತ್ಯಾದಿ ಡೀಲರುಗಳಿಗೆ ಸ್ಟಾಕ್‌ಯಾರ್ಡುಗಳಿಂದ ವಾಹನಗಳನ್ನು ಸಾಗಿಸಿ ತರಲೆಂದೇ ನೂರಕ್ಕೂ ಅಧಿಕ ಡ್ರೈವರುಗಳನ್ನು ನಟರಾಜ್ ನೇಮಿಸಿಕೊಂಡಿದ್ದ. ಇದೊಂದೇ ವ್ಯವಹಾರದಿಂದ ನಟರಾಜ್‌ಗೆ ವರ್ಷವೊಂದಕ್ಕೆ ಕೋಟಿ ಮೊತ್ತದ ಆಮದನಿಯಿತ್ತು.



ಕೌನ್ಸಿಲರ್ ಗಂಗಾಧರ!

ಇಷ್ಟೆಲ್ಲ ವ್ಯಾಪಾರ, ವ್ಯವಹಾರ, ಆದಾಯವಿದ್ದಾಗ್ಯೂ ನಟರಾಜ್‌ಗೆ ಸಮಾಜಸೇವೆಯ ಗೀಳು. ಪ್ರತಿ ತಿಂಗಳೂ ಈ ಭಾಗದ ಒಂದಷ್ಟು ಬಡವಿದ್ಯಾರ್ಥಿಗಳಿಗೆ ಫೀಜು ಕೊಡುವುದರ ಮೂಲಕ ಶುರುವಾದ ನಟರಾಜ್‌ನ ಸಾರ್ವಜನಿಕ ಬದುಕು ಅಣ್ಣಮ್ಮ, ರಾಜ್ಯೋತ್ಸವ, ಕನ್ನಡ ಬಾವುಟದ ತನಕ ವ್ಯಾಪಿಸಿತು. ರಾಜಗೋಪಾಲನಗರ, ಗಣಪತಿನಗರ, ಶಾಂಭವಿನಗರ, ಜಿಕೆಡಬ್ಲ್ಯೂ ಲೇಔಟ್, ಬಸಪ್ಪನ ಕಟ್ಟೆ, ರಾಮಯ್ಯ ಬಡಾವಣೆ, ಐಟಿ ನಗರ ಮತ್ತು ಕರೀಂಸಾಬ್ ಲೇಔಟ್ ಇತ್ಯಾದಿ ಏರಿಯಾಗಳಲ್ಲಿ ಯಾರೇ ಸತ್ತರೂ ನಟರಾಜ್ ಅವರಿಗೆ 5 ಸಾವಿರ ರೂಪಾಯಿ ಕೊಡುತ್ತಿದ್ದ. ಈ ಭಾಗದಲ್ಲಿ ಯಾರೇ ಮದುವೆಯಾದರೂ ಹತ್ತು ಸಾವಿರ, ನೇತ್ರ ಚಿಕಿತ್ಸಾ ಕ್ಯಾಂಪ್, ರಕ್ತದಾನ ಶಿಬಿರ ಹೀಗೆ ನಟರಾಜ್ ಸಮಾಜಸೇವೆಗೆಂದು ಕಳೆದ ದುಡ್ಡೇ ಹಲವು ಕೋಟಿ ಲೆಕ್ಕದಲ್ಲಿತ್ತು. ತಾನೇ ನಿಂತು ಊರಹಬ್ಬವನ್ನೂ ಮಾಡಿಸುತ್ತಿದ್ದ.

ಕಳೆದ ಹದಿನೈದಿಪ್ಪತ್ತು ವರ್ಷಗಳಿಂದ ಶುರುವಾದ ನಟರಾಜ್‌ನ ಸಮಾಜ ಸೇವೆಯು ಪರಮಾವಧಿಯೆಂಬಂತೆ ನಡೆದದ್ದು ಕಳೆದ ವಿಧಾನಸಭಾ ಚುನಾವಣೆ. ದಾಸರಹಳ್ಳಿಯ ಬಿಜೆಪಿ ಶಾಸಕ ಮುನಿರಾಜು ವಿರುದ್ಧ ಕಾಂಗ್ರೆಸ್ಸಿನಿಂದ ಕಣಕ್ಕಿಳಿದಿದ್ದು ಬಿ.ಎಲ್. ಶಂಕರ್. ಶತಾಗತಾಯ ಶಂಕರ್‌ರನ್ನು ಗೆಲ್ಲಿಸಿಯೇ ತೀರುತ್ತೇನೆಂದು ನಟರಾಜ್ ಅಖಾಡಕ್ಕಿಳಿದಿದ್ದ. ಆದರೆ ರಾಜಗೋಪಾಲನಗರ ಪಾಲಿಕೆ ವಾರ್ಡಿಗೆ ಗೆದ್ದದ್ದು ಬಿಜೆಪಿಯ ಗಂಗಾಧರ್. ಗೆದ್ದಾಗಿನಿಂದ ಬೋಗಸ್ ಬಿಲ್ಲು, ಕಳಪೆ ಟಾರು, ಮೋರಿ ಶಿಲ್ಕು ದಂಧೆಯಲ್ಲೇ ಕಾಲಹರಣ ಮಾಡಿದ್ದ ಗಂಗಾಧರ್‌ಗೆ ಈ ಬಾರಿ ಆತನ ಸಂಬಂಧಿಗಳೂ ಓಟು ಹಾಕುವುದು ಕಷ್ಟವಿತ್ತು. ಕಳೆದ ಪಾಲಿಕೆ ಚುನಾವಣೆಯಲ್ಲಿ ಗಂಗಾಧರ್ ವಿರುದ್ಧ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದು ನಾಗಭೂಷಣ. ಎರಡೂ ಸಾವಿರದ ಅಂತರದಲ್ಲೇ ಗೆದ್ದಿದ್ದ ಗಂಗಾಧರ್‌ನ ಕುಖ್ಯಾತಿಗೆ ಪರಿಹಾರ ಮಾಡಲೇಬೇಕಿದ್ದ ಶಾಸಕ ಮುನಿರಾಜು ಗಾಳ ಹಾಕಿದ್ದು ಸಿಮೆಂಟ್ ಸುರೇಶನೆಂಬ ಪಕ್ಷೇತರನಿಗೆ.



ಸಿಮೆಂಟ್ ಸುರೇಶ ಪಕ್ಷೇತರನಾಗಿಯೇ ಪಾಲಿಕೆ ಚುನಾವಣೆಯಲ್ಲಿ ನಾಲ್ಕು ಸಾವಿರದಷ್ಟು ಮತ ಗಳಿಸಿ ಜೆಡಿಎಸ್ ಹಿಂದಿಕ್ಕಿ 3ನೇ ಸ್ಥಾನಕ್ಕೆ ಬಂದಿದ್ದ. ಈ ಬಾರಿ ನಿನಗೆ ಪಾಲಿಕೆಯ ಬಿಜೆಪಿ ಟಿಕೆಟ್ಟೆಂದು ನಂಬಿಸಿದ ಮುನಿರಾಜು ಸುರೇಶನನ್ನು ಬಿಜೆಪಿ ತೆಕ್ಕೆಗೆಳೆದುಕೊಂಡ ಫಲವಾಗಿ ಕಾಂಗ್ರೆಸ್ಸಿಗಿಲ್ಲಿ ಹಿನ್ನಡೆಯಾಯಿತು. ಕಾಂಗ್ರೆಸ್ ನಾಯಕ ಬಿ.ಎಲ್. ಶಂಕರ್ ಮುನಿರಾಜು ವಿರುದ್ಧ ಸೋಲುವಂತಾಯಿತು. ಹಾಗಂತ ಪಾಲಿಕೆ ಚುನಾವಣೆಯನ್ನು ನಿರ್ಲಕ್ಷಿಸುವಂತಿಲ್ಲವಲ್ಲ. ಮುನಿರಾಜು ತಂತ್ರಕ್ಕೆ ಇದಿರಾಗಿ ಶಂಕರ್ ಕಣ್ಣು ಬಿದ್ದದ್ದು ನಟರಾಜ್ ಮೇಲೆ. 'ಮುಂಬರುವ ಪಾಲಿಕೆ ಚುನಾವಣೆಗೆ ನೀನೇ ನೋಡಪ್ಪ ಕಾಂಗ್ರೆಸ್ ಕ್ಯಾಂಡಿಡೇಟು....' ಎಂದು ಬಹಿರಂಗವಾಗೇ ಘೋಷಿಸಿ ಬಿಟ್ಟರು. ಅದಕ್ಕೂ ಮುನ್ನ ನಟರಾಜ್‌ನನ್ನು ರಾಜಗೋಪಾಲನಗರ ವಾರ್ಡಿನ ಕಾಂಗ್ರೆಸ್ ಕಮಿಟಿಗೆ ಅಧ್ಯಕ್ಷನೆಂದು ಘೋಷಿಸಿದ್ದರು. ಇಲ್ಲಿಗೆ ಆರು ತಿಂಗಳ ಹಿಂದೆ ಜೈಮಾರುತಿ ಥೇಟರ್ ಮುಂಭಾಗದ ನಟರಾಜ್ ಮನೆಯೆದುರೇ ನಡೆದ ಆತನ ಹುಟ್ಟುಹಬ್ಬದ ಸಮಾರಂಭದಲ್ಲಿ ಶಂಕರ್ ಪಾಲಿಕೆಗೆ ಈತನೇ ಕಾಂಗ್ರೆಸ್ ಕ್ಯಾಂಡಿಡೇಟ್ ಎಂದು ಘೋಷಿಸಿದ್ದು ಬಿಜೆಪಿ ಪಾಳಯದ ಪಾಲಿಗೆ ಭೂಕಂಪದಂತಿತ್ತು.

ಮಾರುತಿ ಬಾರ್

ಒಂದೆಡೆ ಹಾಲಿ ಕೌನ್ಸಿಲರ್ ಗಂಗಾಧರ್ ಮತ್ತೊಂದೆಡೆ ಬಿಜೆಪಿ ಟಿಕೆಟ್ ಆಕಾಂಕ್ಷಿ ಸಿಮೆಂಟ್ ಸುರೇಶ್ ಮಗದೊಂದೆಡೆ ಶಾಸಕ ಮುನಿರಾಜು ಇತ್ಯಾದಿಗಳೆಲ್ಲರಿಗೂ ಸೆಡ್ಡು ಹೊಡೆದಂತೆ ನಟರಾಜ್ ಬೀದಿಗಿಳಿದು ಸಂಘಟನೆಗೆ ನಿಂತ. ಕಾಂಗ್ರೆಸ್‌ಗೆ ಲೋಕಸಭಾ ಅಭ್ಯರ್ಥಿಯಾಗಿದ್ದ ನಾರಾಯಣ ಸ್ವಾಮಿ ಮತ್ತು ಸ್ಥಳೀಯ ಕಾಂಗ್ರೆಸ್ ನಾಯಕ ಗನ್‌ಮನ್ ಮಂಜಪ್ಪ, ಮತ್ತೊಬ್ಬ ನಾಯಕ ಸೌಂದರ್ಯ ಮಂಜಪ್ಪ ಮುಂತಾದವರೆಲ್ಲರೂ ನಟರಾಜ್ ಬೆಂಬಲಕ್ಕೇ ನಿಂತಿದ್ದರು. ಎಲ್ಲವೂ ಹೀಗೆಯೇ ಸಾಗಿದ್ದರೆ ನಟರಾಜ್ ಇವತ್ತಲ್ಲ ನಾಳೆ ರಾಜಗೋಪಾಲನಗರದ ಕೌನ್ಸಿಲರ್ ಆಗುತ್ತಿದ್ದ. ಆದರೆ ಕುತ್ತು ಕಾದಿದ್ದು ಆತನ ಮನೆ ಸಮೀಪದಲ್ಲೇ ಬಿಜೆಪಿ ನಾಯಕರು ಶುರುಹಚ್ಚಿಕೊಂಡ ಬಾರ್ ದಂಧೆಯ ಮೂಲಕ.

ನಟರಾಜ್ ಮನೆಯೆದುರಿನ ಮಾರುತಿ ಚಿತ್ರಮಂದಿರದ ಪಕ್ಕದಲ್ಲೇ ರಾತ್ರೋರಾತ್ರಿ ತಲೆ ಎತ್ತಿದ್ದು ಜೈಮಾರುತಿ ಬಾರ್ ಅಂಡ್ ರೆಸ್ಟೋರೆಂಟ್. ಅದಕ್ಕೆ ಮಾಲಿಕನಾಗಿದ್ದು ಚನ್ನೇಗೌಡ. ಹೇಳಿಕೇಳಿ ಈತ ದಾಸರಹಳ್ಳಿ ಬಿಜೆಪಿ ಶಾಸಕ ಮುನಿರಾಜು ಚೇಲಾ. ಈತನ ಅಣ್ಣ ಹೊನ್ನಯ್ಯ ಪಕ್ಕದ



ಆನಂದ್ ಗುರೂಜಿ ಜೊತೆ ನಟರಾಜ್

ಬಾರ್ ವಿರುದ್ಧ ಪ್ರತಿಭಟನೆಯಲ್ಲಿ ನಟರಾಜ್,

ಸುಪಾರಿ ಹಂತಕ ಸ್ಲಂ ಭರತ ಮತ್ತು ದಾಸರಹಳ್ಳಿ ಶಾಸಕ ಮುನಿರಾಜು

ಬಾಳೇಗೌಡರು ಸುಬ್ರಹ್ಮಣ್ಯಪುರ ಠಾಣೆಗೆ ಇನ್ಸ್‌ಪೆಕ್ಟರಾಗಿ ಬಂದನಂತರ ಆ ಭಾಗದ ಬಹುತೇಕ ರೌಡಿಗಳೆಲ್ಲ ದಿಕ್ಕಾಪಾಲಾಗಿ ಯಾವ್ಯಾವುದೋ ಏರಿಯಾಗಳಲ್ಲಿ ತಲೆಮರೆಸಿಕೊಂಡದ್ದು ಹಳೇ ಕತೆ. ಹೀಗೆ ಬಾಳೇಗೌಡರ ಭೀತಿಗೆ ಬಿದ್ದು ತ್ಯಾಗರಾಜನಗರದಿಂದ ನಾಪತ್ತೆಯಾದ ರೌಡಿ ಆನಂದ ಸದ್ದಿಲ್ಲದೆ ತಲೆಎತ್ತಿದ್ದು ಲಗ್ಗೆರೆ ಪಕ್ಕದ ಅಂದ್ರಳ್ಳಿ ಏರಿಯಾದಲ್ಲಿ. ಅಲ್ಲಿ ಹೆಂಗಸೊಬ್ಬಳ ಮೇಲೆ ಕಣ್ಣು ಹಾಕಿ ಆಕೆಯ ಗಂಡನನ್ನೇ ಕೊಂದು ಜೈಲು ಪಾಲಾದ. ಜೈಲಲ್ಲಿ ಆತನ ಜೊತೆಯಾದವನು ಪೀಣ್ಯ ಹೆಗ್ಗನಹಳ್ಳಿಯ ಕ್ಷುದ್ರ ಪಾತಕಿ ಸ್ಲಂ ಭರತ.

ಪೀಣ್ಯ, ಹೆಗ್ಗನಹಳ್ಳಿ, ರಾಜಗೋಪಾಲನಗರ, ಅಂದ್ರಳ್ಳಿ ಇತ್ಯಾದಿ ಏರಿಯಾಗಳಲ್ಲಿ ಸ್ಲಂ ಭರತ ಎಂದರೆ ಅದೊಂದು ಭಯಾನಕ ದುಃಸ್ವಪ್ನದಂತೆ. ಸದ್ಯ ಜೋಡಿ ಕೊಲೆ ಕೇಸಲ್ಲಿ ಜೈಲು ಪಾಲಾಗಿರುವ ಸ್ಲಂ ಭರತನ ಬೆನ್ನಿಗಿರುವುದು ಖುದ್ದು ದಾಸರಹಳ್ಳಿ ಶಾಸಕ ಮುನಿರಾಜು. ವಿಘ್ನೇಶ್ವರನಗರದ ಪಾತಕಿ ಸಂಪತ್ತು, ಹೆಗ್ಗನಹಳ್ಳಿ ಕ್ರಾಸಿನ ರೌಡಿ ಆ್ಯಪಲ್ ಸಂತು, ಅಂದ್ರಳ್ಳಿಯ ಕಿರಾತಕ ಗುಬ್ಬಚ್ಚಿ ಸೀನ, ಹೆಗ್ಗನಹಳ್ಳಿಯ ಪುಡಿ ರೌಡಿ ಬುಕಾಟಿ, ಮಚ್ಚನ ಮಾಜಿ ಶಿಷ್ಯ ತುರೇ ಸತೀಶ; ಹೀಗೆ ಸುತ್ತಮುತ್ತಲ ಒಂದೊಂದು ಸ್ಲಮ್ಮಿಗೂ ಒಬ್ಬೊಬ್ಬ ಸಾಮಂತನಂಥ ಹಂತಕ ಪಡೆಗಳನ್ನು ಸ್ಲಂ ಭರತ ಜೈಲಿನಿಂದಲೇ ಸಂಭಾಳಿಸುತ್ತಾನೆ.

ಹೆಗ್ಗನಹಳ್ಳಿ ವಾರ್ಡ್ ಬಿಜೆಪಿ ಅಧ್ಯಕ್ಷ ಹೊನ್ನಯ್ಯನೂ ಈ ಸ್ಲಂ ಭರತನ ಅನ್ನದಾತನೇ. ಕಾಂಗ್ರೆಸ್ ನಾಯಕ ನಟರಾಜ್ ಯಾವತ್ತು ಹೊನ್ನಯ್ಯನ ತಮ್ಮ ಚನ್ನೇಗೌಡನ ಬಾರ್ ವಿರುದ್ಧ ಪ್ರತಿಭಟನೆಗಿಳಿದನೋ ಆವತ್ತೇ ಸ್ಲಂ ಭರತನ ಕಣ್ಣು ನಟರಾಜ್ ಮೇಲೆ ಬಿದ್ದಾಗಿತ್ತು, ಪೊಲೀಸ್ ಮೂಲಗಳೇ ಹೇಳುವಂತೆ ಜೈಲಲ್ಲಿದ್ದ ಭರತನಿಗೆ ಬಾರ್ ಮಾಲಿಕ ಚನ್ನೇಗೌಡ 50 ಲಕ್ಷದ ಸುಪಾರಿ ಕೊಟ್ಟಿದ್ದಾನೆ. ಅದಕ್ಕೆ ತಕ್ಕಂತೆ ಹೆಂಗಸೊಬ್ಬಳನ್ನು ರೆಡಿ ಮಾಡಿದ್ದೇ ಉಪಾಯವಾಗಿ ನಟರಾಜ್ ಭೇಟಿ ಮಾಡಿ ಕಣ್ಣೀರಿಟ್ಟಂತೆ ನಾಟಕವನ್ನೂ ಹೆಣೆಯಲಾಗಿದೆ. ಆ ಹೆಂಗಸಿನ ಮೂಲಕ ನಟರಾಜ್‌ನನ್ನು ಮೇಲೆಳೆದುಕೊಂಡಂತೆ ಮಾಡಿದ ಆನಂದ್ ಅಷ್ಟೇ ವ್ಯವಸ್ಥಿತವಾಗಿ ಕೊಂದು ಮುಗಿಸಿದ್ದಾನೆ.

ಪಶ್ನೆಯಿಂದರೆ ಕಾಂಗ್ರೆಸ್ ಸರ್ಕಾರವಿದ್ದೂ ಬಿಜೆಪಿ ಕ್ರಿಮಿನಲ್‌ಗಳ ರಕ್ತದಾಹದ ವಿರುದ್ಧ ನಯಾ ಪೈಸೆಯ ಕ್ರಮವನ್ನೂ ಪೊಲೀಸರು ಕೈಗೊಳ್ಳುತ್ತಿಲ್ಲವಲ್ಲ; ಕಾಂಗ್ರೆಸ್ ನಾಯಕನೇ ಕೊಲೆಯಾದರೂ ಅಸಲೀ ಕಾರಣಕರ್ತರನ್ನು ಜೈಲಿಗೆ ದಾಕಲಾಗದ ದುಃಸ್ಥಿತಿ ಬರಬಾರದಿತ್ತು,



...ಗ್ಗನಹಳ್ಳಿ ವಾರ್ಡಿನ ಬಿಜೆಪಿ ಅಧ್ಯಕ್ಷ. ಹೆಗ್ಗನಹಳ್ಳಿ ಸುತ್ತಮುತ್ತಲ ಸ್ಲಮ್ಮುಗಳಲ್ಲಿ ತಲೆಎತ್ತಿದ ಪುಡಿರೌಡಿ ಪಡೆಗಳಿಗೆ ... ಹೊನ್ನಯ್ಯನೂ ಅನ್ನದಾತನೆ. ಎಲ್ಲಕ್ಕೂ ಮಿಗಿಲಾಗಿ ...ಸರಹಳ್ಳಿ ಶಾಸಕ ಮುನಿರಾಜು ನೆರಳಲ್ಲೇ ಒಂದಕ್ಕಿಂತ ...ತ್ತೊಂದು ಭಯಾನಕವೆನಿಸುವಂಥ ರೌಡಿಗ್ಯಾಂಗುಗಳು ...ಲೆ ಎತ್ತಿವೆ.

ತನ್ನ ಮನೆ ಸಮೀಪದ ದುರ್ಗಾಸ್ಟೋರ್ ಎದುರು ...ತ್ತೋರಾತ್ರಿ ತಲೆ ಎತ್ತಿದ ಜೈಮಾರುತಿ ಬಾರ್ ಪಕ್ಕದ್ದೇ ...ಶ್ವರ ದೇವಸ್ಥಾನ. ಸನ್‌ರೈಸ್ ಸ್ಕೂಲ್ ಮತ್ತು ಗುರು ...ಘವೇಂದ್ರ ಶಾಲೆಗಳಿಗೂ ಹತ್ತಿರದಲ್ಲೇ ಬಾರು ತೆರೆದಿದ್ದರ ...ಂದಿದ್ದದ್ದು ಭ್ರಷ್ಟ ಅಬಕಾರಿ ಇನ್ಸ್‌ಪೆಕ್ಟರ್ ಶಾಂತಕುಮಾರಿ ...ತ್ತು ಅಬಕಾರಿ ಡಿಸಿ ಜಯಸಿಂಹ. ಲಗ್ಗೆರೆಯ ಅಂದಾನಪ್ಪನ ...ಲ್ಡಿಂಗ್‌ನಲ್ಲಿ ನಡೆಯುತ್ತಿದ್ದ ಬಾರನ್ನು ರಾಜಗೋಪಾಲನಗರ ...ಖ್ಯರಸ್ತೆಗೆ ಅಕ್ರಮವಾಗಿ ಸ್ಥಳಾಂತರಿಸಿದ್ದೇ ಸಮಸ್ಯೆಯಾಗಿತ್ತು. ...ಗಸ್ಟ್ 15ರ ಸ್ವಾತಂತ್ರ ದಿನಾಚರಣೆ ದಿನವೇ ತಲೆಎತ್ತಿದ ...ಬಾರ್ ವಿರುದ್ಧ ದನಿಯೆತ್ತಿದ ಮಹಿಳೆಯರಿಗೆ ಬೆಂಬಲ ...ಡಿದ್ದು ನಟರಾಜ್.

ಸ್ಕೆಚ್ ರೆಡಿ!

ಸರಿಸುಮಾರು ಐದು ಸಾವಿರ ಜನರನ್ನು ಸೇರಿಸಿ ಬಾರ್ ...ದುರು ಬೃಹತ್ ಪ್ರತಿಭಟನೆ ನಡೆಸಿದ ನಟರಾಜ್ ಅಬಕಾರಿ ...ಯುಕ್ತರಿಗೂ ದೂರು ಕೊಟ್ಟ. ಬಿಜೆಪಿ ನಾಯಕರೆಲ್ಲ ...ರಿನ ಪರವಾದರೆ ಬಾರ್ ವಿರೋಧಿಸುವವರ ಬೆನ್ನಿಗೆ ...ಂಗ್ರೆಸ್ಸು. ಬಹುಶಃ ಆವತ್ತೇ ಅಬಕಾರಿ ಅಧಿಕಾರಿಗಳು ...ರ್ ಮುಚ್ಚಿಸಿದ್ದರೆ ತಾಪತ್ರಯವಿರುತ್ತಿರಲಿಲ್ಲ. ಪ್ರತಿ ...ಂಗಳವಾರ ಅಬಕಾರಿ ಆಯುಕ್ತರ ಕಚೇರಿಯ ವಿಚಾರಣೆಗೆ ...ಟರಾಜ್ ಹೋಗಿಬರುತ್ತಿದ್ದ. ಜಿದ್ದಿಗೆ ಬಿದ್ದ ಬಾರ್ ಮಾಲಿಕ ...ನ್ನೇಗೌಡ ತನ್ನಣ್ಣ ಹೊನ್ನಯ್ಯನ ಮೂಲಕ ನಟರಾಜ್‌ಗೆ ...ದರಿಕೆ ಹಾಕಿ ನೋಡಿದ. ಶಾಸಕ ಮುನಿರಾಜು ಮೂಲಕ ...ಲೀಸರ ಮೇಲೆ ಒತ್ತಡ ತಂದ. ರೌಡಿಗಳಿಂದಲೂ ...ಮಕಿ ಕೊಟ್ಟ. ಇದ್ಯಾವುದಕ್ಕೂ ಜಗ್ಗದ ನಟರಾಜ್ ಬಾರ್ ...ರುದ್ಧದ ತನ್ನ ಹೋರಾಟವನ್ನು ಮುಂದುವರೆಸಿದ್ದ. ಆದರೆ ...ರ್ ದಂಧೆಕೋರರಿಗೆ ಕಾಂಗ್ರೆಸ್ ನಾಯಕನಾದರೇನು ...ಮಾರ ಪ್ರಾಣವಾದರೇನು?


ಈ ಮಧ್ಯೆ ನಟರಾಜ್‌ಗೆ ಹೊಸ ತಲೆನೋವೊಂದು ...ನ್ನತ್ತಿ ಬಂತು. ಆಕೆ ಇತ್ತೀಚೆಗಷ್ಟೇ ತ್ಯಾಗರಾಜನಗರದಿಂದ ...ಜಗೋಪಾಲನಗರಕ್ಕೆ ಮನೆ ಖಾಲಿ ಮಾಡಿಕೊಂಡು ಬಂದ ...ಂಟಿ ಮಹಿಳೆ. ಆಕೆಯ ಹಿನ್ನೆಲೆ, ಪೂರ್ವಾಪರ, ...ಜಗೋಪಾಲನಗರಕ್ಕೆ ಸ್ಥಳಾಂತರಗೊಂಡಿದ್ದರ ಕಾರಣ ...ಲ್ಲವೂ ನಿಗೂಢ. ಸುತ್ತಮುತ್ತಲ ಏರಿಯಾದಲ್ಲಿ ...ಟರಾಜ್‌ಗಿದ್ದ ಜನಪ್ರಿಯತೆ, ಪ್ರಭಾವ ಕಂಡೇ ಆರು ತಿಂಗಳ ...ಂದೆ ಆತನನ್ನು ಭೇಟಿ ಮಾಡಿ ತನಗೆ ರೌಡಿಯೊಬ್ಬ ...ಟ ಕೊಡುತ್ತಿದ್ದಾನೆ ಕಾಪಾಡಿ ಎಂದು ಕಣ್ಣೀರಿಟ್ಟಿದ್ದಾಳೆ. ...ರವನು? ಕೊಡು ಆತನ ನಂಬರ್ ಎಂದಿದ್ದೇ ನಟರಾಜ್ ...ತನಿಗೆ ಫೋನಾಯಿಸಿ ಯಾಕಯ್ಯಾ ಹೆಣ್ಣು ಮಕ್ಕಳಿಗೆ ...ಸೆ ಕೊಡ್ತೀಯಾ ಎಂದು ಗದರಿದ್ದಾನೆ.

ಆದರೆ ತಾನು ಗದರಿದ್ದು ತ್ಯಾಗರಾಜನಗರದ ...ಟೋರಿಯಸ್ ರೌಡಿ ಶೀಟರ್ ಆನಂದನಿಗೆ ಎಂಬುದು ...ಗೊತ್ತಾಗುವ ಹೊತ್ತಿಗೆ ಕಾಲ ಮಿಂಚಿತ್ತು. ಈಗಾಗಲೇ ...ಲೆ ಕೇಸಲ್ಲಿ ಜೈಲು ಸೇರಿದ್ದ ಆನಂದ ಜೈಲಿಂದಲೇ ...ಟರಾಜ್‌ಗೆ ಧಮಕಿ ಹಾಕಿದ್ದ. ಆದರ ವಿರುದ್ಧ ನಟರಾಜ್ ...ಜಗೋಪಾಲನಗರ ಪೊಲೀಸ್ ಠಾಣೆಗೆ ಆನಂದನ ವಿರುದ್ಧ ...ಂದಲ್ಲ ಎರಡು ಬಾರಿ ದೂರು ಕೊಟ್ಟ. ಆದರೆ ಕೊಟ್ಟ ...ರು ಅದೇ ಪೊಲೀಸ್ ಠಾಣೆಯಲ್ಲಿದ್ದ ಬಾರ್ ಮಾಲೀಕರ ...ಬಂಟರ ಮೂಲಕ ಬಜೆಪಿ ಪಾತಕಿಗಳ ಕಿವಿ ಮುಟ್ಟಿ ...ನೆಗಡು ತನಗೇ ಮುಳುವಾಗಬಹುದೆಂಬ ಲೆಕ್ಕಾಚಾರ ...ಗೇ ನಟರಾಜ್‌ಗಿಲ್ಲತ್ತು. (ಬಾಕ್ಸ್ ನೋಡಿ)

ನತದೃಷ್ಟ ಹೆಂಗಸು, ರೌಡಿಯಿಂದ ಕಾಪಾಡಲು ...ಂದ ನಟರಾಜ್ ಕಾಲಿಗೆ ಬಾರ್ ವಿರುದ್ಧದ ಹೋರಾಟದ ...ಟದಲ್ಲಿಯೂ ಸೇರಿಕೊಂಡು ಸಾಥಾಗಿ ಪರಿಣಮಿಸಿದೆ. ...ಕಿಗಳ ಕಾಲಿಗಳು, ಕಾಲಿಕೆ ಎರಿಕ್ಸ್‌ನು, ನಲೀನು.

ರಾ. ಸೋಮನಾಥ್

ಪಾಯ್ಸನ್ ರಾಮನೇ ಭವಾನಿಯನ್ನು ಕೊಂದ



ಕಡಬಗೆರೆಯ ಡಾನ್ ಪಾಯ್ಸನ್ ರಾಮ ಇದ್ದಕ್ಕಿದ್ದಂತೆ ಪೊಲೀಸರಿಗೆ ಸರೆಂಡರಾದನೆಂದರೆ ಅದಕ್ಕೆ ಒಂದಲ್ಲ ಎರಡಲ್ಲ ನೂರಾರು ಅರ್ಥಗಳಿರುತ್ತವೆ. ಹಿಂದೆಯಾವತ್ತೋ ಮಾಡಿದ ಕ್ರೈಮಿಗೆ ಕೋರ್ಟಿಗೆ ಬಾರದೇ ಬಾಡಿ ವಾರಂಟಿನ ಮೇಲೆ ಇದ್ದಕ್ಕಿದ್ದಂತೆ ರಾಮ ಸರೆಂಡರಾಗಿ ಸದ್ದಿಲ್ಲದೆ ಜೈಲು ಸೇರಿಕೊಂಡನೆಂದರೆ ಅದರ ಮರುದಿನಕ್ಕೇ ಹೆಣ ಬೀಳುತ್ತದೆ. 2008ರ ಜುಲೈ 21ರಂದು ರಾಮನಗರದ ಬಿಡದಿ ಸಮೀಪ ಮದ್ಯಪಾನ ವಿರೋಧಿ ಹೋರಾಟಗಾರ ಎ.ಟಿ. ಬಾಬುರನ್ನು ತನ್ನ ಬಲಗೈ ಬಂಟ ಭವಾನಿಯ ಹಂತಕ ಪಡೆ ಛೂಬಿಟ್ಟು ಬರ್ಬರವಾಗಿ ಕೊಲ್ಲಿಸಿದ ರಾಮ ಅದರ ಹಿಂದಿನ ದಿನವೇ ಪೊಲೀಸರಿಗೆ ಶರಣಾಗಿ ರಾಮನಗರ ಜೈಲು ಸೇರಿಕೊಂಡಿದ್ದ.

ಈಗ ಭವಾನಿಯ ಸರದಿ. ಮೊನ್ನೆ ಮಾರ್ಚ್ 1ರ ರಾತ್ರಿ ತನ್ನ ಕಡಬಗೆರೆಯ ಮನೆಯೆದುರೇ ಕೊಲೆಯಾಗಿದ್ದಾನೆ ಕಿಲ್ಲರ್ ಭವಾನಿ. ಆವತ್ತು ಧಣಿ ಪಾಯ್ಸನ್ ರಾಮನಿಗಾಗಿ ಯಾವ ಭವಾನಿ ಜನಪರ ಹೋರಾಟಗಾರ ಎ.ಟಿ. ಬಾಬುರನ್ನು ನಡುರಸ್ತೆಯಲ್ಲಿ ಕತ್ತರಿಸಿ ಕೊಂದನೋ ಈಗ ಅದೇ ಭವಾನಿಯನ್ನು ರಾಮನ ಗ್ಯಾಂಗ್ ರುಂಡ ಚೆಂಡಾಡಿದೆ. ಅಷ್ಟೇ ಸಹಜವೆಂಬಂತೆ ಅದರ ಹಿಂದಿನ ದಿನವೇ ಪೊಲೀಸರಿಗೆ ಸರೆಂಡರಾಗಿ ರಾಮನಗರ ಜೈಲು ಹೊಕ್ಕಿ ಕೂತಿದ್ದಾನೆ ಕಡಬಗೆರೆ ರಾಮ!

ಪೊಲೀಸ್ ಪರಿಭಾಷೆಯಲ್ಲಿ ಇದನ್ನು modus operandi ಅಂದರೆ 'ಅಪರಾಧದ ಚಾಳಿ' ಎನ್ನುತ್ತಾರೆ. ಕಡಬಗೆರೆ ರಾಮನ ಬಲಗೈ ಬಂಟನೆಂದೇ ಭಯಾನಕ ಕುಖ್ಯಾತಿಗೆ ಬಂದವನು ಭವಾನಿ ಅಲಿಯಾಸ್ ಮಂಜುನಾಥ. ನೆಲಮಂಗಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 2005 ರಿಂದ 2008ರವರೆಗೆ ಬರೋಬ್ಬರಿ ಐದು ಕೊಲೆ ಯತ್ನಗಳು, ಮಾದನಾಯಕನಹಳ್ಳಿ ಪೊಲೀಸ್ ಠಾಣೆ ಲಿಮಿಟ್ಟಿನಲ್ಲಿ ಅರ್ಧ ಡಜನ್ ಕ್ರೈಮುಗಳು ಮತ್ತೊಂದು ಕೊಲೆ, ಬಿಡದಿ ಪೊಲೀಸ್ ಠಾಣೆಯಲ್ಲಿ ಹೋರಾಟಗಾರ ಎ.ಟಿ. ಬಾಬು ಹತ್ಯೆ, ತುಮಕೂರು ವ್ಯಾಪ್ತಿಯಲ್ಲಿ ರಾಬರಿ ಡಕಾಯಿತಿ ಹೀಗೆ ಭವಾನಿ ಎಂಬ ಹೆಸರಿಗಿದ್ದ ಭೀತಿಯೇ ಅಂಥಾದ್ದು.

ವಿಕಾರ ವದನ, ದೈತ್ಯ ಕಾಯ, ಕಗ್ಗೆ ದಪ್ಪಗೆ ಎತ್ತರಕ್ಕಿದ್ದ ಭವಾನಿ ಅಕ್ಷರಶಃ ರಕ್ಕಸನೆ. ಪಾಯ್ಸನ್ ರಾಮನ ಊರಾದ ಕಡಬಗೆರೆ ಈತನಿಗೂ ಹುಟ್ಟೂರು. ಈತನ ತಂದೆ ಹನುಮಂತಪ್ಪ ಇಟ್ಟಿಗೆ ಗೂಡಿಟ್ಟಿದ್ದ ತಾಯಿ ರಂಗಮ್ಮನ ಮೂರು ಗಂಡು, ಎರಡು ಹೆಣ್ಣುಮಕ್ಕಳ ಪೈಕಿ ಈತನೇ ಕೊನೆಯವನು. ತಂದೆಯ ಇಟ್ಟಿಗೆ ಗೂಡಿನಿಂದ ಟ್ರಾಕ್ಟರಿನಲ್ಲಿ ಇಟ್ಟಿಗೆ ಹೊಡಕೊಂಡಿದ್ದ ಭವಾನಿ ಊರ ಪಟೇಲರ ಮಗನಾದ ರಾಮನ ಜೊತೆ ಬಿದ್ದ.

ಬೆಂಗಳೂರು ಬೆಳೆದಂತೆಲ್ಲ ಮಾಗಡಿ ರಸ್ತೆಗುಂಟ ಸುಂಕದಕಟ್ಟೆ ದಾಟಿ ತಾವರೆಕೆರೆವರೆಗೂ ವಿಸ್ತರಿಸಿದ ರಿಯಲ್ ಎಸ್ಟೇಟ್ ಚಟುವಟಿಕೆಗಳಿಂದಾಗಿ ಆ ಸುತ್ತಮುತ್ತಲ ಹಳ್ಳಿಗಳ ರಾಜಕೀಯ, ಸಂಸ್ಕೃತಿ, ಆರ್ಥಿಕತೆಗಳು ಬದಲಾದಂತೆ ಮನುಷ್ಯ ಸಂಬಂಧಗಳೂ ಬದಲಾದವು. ತಮ್ಮ ರಾಮನನ್ನು ಮುಗಿಸಲು ಅಣ್ಣ ಕೇಕೆಯೇ ಗ್ಯಾಂಗ್‌ವಾರ್‌ಗಿಳಿದರೆ ಯಾವ ರಕ್ತ ಸಂಬಂಧವೂ ಇಲ್ಲದ ಭವಾನಿ ರಾಮನ ಪರ ನಿಂತು ಸಾಲುಸಾಲು ಹೆಣ ಕೆಡವಿದ. ಧಣಿ ಗೋಪಾಲಯ್ಯನನ್ನು ಮುಗಿಸಲು ಬಂಟ ಮಚ್ಚೇ ಆಯುಧ ಹಿಡಿದಂತೆ ಫೀಲ್ಡು ಕಲಿಸಿಕೊಟ್ಟ. ಮಚ್ಚನನ್ನೇ ರಾಮ ಕೊಂದು ಮುಗಿಸಿದ್ದ ರಿಯಲ್ ಎಸ್ಟೇಟ್ ದುಡ್ಡು ಈ ಭಾಗದ ಕನ್ನಡಿಗರ ತಲೆಮಾರೊಂದನ್ನೇ ಸರ್ವನಾಶಕ್ಕೆ ಕೊಂಡೊಯ್ದಿತ್ತು.

ಮಚ್ಚನ ದಿಢೀರ್ ಬೆಳವಣಿಗೆಯಿಂದಾಗಿ ಕಾಮಾಕ್ಷಿಪಾಳ್ಯದ ಭೂಗತ ಚಟುವಟಿಕೆಗಳಲ್ಲೂ ಗಮನಾರ್ಹ ಬದಲಾವಣೆಗಳಾದವು. ಪರಸ್ಪರ ಕತ್ತಿ ಮಸೆಯುತ್ತಿದ್ದ ಕಡಬಗೆರೆ ರಾಮ ಮತ್ತು ಗೋಪಾಲಯ್ಯರ ಪಡೆಗಳು ಒಂದಾದವು. ಜೇಡರಹಳ್ಳಿ ಕೃಷ್ಣಪ್ಪ ಭೂಗತ ಸಹವಾಸಕ್ಕೇ ವಿದಾಯ ಹೇಳಿ ರಾಜಕೀಯಕ್ಕೆ ಅಡಿಯಿಟ್ಟರೆ ಜೆಕೆ ವಿರುದ್ಧ ಕತ್ತಿ ಮಸೆಯುತ್ತಿದ್ದ ಮುಲಾಮನ ಪಡೆ ಮಚ್ಚನ ದುಶ್ಮನಿಗೆ ಬಿದ್ದು ಪಾಯ್ಸನ್ ರಾಮನ ಜೊತೆ ಕೈಜೋಡಿಸಿತು. ಮಚ್ಚನ ಹತ್ಯೆಯ ವಿರುದ್ಧ ಪ್ರತೀಕಾರಕ್ಕೆ ನಿಂತ ಕೋತಿ ರಾಮ, ಬೈಚಕುಪ್ಪೆ ಜಾನಿ, ಮಾರೇನಹಳ್ಳಿ ಜಗ್ಗ ಪೆದ್ದ ಗುಂಡರಿಗೆ ಕೊರಂಗು-ಸುನೀಲರ ಆಸರೆಯಾದರೆ ಕಾಲಕ್ರಮೇಣ ಅವರವರ ನಡುವೆಯೇ ಹೊಂದಾಣಿಕೆ ಕುಸಿಯಿತು.

ಇದೆಲ್ಲದರ ಫಲವೆಂಬಂತೆ ನೆಲಮಂಗಲದ ಗ್ಯಾಂಗ್‌ವಾರ್ ಭುಗಿಲೆದ್ದಿತು. ಬಿನ್ನಮಂಗಲ ಕೃಷ್ಣಪ್ಪನನ್ನು ಚಿಕ್ಕನಗೆರೆ ಸೀನನ ಗ್ಯಾಂಗ್ ಮುಗಿಸಿದರೆ ಅದರ ಕಡುವೈರಿ ಚಿಕ್ಕನಗೆರೆ ಶಂಕ್ರನ ಪಡೆ ಕಡಬಗೆರೆ ರಾಮನ ಪಾದಕ್ಕೆರಗಿತು. ಇಷ್ಟೆಲ್ಲ ಆಗುವವರೆಗೂ ಭವಾನಿ ರಾಮನ ಜೊತೆಗೇ ಇದ್ದ. ಇಲ್ಲಿಗೆ ಮೂರು ವರ್ಷದ ಹಿಂದೆ ರಾಮನ ಆಣತಿ ಮೇರೆಗೆ ತುಮಕೂರಿನಲ್ಲಿ ಯಾರನ್ನೋ ಕಿಡ್ನಾಪ್ ಮಾಡಿ ಜೈಲು ಪಾಲಾಗಿದ್ದೇ ಭವಾನಿಯ ಕೊನೆಯ ಮತ್ತು ಲೇಟೆಸ್ಟ್ ಅಪರಾಧವಾಗಿತ್ತು.

ಹಾಗೇ ಕಿಡ್ನಾಪ್ ಕೇಸಿಗೆ ಸಿಲುಕಿ ತುಮಕೂರು ಜೈಲು ಪಾಲಾದ ಭವಾನಿ ಮತ್ತಾತನ ಐವರು ಸಹಚರರನ್ನು ಪ್ರತ್ಯೇಕ ಸೆಲ್ಲಿನಲ್ಲೇ ಕೂಡಿ ಹಾಕಲಾಗಿತ್ತು. ಆ ಹೊತ್ತಿಗೆ ತುಮಕೂರು ಜೈಲನ್ನು ಆಳುತ್ತಿದ್ದದ್ದು ಮಚ್ಚನ ಉತ್ತರಾಧಿಕಾರಿ ಕೋತಿ ರಾಮ. ಯದುಗಿರಿ ಬಲರಾಮ, ಕಳ್ಳಾ ಜಗ್ಗ ಮೂಡಲಪಾಳ್ಯದ ಆನಂದ, ಗೊಲ್ಲರಹಟ್ಟಿ ರಾಜ ಮುಂತಾದವರೊಂದಿಗೆ ತುಮಕೂರು ಜೈಲಿನಲ್ಲಿದ್ದ ಕೋತಿರಾಮನ ಪಡೆಗೆ ಮಚ್ಚನ ಹಂತಕನಾದ ರಾಮನ ಬಂಟ ಭವಾನಿಯೇ ಸಿಕ್ಕನೆಂದರೆ ಏನಾಗಬೇಡ?

ಸರಿಸುಮಾರು ಐವತ್ತು ಮಂದಿ ಕೈದಿಗಳಿದ್ದ ಕೋತಿರಾಮನ ಗ್ಯಾಂಗ್ ಬೆಳ್ಳಂಬೆಳಗ್ಗೆಯೇ ಭವಾನಿಯಿದ್ದ ಸೆಲ್ಲಿಗೆ ನುಗ್ಗಿತು.



ಅಡುಗೆ ಸೌಟುಗಳು, ತರಕಾರಿ ಚಾಕು, ಹಿಟ್ಟಿನ ದೊಣ್ಣೆಯೆನ್ನದೆ ಕೈಗೆ ಸಿಕ್ಕಿದ್ದನ್ನೆಲ್ಲಾ ಆಯುಧ ಮಾಡಿಕೊಂಡ ಕೋತಿರಾಮನ ಬಂಟರು ಸೆಲ್ಲಲ್ಲಿ ಮಲಗಿದ್ದ ಭವಾನಿಯನ್ನು ಹಿಗ್ಗಾಮುಗ್ಗಾ ಥಳಿಸಿಬಿಟ್ಟರು. ಮುಖ ಮೂತಿಯೆನ್ನದೆ ಭವಾನಿಯನ್ನು ಬಡಿದ ಫಲವಾಗಿ ಆತನ ಗುರುತೇ ಸಿಗದಂತೆ ಗಾಯಗೊಂಡ ಭವಾನಿ ಆಸ್ಪತ್ರೆ ದಾಖಲಾಗಿ ಪ್ರಾಣ ಉಳಿಸಿಕೊಂಡ. ಆತನ ಜೊತೆಗಿದ್ದವರನ್ನೂ ಆಸ್ಪತ್ರೆಗೆ ದಾಖಲಿಸಿದ ಜೈಲಾಧಿಕಾರಿಗಳು ಇಡೀ ಕೋತಿರಾಮನ ಪಡೆಯನ್ನು ಗುಲ್ಬರ್ಗಾ ಜೈಲಿಗೆ ಕಮಾನೆತ್ತಿದ್ದರು.

ಒದೆ ತಿಂದು ಆಸ್ಪತ್ರೆ ಸೇರಿದ ಭವಾನಿ ಚೇತರಿಸಿಕೊಳ್ಳಲು ಆರು ತಿಂಗಳೇ ಬೇಕಾಯಿತು. ಬಹುಶಃ ಅದು ಭವಾನಿಯ ಮೇಲಾದ ಮೊದಲ ಹತ್ಯಾಯತ್ನ. ಅವರಿವರನ್ನು ಕೊಂದಿದ್ದನೇ ಹೊರತು ಈ ರೀತಿ ಒದೆ ತಿಂದಿರಲಿಲ್ಲ. ದಿನಕಳೆದಂತೆ ಮಾಗಡಿ ರಸ್ತೆಯ ಭೂಗತ ಸಮೀಕರಣವೇ ಬದಲಾಯಿತು. ಮಚ್ಚ ಮಾಡಿಟ್ಟಿದ್ದ ಕೇಬಲ್ ನೆಟ್‌ವರ್ಕ್ ಮತ್ತದರ ಸಮೃದ್ಧ ಉತ್ಪತ್ತಿಯಿಂದಾಗಿ ಕೋತಿರಾಮನೇ ಬದಲಾಗಿಬಿಟ್ಟಿದ್ದ. ಮಚ್ಚನ ಹತ್ಯೆಯ ಸೇಡಿಗಿಂತಲೂ ಆತ ಪ್ರೀತಿಸಿದ್ದ ಯುವತಿಯನ್ನು ಮದುವೆಯಾಗುವುದೇ ಕೋತಿರಾಮನ ಆದ್ಯತೆಯಾಗಿತ್ತು. ಇದ್ದೊಬ್ಬ ಪೆದ್ದಗುಂಡನನ್ನು 'ಸುಪಾರಿ ಎನ್‌ಕೌಂಟರ್' ಮೂಲಕ ಮುಗಿಸಲಾಗಿತ್ತು.

ಕೋತಿರಾಮನ ಜೊತೆಗಿದ್ದ ಬೈಚಕುಪ್ಪೆ ಜಾನಿ ಜೈಲಿಂದ ಬಂದವನೇ ಗೋಪಾಲಯ್ಯಗೆ ಶರಣಾಗಿ ಕಡಬಗೆರೆ ಗ್ಯಾಂಗಿನ ಜೊತೆ ದೋಸ್ತಿ ಹಾತ್ ಮಿಲಾಯಿಸಿದ್ದ ಜಾನಿಯೇ ನಿಂತು ಕೋತಿರಾಮನಿಗೂ ಕಡಬಗೆರೆ ಪಡೆಗೂ ರಾಜಿ ಮಾಡಿಸಿದ. ಮುಲಾಮನ ಬಂಟರಾದ ರಾಮಲಕ್ಷ್ಮಣ ಮತ್ತು ಅವರ ನಿರ್ನಾಮಕ್ಕೆ ಪಣತೊಟ್ಟ ಕೋತಿರಾಮ ಒಂದೇ ಟೇಬಲ್ಲಿನಲ್ಲಿ ಕೂತು ಬಿರಿಯಾನಿ ತಿಂದರು. ಕೋತಿರಾಮನ ಮದುವೆ ಮತ್ತು ಗೃಹಪ್ರವೇಶಗಳು ಒಟ್ಟೊಟ್ಟಿಗೇ ನಡೆದು ಅದಕ್ಕೆ ಮುಲಾಮ, ರಾಮಲಕ್ಷ್ಮಣ, ಪಾಯ್ಸನ್ ರಾಮ, ಕಾಮಾಕ್ಷಿಪಾಳ್ಯದ ಧರಣಿ, ಜಾನಿ, ಜಗ್ಗ ಎಲ್ಲರೂ ಹೂವಿನ ಬಕ್ಕೆ ಕೊಟ್ಟು ಶುಭ ಕೋರಿಬಂದರು.

ಅಲ್ಲಿಗೆ ಕಾಮಾಕ್ಷಿಪಾಳ್ಯ, ಕಡಬಗೆರೆ, ಮಾರೇನಹಳ್ಳಿ, ತಿಮ್ಮೇನಹಳ್ಳಿ, ಗೊಲ್ಲರಹಟ್ಟಿಗಳ ಸುದೀರ್ಘ ಗ್ಯಾಂಗ್ ವಾರೊಂದು ಮುಗಿದಂತಾಗಿತ್ತು. ಆದರೆ ಸಮಸ್ಯೆ ಶುರುವಾಗಿದ್ದು ಪಾಯ್ಸನ್ ರಾಮನ ಬಂಟ ಭವಾನಿಗೆ ಮತ್ತು ಕೋತಿರಾಮನ ಬಲಗೈ, ಎಡಗೈಗಳಾಗಿದ್ದ ಕಳ್ಳಾಜಗ್ಗ ಮತ್ತು ಆನಂದರ ಪಡೆಗೆ. ಭುಜಕ್ಕೆ ಭುಜ ಕೊಟ್ಟ ಕೋತಿರಾಮನನ್ನು ಕಾಪಾಡಿದ ಕಳ್ಳಾ ಜಗ್ಗ ಆನಂದ ಅಕ್ಷರಶಃ ಬೀದಿಗೆ ಬಿದ್ದರೆ ಧಣಿಯ ಕಾರಣಕ್ಕೆ ಕೋತಿರಾಮನ ಪಡೆಯಿಂದ ಒದೆ ತಿಂದಿದ್ದ ಭವಾನಿಗಿದು ಅಸಾಧ್ಯ ಮುಖಭಂಗವಾಗಿತ್ತು.

ತನಗೊಂದು ಮಾತು ಕೂಡ ಹೇಳದೆ ಕೋತಿರಾಮನ ಜೊತೆ ಕೈಜೋಡಿಸಿದ ಪಾಯ್ಸನ್ ರಾಮನ ವಿರುದ್ಧ ಭವಾನಿ ಒಳಗೊಳಗೇ ಕುದ್ದು ಹೋದ. ಕಾಲಕ್ರಮೇಣ ಕಡಬಗೆರೆ ರಾಮನನ್ನು ಮಾತಾಡಿಸುವುದನ್ನೇ ಬಿಟ್ಟ. ರಾಮ ಹೇಳಿಕಳಿಸಿದರೆ 'ನಾನು ಬರಲ್ಲ ಅಂತ ಹೇಳು' ಎಂದು ಮುಖ ಸಿಂಡರಿಸಿಕೊಂಡು ಧಿಕ್ಕರಿಸಿದ. ಅಲ್ಲಿಗೆ ಭವಾನಿ ಮತ್ತು ರಾಮನ ಸಂಬಂಧವೇ ಹಳಸಿತ್ತು. ಭವಾನಿ ಜಾಗಕ್ಕೆ ಕಡಬಗೆರೆ ರಾಮನ ಆಸ್ಥಾನಕ್ಕೆ ಎಂಟ್ರಿ ಕೊಟ್ಟವನು ಬಚ್ಚನ್!

ಈ ಮಧ್ಯೆ ಯಲಹಂಕ ಶಾಸಕ ವಿಶ್ವನಾಥ್ ಮತ್ತು ಕಡಬಗೆರೆ ತಂಡಗಳ ನಡುವೆ ಭಿನ್ನಾಭಿಪ್ರಾಯ ಭುಗಿಲೆದ್ದು ರಾಮನ ಅಣ್ಣ ಶ್ರೀನಿವಾಸ್ ಕಾಂಗ್ರೆಸ್ ಸೇರಿಕೊಂಡು ವೀರಪ್ಪ ಮೊಯ್ಲಿ, ಕೃಷ್ಣ ಭೈರೇಗೌಡನ ಪಾಳಯದಲ್ಲಿ ಕಾಣಿಸಿಕೊಂಡರು. ಹಾಗಂತ ಯಲಹಂಕದ ವಿಶ್ವನಾಥ್ ಕೈಕಟ್ಟಿ ಕೂರಲಿಲ್ಲ. ವಿಶ್ವನಾಥ್ ಬಲಗೈ ಬಂಟ ಬುಲೆಟ್ ಸತೀಶನೆಂದರೆ ಕಮ್ಮಿ ಆಸಾಮಿಯೇನಲ್ಲ. ಬುಲೆಟ್ ರವಿಯನ್ನು ಸದ್ದಿಲ್ಲದೇ ಸುನೀಲನ ಗ್ಯಾಂಗ್ ಬಿಟ್ಟು ಮುಗಿಸಿದ್ದು ವಿಶ್ವನಾಥ್‌ಗೆ ಕಾಟ ಕೊಡುತ್ತಾನೆಂದು ಬಿಜೆಪಿ ಕಾರ್ಯಕರ್ತ ವಜ್ರೇಶ್‌ನನ್ನು ಕೊಲ್ಲಿಸಿದ್ದು ಸತೀಶನೇ ಎಂಬ ಬಗ್ಗೆ ಯಾರಿಗೂ ಅನುಮಾನಗಳಿಲ್ಲ. ಈಗ ವಿಶ್ವನಾಥ್ ಇದೇ ಸತೀಶನ ಮೂಲಕವೇ ಕಡಬಗೆರೆ ಶ್ರೀನಿವಾಸ್ ಹತ್ಯೆಗೆ ಸುಪಾರಿ ಕೊಟ್ಟ ಸುದ್ದಿಯೂ ಹೊಗೆಯಾಡುತ್ತಿತ್ತು.

ಒಡಹುಟ್ಟಿದ ಅಣ್ಣನ ಬುಡಕ್ಕೇ ಬಂದಮೇಲೆ ಪಾಯ್ಸನ್ ರಾಮನನ್ನು ಹಿಡಿಯುವವರುಂಟೆ?

ಯಲಹಂಕ ಶಾಸಕ ವಿಶ್ವನಾಥ್ ಬಂಟ ಬುಲೆಟ್ ಸತೀಶ ಸದ್ದಿಲ್ಲದೆ ಭವಾನಿಯನ್ನು ಸಂಪರ್ಕಿಸಿದ್ದನೆ? ಅಥವಾ ಜೊತೆಗಿದ್ದೇ ತಿರುಗಿಬಿದ್ದ ಬಂಟನನ್ನು ನಿವಾರಿಸಿಕೊಳ್ಳುವುದು ರಾಮನ ರಣತಂತ್ರವಾಗಿತ್ತೆ? ಬಲವಂತ್ಯಾರು? ಮಾರ್ಚ್ 1ರ ಸಂಜೆ ತಾನು ಲೇಟಾಗಿ ಬರುತ್ತೇನೆಂದು ತಾಯಿಗೆ ಫೋನ್ ಮಾಡಿ ಭವಾನಿ ತಿಳಿಸಿದ್ದ ರಾತ್ರಿ 8 ರ ಹೊತ್ತಿಗೆ ಕಡಬಗೆರೆಯ ಮುತ್ತುರಾಯಸ್ವಾಮಿ ದೇವಾಲಯದ ಹಿಂಭಾಗದಲ್ಲಿ ಹೆಣವಾಗಿ ಬಿದ್ದಿದ್ದ. ಕೊಂದವರು ರಾಮನ ಬಲಗೈ ಬಂಟ ಬಚ್ಚನ್ ಮತ್ತು ಆತನ ಸಹಚರರಾದ ಸತೀಶ, ವೆಂಕಟೇಶ್ ಇತ್ಯಾದಿಗಳಂತೆ!

ಮೈತುಂಬಾ ಮಚ್ಚೇಟು. ತಲೆ ಹೀಡು ಹೀಡು. ಯಾವ ಜನಪರ ಹೋರಾಟಗಾರ ಎ.ಟಿ. ಬಾಬುರನ್ನು ಭವಾನಿ ಪೈಶಾಚಿಕವಾಗಿ ಕತ್ತರಿಸಿ ಕೊಂದಿದ್ದನೋ ಅದಕ್ಕಿಂತ ಅಮಾನುಷವಾಗಿ ತಾನೇ ಕೊಲೆಯಾಗಿ ಹೋಗಿದ್ದಾನೆ. [illegible] ಉಳಿಯುವುದುಂಟೆ?

■ ರಾ. ಸೋಮನಾಥ್

ತಾಯಿ ರಂಗಮ್ಮ ಎದೆಬಡಿದದ್ದು ಗೋಳಾಡಿದ್ದು!

'ಬ್ಯಾಡ ಕಣೋ ನಮಗೆ ಈ ಊರಿನ ಸಾವಾಸಾ ಬೇಡ' ಎಂದು ಹಣೆ ಚಚ್ಚಿಕೊಂಡು ಗೋಗರೆದೆ. ಅವನೂ ಒಪ್ಪಿಕೊಂಡಿದ್ದ, 'ಹೌದಮ್ಮಾ ನಮಗಿನ್ನು ಈ ಊರಿನ ಉಸಾಬರಿ ಬೇಡ. ಇಲ್ಲೇ ಇದ್ದರೆ ರಾಮಣ್ಣನ ಕಡೆಯವರೇ ನನ್ನನ್ನು ಮುಗಿಸಿಬಿಡ್ತಾರೆ' ಎಂದು ಹೇಳಿದ್ದ, ಎಲ್ಲಾದರೂ ಸಿಟಿಯಲ್ಲಿ ಮನೆ ಮಾಡಿಕೊಂಡು ಇರೋಣ, ಯಾರಿಗೂ ಗೊತ್ತಾಗದ ಹಾಗೆ ಮನೆ ಮಾಡೋಣ ಎಂದೇ ಹೇಳಿದ್ದ, ಇನ್ನೊಂದು ತಿಂಗಳಲ್ಲಿ ಊರು ಬಿಡುವುದೂ ಆಗಿತ್ತು, ಆದರೆ ನಿನ್ನೆಯೇ ಅವನನ್ನು ರಾಮಣ್ಣನ ಹುಡುಗರು ಮುಗಿಸಿಬಿಟ್ಟರು......!

ಇದು ಭವಾನಿಯ ತಾಯಿ ರಂಗಮ್ಮ ಎದೆಬಡಿದುಕೊಂಡು ಬೊಬ್ಬಿಟ್ಟ ರೀತಿ. ಮಗನ ಮದುವೆಯೂ ನಿಶ್ಚಯವಾಗಿತ್ತಂತೆ ಹೆಣ್ಣು ನೋಡುವ ಕಾರ್ಯಕ್ರಮವೂ ಇತ್ತಂತೆ. ತಿಂಗಳ ಹಿಂದೆಯೇ ರಾಮನ ಬಲಗೈ ಬಂಟ ಬಚ್ಚನ್ ಮತ್ತು [illegible] ಮನೆಗೆ ನುಗ್ಗಿದ್ದನಂತೆ. ಆಗ ಬಚಾವಾದವನಿಗೆ ಈಗ ಬಚಾವಾಗಲು ಸಾಧ್ಯವಾಗದೇ ಹೋಯಿತು ಎನ್ನುತ್ತಾಳೆ [illegible] ತಾಯಿ ರಂಗಮ್ಮ!



ಆದಿಲ್‌ಶಾಹಿಗಳ ವಿಜಾಪುರ-ಭಾವೈಕ್ಯದ ಆಗರ

ಲಂಕೇಶ್ 80
ಇಟ್ಟಿಗೆ ಪವಿತ್ರವಲ್ಲ
ಜೀವ ಪವಿತ್ರ



ಬಾಬರ್ 1526ರಲ್ಲಿ ಮೊಘಲ್ ಸಾಮ್ರಾಜ್ಯದ ಸ್ಥಾಪನೆ ಮಾಡಿದ. ಆತನ ಮೊಮ್ಮಗ ಅಕ್ಬರ್ 1556ರಲ್ಲಿ ಭಾರತದ ಚಕ್ರವರ್ತಿಯಾದ. ಉತ್ತರ ಭಾರತದಲ್ಲಿ ಮೊಘಲರು ಸಮ್ಮಿಶ್ರ ಸಂಸ್ಕೃತಿಯ ಸೃಷ್ಟಿಗೆ ಮಹತ್ವದ ಕಾಣಿಕೆ ನೀಡಿದ್ದಾರೆ ಎಂಬ ವಿಚಾರ ಇತಿಹಾಸ ಪ್ರಸಿದ್ಧವಾಗಿದೆ. ಆದರೆ ಬಾಬರ್ (1483 - 1530) ಬಾಲಕನಾಗಿದ್ದಾಗಲೇ ದಕ್ಷಿಣದ ವಿಜಾಪುರದಲ್ಲಿ ಸ್ಥಾಪನೆಯಾದ ಆದಿಲ್ ಶಾಹಿ ರಾಜಮನೆತನ, ತನ್ನ ಇನ್ನೂರು (1489-1686) ವರ್ಷಗಳ ಆಳ್ವಿಕೆಯಲ್ಲಿ ಸಮ್ಮಿಶ್ರ ಸಂಸ್ಕೃತಿಯ ತೊಟ್ಟಿಲಾಗಿ ಭಾರತೀಯ ಉಪಖಂಡದಲ್ಲೇ ವಿಶಿಷ್ಟ ಸ್ಥಾನ ಗಳಿಸಿತ್ತು. ಸಾಹಿತ್ಯ, ಕಲೆ, ಭಾಷೆ, ವಾಸ್ತುಶಿಲ್ಪ ಮತ್ತು ಆಡಳಿತದಲ್ಲಿ ಉತ್ಕರ್ಷ ಸಾಧಿಸುತ್ತ ವಿವಿಧ ಸಂಸ್ಕೃತಿಗಳು ಒಂದಾಗಿ ಬದುಕಬಲ್ಲವು ಎಂಬುದರ ಪ್ರಯೋಗ ವಿಜಾಪುರದಲ್ಲಾಯಿತು.

ಶರಣ ಸಂಸ್ಕೃತಿಯೊಂದಿಗೆ ಸೂಫಿ ಸಂಸ್ಕೃತಿ ಬೆರೆತು 'ಖಾದರಲಿಂಗನಿಗೆ ಸಾವಿರ ಸಲಾಂ' ಹೇಳುವ ವಿಜಾಪುರ ಮಂದಿ ಮಾನವೀಯ ಸಂಸ್ಕೃತಿಯ ವಕ್ತಾರರಾದರು. ವಿಜಾಪುರದ ಜನರಲ್ಲಿ ಇಂದಿಗೂ ಈ ಸಂಸ್ಕೃತಿಯ ಲಕ್ಷಣಗಳನ್ನು ಕಾಣುತ್ತೇವೆ. ವಿಜಾಪುರದ ಜನರು ಬರಿ ಪರಮತ ಸಹಿಷ್ಣುಗಳೆಂದರೆ ತಪ್ಪಾಗುವುದು. ಅವರು ಸಹಿಷ್ಣುತೆಗಿಂತಲೂ ಒಂದು ಹೆಜ್ಜೆ ಮುಂದಿದ್ದಾರೆ. ಸ್ವಧರ್ಮವನ್ನು ಪ್ರೀತಿಸುವ ಜೊತೆಗೇ ಪರಧರ್ಮವನ್ನು ಗೌರವಿಸುತ್ತಾರೆ. ಅಲ್ಲಿನ ಗಣಪತಿ ಉತ್ಸವ, ನಾಡಹಬ್ಬ ಮತ್ತು ಬಸವ ಜಯಂತಿಯಂಥ ಉತ್ಸವಗಳಲ್ಲಿ ಮುಸ್ಲಿಮರೂ ಮುಂದಾಳಾಗಿರುತ್ತಾರೆ. ಮೊಹರಂ, ಉರುಸ್ ಮುಂತಾದ ಸಂದರ್ಭಗಳಲ್ಲಿ ಹಿಂದೂಗಳೂ ಮುಂದಾಳುಗಳಾಗಿರುತ್ತಾರೆ. ಅಲ್ಲಿ ಗುಣಕ್ಕೆ ಮತ್ಸರವಿಲ್ಲ, ಅವರು ಕೆಟ್ಟದ್ದಕ್ಕೆ ಸೆಟೆದು ನಿಲ್ಲುತ್ತಾರೆ. ಒಳ್ಳೆಯದಕ್ಕೆ ತಲೆಬಾಗುತ್ತಾರೆ. ಅವರು ಸ್ವಾಭಿಮಾನಕ್ಕಾಗಿ ಎಲ್ಲ ತ್ಯಾಗಕ್ಕೂ ಸಿದ್ಧ ಆದರೆ ಪ್ರೀತಿಗೆ ಸೋಲುತ್ತಾರೆ. ಇಂಥ ಒಂದು ಜನಸಮುದಾಯ ರೂಪುಗೊಳ್ಳುವ ಹಿನ್ನೆಲೆಯಲ್ಲಿ ಆದಿಲ್ ಶಾಹಿ ರಾಜವಂಶದ ಪಾತ್ರವು ಪ್ರಮುಖವಾಗಿದೆ ಎಂಬುದಕ್ಕೆ ಇತಿಹಾಸ ಸಾಕ್ಷಿ ಇದೆ.

ಬಯಲುಸೀಮೆಯ ಸುಂದರ ನಗರ ವಿಜಾಪುರ ಓಯಸಿಸ್‌ನಂತೆ ಕಂಗೊಳಿಸುತ್ತ 'ದಕ್ಷಿಣದ ರಾಣಿ' ಎಂಬ ಹೊಗಳಿಕೆಗೆ ಪಾತ್ರವಾಯಿತು. ರಾಜರ, ರಾಣಿಯರ ಜಗತ್ಪ್ರಸಿದ್ಧ ಗೋರಿಗಳಿಂದ, ಅರಮನೆ, ಬೃಹತ್ ಮಸೀದಿ, ಬುರುಜು, ಕೋಟೆ ಕೊತ್ತಲಗಳಿಂದ, ಮನಮೋಹಕ ಅಗಸೆ ಬಾಗಿಲು, ಫಿರಂಗಿ, ಮಿನಾರುಗಳಿಂದ, ಉದ್ಯಾನಗಳಿಂದ ಮತ್ತು ರಾಜ್ಯದಲ್ಲೇ ಅತಿ ಹೆಚ್ಚಿನ ಐತಿಹಾಸಿಕ ಸ್ಮಾರಕಗಳಿಂದ ವಿಜಾಪುರದ ಗತವೈಭವ ಮನಸೂರೆಗೊಳ್ಳುವುದು.

ಯುಸೂಫ್ ಬಂದ ದಾರಿ

ಯುಸೂಫ್ ಆದಿಲ್ ಖಾನ್ ವಿಜಾಪುರದಲ್ಲಿ ಆದಿಲ್ ಶಾಹಿ ರಾಜವಂಶದ ಮೂಲಪುರುಷನಾದ ಬಗೆ ರೋಮಾಂಚನಕಾರಿಯಾಗಿದೆ. ಬುದ್ಧಿಮತ್ತೆ, ಭುಜಬಲ, ಸಂಯಮ, ಆತ್ಮವಿಶ್ವಾಸ ಮತ್ತು ಸತತ ಪ್ರಯತ್ನದಿಂದ ಮಾನವ ಎಲ್ಲ ಸಂಕಷ್ಟಗಳನ್ನೂ, ಅಡೆತಡೆಗಳನ್ನೂ ದಾಟಿ ಸಾಧನೆಯ ಉತ್ತುಂಗ ಶಿಖರವನ್ನೇರಬಹುದು ಎಂಬುದಕ್ಕೆ ಯುಸೂಫ್ ಆದಿಲ್ ಖಾನ್(ಶಹಾ)ನ ದಿಕ್ಕಿಲ್ಲದ ಬದುಕು ಮತ್ತು ಘನ ವ್ಯಕ್ತಿತ್ವ ಉದಾಹರಣೆಯಾಗಿದೆ.

ಬೈಜಂಟೈನ್ ಸಾಮ್ರಾಜ್ಯವು ಪೂರ್ವ ರೋಮನ್ ಸಾಮ್ರಾಜ್ಯವಾಯಿತು. ಇದರ ರಾಜಧಾನಿ ಬೈಜಂಟೈನ್‌ಗೆ 'ಕಾನ್‌ಸ್ಟಂಟಿನೋಪಲ್' ಎಂದು ಕರೆಯಲಾಯಿತು. ತುರುಕರು (ಟರ್ಕಿ) ಕಾನ್‌ಸ್ಟಂಟಿನೋಪಲ್ ವಶಪಡಿಸಿಕೊಂಡರು.

ಪಹಾಮೈಸರ್‌ಸ ಕಾನ್‌ಸ್ಟಂಟಿನೋಪಲ್‌ಗೆ ಈಗ ಇಸ್ತಾಂಬುಲ್ ಎಂದು ಹೆಸರು. ಟರ್ಕಿಯ ಈ ಬೃಹತ್ ನಗರ ಐರೋಪ್ಯ ಮತ್ತು ಏಷ್ಯಾ ದೇಶದ ಕೊಂಡಿಯಂತಿದೆ. ಕಪ್ಪುಸಮುದ್ರದ ದ್ವೀಪಕಲ್ಪವಿದು.

ಕಾನ್‌ಸ್ಟಂಟಿನೋಪಲ್ ಅನ್ನು ಆಳುತ್ತಿದ್ದ ಒಟ್ಟೊಮನ್ ರಾಜವಂಶದ ಆಘಾ ಮುರಾದ್ (1421-1451) ಯುಸೂಫ್‌ನ ತಂದೆ. ಆತನ ಹಿರಿಯ ಮಗ ಮಹಮೂದ್ ಪಟ್ಟವೇರಿದ. ಆಗ ಯುಸೂಫ್ (1443-1510) ನನ್ನು ಕೊಲೆ ಮಾಡುವ ಸಿದ್ಧತೆ ನಡೆಯಿತು. ರಾಜನ ಹಿರಿಯ ಮಗನಿಗೆ ಪಟ್ಟ ಕಟ್ಟಿ ಕಿರಿಯ ಮಗನನ್ನು ಕೊಲ್ಲುವುದರಿಂದ ಅಧಿಕಾರಕ್ಕಾಗಿ ಕಚ್ಚಾಟ ನಡೆಯದೆ ಆಳ್ವಿಕೆ ಸುಗಮವಾಗುವುದು ಎಂಬ ನಂಬಿಕೆಯಂತೆ ಬಾಲಕನಾದ ಯುಸೂಫ್‌ನ ಕೊಲೆಯಾಗಬೇಕಿತ್ತು. ಆದರೆ ಹಾಗಾಗದಂತೆ ಆತನ ತಾಯಿ ಉಪಾಯ ಹೂಡಿದಳು. ಖ್ವಾಜಾ ಇಮಾದುದ್ದೀನ್ ಎಂಬ ಪರ್ಷಿಯಾದ ವ್ಯಾಪಾರಿಯೊಬ್ಬ ಕಾನ್‌ಸ್ಟಂಟಿನೋಪಲ್‌ನಲ್ಲಿದ್ದ. ಧನಕನಕದ ರಾಶಿಯೊಂದಿಗೆ ಮಗುವನ್ನು ಪಾಲನೆ ಪೋಷಣೆ ಮಾಡಲು ಇಮಾದುದ್ದೀನ್‌ಗೆ ಕೊಟ್ಟಳು.

ಇಮಾದುದ್ದೀನ್ ಆ ಮಗುವನ್ನು ಇರಾನಿನ ಸಾವಾ ನಗರಕ್ಕೆ ಕರೆತಂದ. ರಾಜಕುಮಾರನಿಗೆ ಸಿಗಬೇಕಾದ ಎಲ್ಲ



ತರಬೇತಿ ಮತ್ತು ಶಿಕ್ಷಣ ನೀಡಿದ. ಯುಸೂಫ್‌ಗೆ 16 ವರ್ಷ ವಯಸ್ಸಾದಾಗ, ಆತನನ್ನು ನೋಡಿಕೊಳ್ಳುತ್ತಿದ್ದ ದಾದಿ ಬೇಜವಾಬ್ದಾರಿಯಿಂದಾಗಿ ಗುಟ್ಟನ್ನು ರಟ್ಟು ಮಾಡಿದಾಗ ಇರಾನಿನ ಇಸ್ಫಹಾನ್ ನಗರಕ್ಕೆ ಹೋದ. ನಂತರ ಯುಸೂಫ್ ಸಿರಾಜ್ ನಗರಕ್ಕೆ ಬಂದ. ಅಲ್ಲಿಂದ ಹಿಂದೂಸ್ತಾನಕ್ಕೆ ಹೊರಟ. 1461ರಲ್ಲಿ ರತ್ನಗಿರಿಯ ಪ್ರಸಿದ್ಧ ಧಾಬೋಲ್ ಬಂದರು ತಲುಪಿದಾಗ ಆತ 17 ವರ್ಷ ವಯಸ್ಸಿನ ಸುಶಿಕ್ಷಿತ, ಸುಂದರ ಯುವಕನಾಗಿದ್ದ. ನಯ, ನಾಜೂಕು ಮತ್ತು ಗಾಂಭೀರ್ಯದಿಂದಾಗಿ ನೋಡುವವರಿಗೆ ಆತನ ಬಗ್ಗೆ ಗೌರವ ಮೂಡುತ್ತಿತ್ತು, (ಎನ್ರಾನ್ ವಿದ್ಯುತ್ ಯೋಜನೆಯಿಂದ ಬೆಳಕಿಗೆ ಬಂದ ಮಹಾರಾಷ್ಟ್ರದ ಧಾಬೋಲ್ ಬಂದರು ಆಗ ಬಹಮನಿ ರಾಜ್ಯದ ಭಾಗವಾಗಿತ್ತು) ಅದೇ ಬಂದರಿನಲ್ಲಿ ಇಳಿದ ಇರಾನ್ ವ್ಯಾಪಾರಿಯೊಬ್ಬನ ಸ್ನೇಹವಾಯಿತು. ಆತ ಬೀದರ್‌ಗೆ ಹೊರಟಿದ್ದ ಜೊತೆಯಲ್ಲಿ ಬರಲು ಆಹ್ವಾನಿಸಿದ. ಹೀಗೆ ಯುಸೂಫ್ ಬಹಮನಿ ರಾಜ್ಯದ ರಾಜಧಾನಿ ಬೀದರ್‌ಗೆ ಬಂದ.

ನ್ಯಾಯವಂತ ಯುಸೂಫ್

ರಾಜಧಾನಿ ಬೀದರ್‌ನಲ್ಲಿ ಪ್ರತಿ ಶುಕ್ರವಾರ ಕುಸ್ತಿ ಸ್ಪರ್ಧೆ ಏರ್ಪಡಿಸುವ ಹವ್ಯಾಸವಿತ್ತು, ಯುವಕ ಯುಸೂಫ್ ಬಹಮನಿ ರಾಜ್ಯದ ಮುಖ್ಯ ಕುಸ್ತಿಪಟುವಿಗೇ ಆಹ್ವಾನ ನೀಡಿದ. ಶುಕ್ರವಾರದ ಸ್ಪರ್ಧೆಯಲ್ಲಿ ಶಕ್ತಿಶಾಲಿ ಯುಸೂಫ್ ತಂತ್ರ, ಪಟ್ಟು, ಪೇಚುಗಳೊಂದಿಗೆ ಎದುರಾಳಿಯನ್ನು ಸೋಲಿಸಿದ. ಆತನ ಸಾಮರ್ಥ್ಯವನ್ನು ಮೆಚ್ಚಿದ ಸುಲ್ತಾನ್ ಆತನನ್ನು ಅಂಗರಕ್ಷಕನಾಗಿ ನೇಮಿಸಿಕೊಂಡ. ಬಹಮನಿ ರಾಜ್ಯದ ಪ್ರಧಾನಿ ಮಹಮೂದ್ ಗವಾನ್‌ಗೆ ಯುಸೂಫ್ ಬಗ್ಗೆ ವಿಶೇಷ ಪ್ರೀತಿ ಇತ್ತು, ಯುಸೂಫ್‌ನನ್ನು ಬೆರಾರ್ ಪ್ರಾಂತಕ್ಕೆ ಅಧಿಕಾರಿಯಾಗಿ ಕಳುಹಿಸಲಾಯಿತು. ಆತ ಅಲ್ಲಿದ್ದಾಗ ಬಹಮನಿ ಸುಲ್ತಾನ್ ಆತನಿಗೆ 'ಆದಿಲ್ ಖಾನ್' ಎಂದು ಬಿರುದು ನೀಡಿದ್ದರಿಂದ ಆತ 'ಯುಸೂಫ್ ಆದಿಲ್ ಖಾನ್' (ನ್ಯಾಯವಂತ ಯುಸೂಫ್) ಎಂದು ಪ್ರಸಿದ್ಧನಾದ. ನಂತರ ಗವಾನ್ ಆತನನ್ನು ದೌಲತಾಬಾದ್ ರಾಜ್ಯಪಾಲನಾಗಿ ನೇಮಿಸಿದ. ಏತನ್ಮಧ್ಯೆ ಶ್ರೀಮಂತ ವರ್ಗದವರ ಷಡ್ಯಂತ್ರದಿಂದಾಗಿ ಬಹಮನಿ ಸುಲ್ತಾನ್ ಮೂರನೇ ಶಂಸುದ್ದೀನ್ ಮುಹಮ್ಮದ್ ಶಹಾ, ಮಹಾನ್ ಆಡಳಿತಗಾರ ಹಾಗೂ ಮೇಧಾವಿ ಮಹಮೂದ್ ಗವಾನ್‌ಗೆ 1481ರಲ್ಲಿ ಗಲ್ಲುಶಿಕ್ಷೆ ವಿಧಿಸಿದ.

ವಿಜಾಪುರ ಪ್ರಾಂತವನ್ನು ಮಹಮೂದ್ ಗವಾನ್‌ಗೆ ಜಹಗೀರು ನೀಡಲಾಗಿತ್ತು, ಆತನ ಸಾವಿನನಂತರ ಯುಸೂಫ್ ಆದಿಲ್ ಖಾನ್ ವಿಜಾಪುರದ ರಾಜ್ಯಪಾಲನಾದ.

1482ರಲ್ಲಿ ಶಿಹಾಬುದ್ದೀನ್ ಮಹಮೂದ್ ಶಹಾನ ಆಳ್ವಿಕೆ ಆರಂಭವಾಯಿತು. ಗವಾನ್ ಸಾವಿನ ನಂತರ ಬಹಮನಿ ರಾಜ್ಯ ಶಿಥಿಲಗೊಂಡಿತು. ಬಹಮನಿ ರಾಜ್ಯ ಕುಸಿದು ಐದು ಸ್ವತಂತ್ರ ರಾಜ್ಯಗಳಾದವು. 1489ರಲ್ಲಿ ಯುಸೂಫ್ ಆದಿಲ್ ಖಾನ್ ವಿಜಾಪುರದ ಸ್ವತಂತ್ರ ರಾಜನಾಗಿ ಆದಿಲ್ ಶಾಹಿ ರಾಜಮನೆತನದ ಸಂಸ್ಥಾಪಕನಾದ.

ಮಲಿಕ್ ಅಹ್ಮದ್ ಭೈರಿಯಿಂದ ಅಹ್ಮದ್ ನಗರದಲ್ಲಿ ನಿಜಾಂ ಶಾಹಿ, ಸುಲ್ತಾನ್ ಕುತ್ಬ್ ಉಲ್ ಮುಲ್ಕ್‌ನಿಂದ ಗೋಲ್ಕೊಂಡಾದಲ್ಲಿ ಕುತ್ಬ್ ಶಾಹಿ, ಕಾಸಿಂ ಬರೀದ್‌ನಿಂದ ಬೀದರ್‌ನಲ್ಲಿ ಬರೀದ್ ಶಾಹಿ, ಫತುಲ್ಲಾ ಇಮಾದ್ ಮುಲ್ಕ್‌ನಿಂದ ಬೆರಾರ್‌ನಲ್ಲಿ ಇಮಾದ್ ಶಾಹಿ ರಾಜಮನೆತನಗಳು ಸ್ಥಾಪನೆಯಾದವು.

ಬಹಮನಿ ಸಾಮ್ರಾಜ್ಯ ಕುಸಿಯುವ ವೇಳೆ ಸ್ವರಾಜ್ಯ ಸ್ಥಾಪನೆಗೆ ಮುಂದಾಗದ ಯುಸೂಫ್ ಆದಿಲ್ ಖಾನ್ ಬಂಡುಕೋರರನ್ನು ಸದೆಬಡಿದು ಅದನ್ನು ರಕ್ಷಿಸಲು ಪ್ರಯತ್ನಿಸಿದ. ಇದು ಆತನ ಧೀರೋದಾತ್ತ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ. ಆದರೆ ಬಹಮನಿ ಸಾಮ್ರಾಜ್ಯವನ್ನು ಯಾರಿಂದಲೂ ಉಳಿಸಲು ಸಾಧ್ಯವಿಲ್ಲವೆಂಬ ಮನವರಿಕೆಯಾದ ನಂತರವೇ ವಿಜಾಪುರದ ಸ್ವತಂತ್ರ ರಾಜನಾದ. ನಂತರ ಅದೇ ಸುಲ್ತಾನ್ ಶಿಹಾಬುದ್ದೀನ್ ಮಹಮೂದ್ ಶಹಾ ದಾಳಿ ಮಾಡಿದಾಗ ಆತನನ್ನು ಸೋಲಿಸಿದರೂ ಸಕಲ ಮರ್ಯಾದೆಗಳೊಂದಿಗೆ ಬೀದರ್‌ಗೆ ಕಳುಹಿಸಿದ. ಅಷ್ಟೇ ಅಲ್ಲ, 1497ರಲ್ಲಿ ಶಿಹಾಬುದ್ದೀನ್ ಮಹಮೂದ್ ಶಹಾನ ಮಗ ನಾಲ್ಕನೇ ಅಹ್ಮದ್ ಶಹಾಗೆ ತನ್ನ ಕಿರಿಯ ಮಗಳು ಬೀಬಿ ಮಜೀತಿಯನ್ನು ಕೊಟ್ಟು ಮದುವೆ ಮಾಡಿದ.

ಮೊದಲ ಸ್ವಾತಂತ್ರ್ಯವೀರ

ನೆರೆ ರಾಜ್ಯಗಳಾದ ಅಹ್ಮದ್ ನಗರ, ತೆಲಂಗಾಣಾ ಮತ್ತು ವಿಜಯನಗರ ಸಾಮ್ರಾಜ್ಯದ ಜೊತೆ ಸೌಹಾರ್ದ ಸಂಬಂಧ ಕಲ್ಪಿಸಿಕೊಂಡು ಗೋವಾದವರೆಗೂ ಸಾಮ್ರಾಜ್ಯ ವಿಸ್ತರಣೆ ಮಾಡಿದ. ರಾಜ್ಯದ ಅಭಿವೃದ್ಧಿ ಮತ್ತು ಧಾರ್ಮಿಕ ಸಮನ್ವಯದ ಕಡೆಗೆ ಹೆಚ್ಚಿನ ಗಮನ ಹರಿಸಿದ.

ದಕ್ಷಿಣ ಭಾರತದಲ್ಲಿ ಷಿಯಾ ಪಂಗಡದ ಮೊದಲ ಸಾಮ್ರಾಜ್ಯ ಸ್ಥಾಪನೆ ಮಾಡಿದರೂ ಯುಸೂಫ್ ಮತಾಂಧನಾಗಿರಲಿಲ್ಲ, ಬಹುಸಂಖ್ಯಾತ ಸುನ್ನಿ ಪಂಗಡದ ಮುಸ್ಲಿಮರ ಮೇಲಾಗಲೀ ವಿವಿಧ ಜಾತಿ ಮತಗಳಲ್ಲಿ ಹಂಚಿಹೋಗಿದ್ದ ಹಿಂದೂಗಳ ಮೇಲಾಗಲಿ ಅಸಹನೆ ವ್ಯಕ್ತಪಡಿಸಲಿಲ್ಲ, ಅವರ ಮಧ್ಯೆ ವಿಷಬೀಜ ಬಿತ್ತಲಿಲ್ಲ. 'ಪ್ರತಿಯೊಬ್ಬರು ತಮ್ಮ ನಂಬಿಕೆಯಂತೆ ಬದುಕಲಿ. ಇಷ್ಟಪಟ್ಟ ಧರ್ಮವನ್ನು ಸ್ವೀಕರಿಸುವುದು ಪ್ರತಿಯೊಬ್ಬರ ಹಕ್ಕು, ನನ್ನ ನಂಬಿಕೆ ನನಗೆ ನಿನ್ನ ನಂಬಿಕೆ ನಿನಗೆ' ಎಂಬ ಯುಸೂಫ್ ಆದಿಲ್ ಶಹಾನ ಉದಾತ್ತ ವಿಚಾರ ಇಂದಿಗೂ ಪ್ರಸ್ತುತವಾಗಿದೆ.

ಪೋರ್ಚುಗೀಸ್ ನಾವಿಕ ವಾಸ್ಕೋಡಿ ಗಾಮಾ 1498ರಲ್ಲಿ ಕಲ್ಲಿಕೋಟೆಗೆ ಬಂದ. ಪೋರ್ಚುಗಲ್ ರಾಜ ಕಿಂಗ್ ಜಾನ್‌ಗೆ ದಕ್ಷಿಣ ಭಾರತದ ಮೇಲೆ ಕಣ್ಣಿತ್ತು, 1505ರಲ್ಲಿ ಕಿಂಗ್ ಜಾನ್ ಭಾರತದ ಪಶ್ಚಿಮ ಕರಾವಳಿಯಲ್ಲಿ ಅಲ್ಮೇಡಾ ಎಂಬಾತನನ್ನು ವೈಸ್‌ರಾಯ್ ಆಗಿ ನೇಮಿಸಿದ. ಅಲ್ಮೇಡಾ ಅದೇ ವರ್ಷ ಕಾರವಾರ ಬಳಿಯ ಅಂಜದೀವ್ ದ್ವೀಪದಲ್ಲಿ ಕೋಟೆ ನಿರ್ಮಿಸಿದ. ಆ ವೇಳೆಗಾಗಲೇ ಯುಸೂಫ್ ಆದಿಲ್ ಶಹಾನ ನೌಕಾಪಡೆಯ ಮುಖ್ಯಸ್ಥನಾಗಿದ್ದ ಯಹೂದಿ ಎಂಬಾತ ಕ್ರೈಸ್ತ ಧರ್ಮ ಸೇರಿ ಗಾಸ್ಪರ್ ಆಗಿ ಪೋರ್ಚುಗೀಸರನ್ನು ಸೇರಿದ್ದ.

ವಿಜಯನಗರದ ಅಧೀನದಲ್ಲಿದ್ದ ಗೆರಸೊಪ್ಪದ ಒಡೆಯನ ಆಡಳಿತಕ್ಕೆ ಅಂಜದೀವ್ ಒಳಪಟ್ಟಿತ್ತು, ಆ ಮೂಲಕ ಆದಿಲ್ ಶಹಾ ಆಡಳಿತವಿದ್ದ ಗೋವಾದ ಮೇಲೆ ಹಿಡಿತ ಸಾಧಿಸುವುದು ಪೋರ್ಚುಗೀಸರ ಯೋಜನೆಯಾಗಿತ್ತು, ಆದರೆ ಆದಿಲ್ ಶಾಹಿ ನೌಕಾಪಡೆ 1506ರಲ್ಲಿ ದಾಳಿ ಮಾಡಿ ಅಂಜದೀವ್ ಕೋಟೆಯನ್ನು ಹಾಳು ಮಾಡಿತು. 75 ವರ್ಷ ವಯಸ್ಸಿನ ಯುಸೂಫ್ ಆದಿಲ್ ಶಹಾನ ನಿಧನದ ನಂತರವೇ 1510ನೇ ಮಾರ್ಚ್ 1ರಂದು ಪೋರ್ಚುಗೀಸರು ಗೋವಾ ಮೇಲೆ ಹಿಡಿತ ಸಾಧಿಸಿದ್ದು. ವಸಾಹತುಶಾಹಿ ವಿರುದ್ಧ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿನ ಪ್ರಥಮ ಸ್ಥಾನ ಯುಸೂಫ್ ಆದಿಲ್ ಶಹಾಗೆ ಸಲ್ಲುತ್ತದೆ!

ವರ್ಣರಂಜಿತ ಬದುಕು

ಆದಿಲ್ ಶಹಾನ ಬದುಕು ವರ್ಣರಂಜಿತವಾಗಿದೆ. ಆತ ಹಿಂದೂ ಮುಸ್ಲಿಂ ಭಾವೈಕ್ಯದ ಹರಿಕಾರನಾದ. ಮರಾಠಾ ಸರ್ದಾರ ಮುಕುಂದರಾವ್‌ನ ತಂಗಿ ಬಪುಜಿ ಖಿನುಂ (ಪೂಂಜಿ ಖಾತೂನ್) ಆತನ ಪಟ್ಟದರಸಿ ಆದಳು. ಆತ ಬಹುಪತ್ನಿತ್ವವನ್ನು ಆಚರಿಸಲಿಲ್ಲ.


ಆತ್ಮಾಕರ್ಷಕ ವ್ಯಕ್ತಿತ್ವದ ಆದಿಲ್ ಶಹಾ ಎಲ್ಲ ಜಾತಿ, ಮತ, ಧರ್ಮಗಳ ಜನಸಮುದಾಯಗಳ ಗೌರವ ಸಂಪಾದಿಸಿದ್ದ. ರಾಜನಾಗಿ ಆತನ ನಡವಳಿಕೆ ಇಡೀ ಭರತಖಂಡಕ್ಕೇ ಮಾದರಿಯಾಯಿತು. ಆತ ಎಷ್ಟೊಂದು ಸಂವೇದನಾಶೀಲನಾಗಿದ್ದನೆಂದರೆ, ವಿಜಾಪುರ ಸ್ವತಂತ್ರ ರಾಜ್ಯವಾದ ಮೇಲೂ ಅಳಿದುಳಿದ ಬಹಮನಿ ಸುಲ್ತಾನರ ರಾಜ್ಯವು ಜೀವ ಹಿಡಿದುಕೊಂಡೇ ಇದ್ದುದರಿಂದ ತನ್ನ ಹೆಸರಿನ ಮುಂದೆ ಶಹಾ ಶಬ್ದ ಬಳಸಲಿಲ್ಲ, ಯುಸೂಫ್ ಆದಿಲ್ ಖಾನ್ ಆಗಿಯೇ ಉಳಿದ.

ಈ ದಯಾಳು ದೊರೆ ತನ್ನ ಪ್ರಜೆಗಳನ್ನು ಸಮಾನ ದೃಷ್ಟಿಯಿಂದ ಕಾಣುತ್ತಿದ್ದ. ಆತನ ಕಂದಾಯ ಅಧಿಕಾರಿಗಳು ಹಿಂದೂಗಳಾಗಿದ್ದರು. ಆತನ ಸಚಿವಾಲಯದಲ್ಲಿ ಬಹುಪಾಲು ಹಿಂದೂ ಅಧಿಕಾರಿಗಳಿದ್ದರು. ಅನುಪಮ ಸೇವೆ ಸಲ್ಲಿಸಿದ ಹಿಂದೂಗಳನ್ನು 'ರಾಜಾ', 'ನಾಯಕ್' ಮತ್ತು 'ರಾವ್' ಬಿರುದುಗಳೊಂದಿಗೆ ಸನ್ಮಾನಿಸುತ್ತಿದ್ದ.

ಈ ಮೇಧಾವಿ ದೊರೆ ಕವಿಯೂ ಆಗಿದ್ದ, ವಿಶ್ವದ ಮೂಲೆಮೂಲೆಗಳಿಂದ ವಿವಿಧ ಕ್ಷೇತ್ರಗಳ ತಜ್ಞರನ್ನು ಆಹ್ವಾನಿಸಿ ಆಶ್ರಯ ನೀಡಿದ್ದ. ಸಂಗೀತದಲ್ಲಿ ಆತನಿಗೆ ಆಸಕ್ತಿ ಇತ್ತು, ಸಂಗೀತವಾದ್ಯಗಳನ್ನು ನುಡಿಸುವುದರಲ್ಲೂ ಪರಿಣತನಾಗಿದ್ದ. ವಾಸ್ತುಶಿಲ್ಪದಲ್ಲಿ ಹೆಚ್ಚಿನ ಕಾಳಜಿ ಇತ್ತು, ಅರಮನೆ, ಆಡಳಿತ ಕಚೇರಿ ಮತ್ತು ಉನ್ನತ ಅಧಿಕಾರಿಗಳ ನಿವಾಸಗಳುಳ್ಳ ಪ್ರದೇಶದ ಸುತ್ತ ಅರಕಿಲ್ಲಾ (ರಾಜ ಪರಿವಾರದ ಕೋಟೆ) ಕಟ್ಟಿಸಿದ. ಈ ಸುಂದರ ಕೋಟೆ ಇಂದಿಗೂ ವಿಜಾಪುರದ ಹೃದಯಭಾಗದಲ್ಲಿ ಇದ್ದು ಗತವೈಭವವನ್ನು ನೆನಪಿಗೆ ತರುತ್ತಿದೆ. ಗಗನಮಹಲ್, ಜಲಮಂದಿರ, ದರ್ಬಾರ್ ಹಾಲ್, ಸಾತ್ ಮಂಜಿಲ್, ಆನಂದ ಮಹಲ್ ಮುಂತಾದ ಪ್ರಸಿದ್ಧ ಇಮಾರತುಗಳು ಇದೇ ಜಾಗದಲ್ಲಿವೆ.

ಆದಿಲ್ ಶಾಹಿಗಳ ಆಳ್ವಿಕೆಯಲ್ಲಿ ಹಿಂದೂ-ಮುಸ್ಲಿಂ ಸಮ್ಮಿಶ್ರ ಶಿಲ್ಪಕಲೆ, ಎರಡೂ ಉನ್ನತ ಸಂಸ್ಕೃತಿಗಳ ಪರಿಪೂರ್ಣತೆಯನ್ನು ಸಾಧಿಸಿತು. ಇಟಲಿ ಪ್ರವಾಸಿ ವರ್ಥೆಮಾ ವಿಜಾಪುರಕ್ಕೆ 1502ರಲ್ಲಿ ಭೇಟಿ ನೀಡಿದಾಗ ಹೃದಯತುಂಬಿ ವರ್ಣಿಸಿದ್ದಾನೆ. ವೈಭವಪೂರ್ಣ ಇಮಾರತುಗಳಿಂದ ಮತ್ತು ಸುಂದರ ಕೋಟೆ ಕೊತ್ತಲಗಳಿಂದ ವಿಜಾಪುರ ಕಂಗೊಳಿಸುವುದು ಎಂದು ಆತ ಬರೆದಿದ್ದಾನೆ, ಯುಸೂಫ್ ಶ್ರೀಮಂತ, ಶಕ್ತಿಶಾಲಿ ಮತ್ತು ಉದಾರ ದೊರೆ ಎಂದು ಆತ ಗುಣಗಾನ ಮಾಡಿದ್ದಾನೆ. ಈ ಕಾರಣಗಳಿಂದ ದಕ್ಷಿಣದ ದೊರೆಗಳಲ್ಲಿ ಯುಸೂಫ್‌ಗೆ ಉನ್ನತ ಸ್ಥಾನ ಕಲ್ಪಿಸಲಾಗಿತ್ತು.

ಯುಸೂಫ್ ಆದಿಲ್ ಶಹಾಗೆ ಒಬ್ಬ ಮಗ ಮತ್ತು ಮೂವರು ಹೆಣ್ಣುಮಕ್ಕಳಿದ್ದರು. ಮಗ ಇಸ್ಮಾಯಿಲ್ ಆದಿಲ್ ಶಹಾ (1510-1534) ವಿಜಾಪುರದ ಸಿಂಹಾಸನವೇರಿದಾಗ ಬಾಲಕನಾಗಿದ್ದ, ಕಮಾಲ್ ಖಾನ್ ಎಂಬ ಅಧಿಕಾರಿ ಆಡಳಿತವನ್ನು ನೋಡಿಕೊಳ್ಳುತ್ತಿದ್ದ. ಆತನದು ಸುನ್ನಿ ಪಂಗಡ







ಷಿಯಾ ರಾಜವಂಶ ಭೇದಭಾವ ತೋರಿಸಲಿಲ್ಲ. ಆದರೆ ಕಮಾಲ್ ಖಾನನಿಗೆ ಷಿಯಾ ರಾಜವಂಶದ ಬಗ್ಗೆ ದ್ವೇಷವಿತ್ತು. ಆದಿಲ್ ಶಾಹಿ ರಾಜವಂಶವನ್ನು ನಿರ್ನಾಮ ಮಾಡುವ ಷಡ್ಯಂತ್ರ ಹೂಡಿದ.

ಇಸ್ಮಾಯಿಲ್, ಆತನ ತಾಯಿ ಬಪೂಜಿ ಖನುಂ ಮತ್ತು ಸೋದರತ್ತೆ ದಿಲ್ಷಾದ್ ಆಘಾ ಅವರು ಅರಮನೆಯಲ್ಲೇ ಉಳಿಯುವ ಹಾಗೆ ದಿಗ್ಬಂಧನ ಹಾಕಿದ. ಆದರೆ ಬಪೂಜಿ ಖನುಂ, ನಿಷ್ಠಾವಂತನಾಗಿದ್ದ ಯುಸೂಫ್ ತುರ್ಕ್ ಕುಟುಂಬವನಿಂದ ಕಮಾಲ್ ಖಾನ್‌ನನ್ನು ಕೊಲ್ಲಿಸಿದಳು. ಆತನ ಮಗ ಸಫ್ದರ್ ಖಾನ್, ರಾಜವಂಶಕ್ಕೆ ನಿಷ್ಠೆ ತೋರಿದವರ ಮೇಲೆ ದಾಳಿ ಪ್ರಾರಂಭಿಸಿದ ಹೋರಾಟದಲ್ಲಿ ಆತನ ಕಣ್ಣಿಗೆ ಗಾಯವಾಯಿತು. ಆತ ಆಶ್ರಯಕ್ಕಾಗಿ ಅರಮನೆಯ ಗೋಡೆಯ ಬಳಿ ಬಂದಾಗ ಮೇಲೆ ನಿಂತು ನೋಡುತ್ತಿದ್ದ ಇಸ್ಮಾಯಿಲ್ ಅವನ ಮೇಲೆ ದೊಡ್ಡ ಕಲ್ಲು ಹಾಕಿ ಕೊಂದ.

ರೋಮಾಂಚಕ

ಮರಾಠಾ ಸಂಸ್ಕೃತಿಯಲ್ಲಿ ಬೆಳೆದ ಮಹಿಳೆ ಬಪುಜಿ ಖಾನುಂ ಮತ್ತು ಪರ್ಷಿಯನ್ ಸಂಸ್ಕೃತಿಯಲ್ಲಿ ಬೆಳೆದ ಮಹಿಳೆ ದಿಲ್ಷಾದ್ ರಾಜದ್ರೋಹಿಗಳನ್ನು ಸದೆಬಡಿಯುವಲ್ಲಿ ರೂಪಿಸಿದ ಯೋಜನೆ ಮತ್ತು ಮಾಡಿದ ಹೋರಾಟ ರೋಮಾಂಚಕವಾಗಿದೆ. ಅವರು ಈ ದಂಗೆಯನ್ನು ಸದೆಬಡಿಯಲು ಸೈನಿಕರ ಉಡುಪು ಧರಿಸಿ, ಖಡ್ಗ-ಗುರಾಣಿಗಳನ್ನು ಹಿಡಿದು ಇತರ ಸೈನಿಕರ ಜೊತೆ ಸೇರಿ ಹೋರಾಡಿದರು. ಪರ್ಷಿಯನ್ ಮೂಲದ ಅಸದ್ ಖಾನ್ ಎಂಬ ವೀರ ಈ ದಂಗೆಯನ್ನು ಅಡಗಿಸುವಲ್ಲಿ ಮಹತ್ವದ ಪಾತ್ರ ವಹಿಸಿದ. ದಂಗೆ ಅಡಗಿಸಿದ ನಂತರ ಕಮಾಲ್ ಖಾನ್ ಪರವಾಗಿದ್ದವರನ್ನು ಅವರವರ ಹುದ್ದೆಗಳಲ್ಲಿ ಸೇರಿಸಿಕೊಂಡಿದ್ದು ಬಪುಜಿ ಖನುಂಳ ರಾಜಕೀಯ ಪ್ರಜ್ಞೆಯ ಪ್ರತೀಕವಾಗಿದೆ. ಷಿಯಾ ಸುನ್ನಿಗಳ ಮಧ್ಯದ ಬಿರುಕು ಮುಚ್ಚಲು ಈ ಕ್ರಮ ಕೈಗೊಂಡಿರುವ ಸಾಧ್ಯತೆಗಳಿವೆ. ಆದರೆ ನಂತರ ಸ್ಥಳೀಯ (ದಖನಿ) ರನ್ನು ಸೈನ್ಯಕ್ಕೆ ಸೇರಿಸಿಕೊಳ್ಳಲಿಲ್ಲ ಎಂದು ಆಗಿನ ಕಾಲದ ಫರಿಶ್ತಾ ಮತ್ತು ಬಸಾತಿನ್ ಬರೆದಿದ್ದಾರೆ.

ಸ್ಥಳೀಯರನ್ನು ದೂರವಿಡುವ ಮುನ್ನೆಚ್ಚರಿಕೆಯ ಕ್ರಮ ಬಹಳ ದಿನ ಉಳಿಯಲಿಲ್ಲ. ಏಕೆಂದರೆ ಆ ತಾತ್ಕಾಲಿಕ ಕ್ರಮ ಆದಿಲ್ ಶಾಹಿ ರಾಜವಂಶದ ಪರಂಪರೆಗೇ ವಿರುದ್ಧವಾಗಿತ್ತು. 'ನಂತರ ರಾಜಪೂತರು, ಮರಾಠರು ಮತ್ತು ಅಫ್ಘಾನಿಸ್ಥಾನದವರನ್ನು ಸೈನ್ಯಕ್ಕೆ ಸೇರಿಸಿಕೊಳ್ಳಲಾಯಿತು' ಎಂದು ಇತಿಹಾಸಕಾರ ಎಸ್.ಕೆ.ಖನ್ನಾ ಅವರು 'ಮೆಡಿವಲ್ ಹಿಸ್ಟರಿ ಆಫ್ ಡೆಕ್ಕನ್'ನಲ್ಲಿ ಬರೆದಿದ್ದಾರೆ. ಇದೇ ಸಂದರ್ಭ(1514)ದಲ್ಲಿ ಬೀದರ್‌ನ ಅಮೀರ ಬರೀದ ನೆರೆಯ ಅಹ್ಮದ್ ನಗರ, ಗೋಲ್ಕೊಂಡಾ ಮತ್ತು ಬೆರಾರ್ ಸುಲ್ತಾನರ ಸಹಾಯದೊಂದಿಗೆ ಷಿಯಾ ಪಂಗಡದ ಆದಿಲ್ ಶಾಹಿ ರಾಜ್ಯವನ್ನು ನಿರ್ನಾಮ ಮಾಡುವುದಕ್ಕಾಗಿ ದಂಡೆತ್ತಿ ಬಂದ. ಬಹಮನಿ ದೊರೆ ಮುಹಮ್ಮದ್ ಶಹಾ ದಾಳಿಯ ನೇತೃತ್ವ ವಹಿಸಿದ್ದ. ಅವರೆಲ್ಲ ಸೇರಿ ಭಾರಿ ಸೈನ್ಯದೊಂದಿಗೆ ವಿಜಾಪುರ ಕೋಟೆ ಸಮೀಪ ಬಂದರು.

ಪ್ರೀತಿಯಿಂದ ದ್ವೇಷ ಗೆದ್ದವರು

ಇಸ್ಮಾಯಿಲ್ ನೇತೃತ್ವದಲ್ಲಿ ವಿಜಾಪುರ ಸೈನ್ಯ ಅವರನ್ನು ಸದೆಬಡಿದು ಮುಹಮ್ಮದ್ ಶಹಾ ಮತ್ತು ಆತನ ಮಗ ಅಹ್ಮದ್‌ನನ್ನು ಸೆರೆ ಹಿಡಿಯಿತು. ಆದರೆ ಅವರನ್ನು ಇಸ್ಮಾಯಿಲ್ ಮರ್ಯಾದೆಯಿಂದ ಕಂಡ. ಪ್ರೀತಿಯಿಂದ ದ್ವೇಷವನ್ನು ಗೆಲ್ಲುವುದು ಆದಿಲ್ ಶಾಹಿ ಸಂಸ್ಕೃತಿಯಾಗಿದೆ. ಇಸ್ಮಾಯಿಲ್ ಆಳ್ವಿಕೆಯಲ್ಲಿ ಪರ್ಷಿಯಾ ದೊರೆಗಳ ಜೊತೆ ಆತ್ಮೀಯ ಸಂಬಂಧ ಬೆಳೆಯಿತು. ಇಂಥ ಸಂಬಂಧಗಳು ವಿಜಾಪುರದ ಕೀರ್ತಿ, ಕಲೆ, ಸಾಹಿತ್ಯ ಮತ್ತು ಸಮನ್ವಯ ಸಂಸ್ಕೃತಿಯ ಉತ್ಕರ್ಷಕ್ಕೆ ಕಾರಣವಾದವು.

ದಕ್ಷಿಣದ ಪಾಲ್ಯಾ, ಮುಸ್ಲಿಂ ರಾಜ್ಯಗಳ ಜೊತೆ ಸಂಬಂಧಗಳನ್ನು ಗಟ್ಟಿಗೊಳಿಸಿ ಶಾಂತಿ ನೆಲೆಸುವಂತೆ ಮಾಡುವುದು ಇಸ್ಮಾಯಿಲ್‌ನ ಉದ್ದೇಶವಾಗಿತ್ತು. ಸಹೋದರಿ ಮರಿಯಮ್ಮಳನ್ನು ಅಹ್ಮದ್ ನಗರದ ಬುರಾನ್ ನಿಜಾಂ ಶಹಾಗೆ 1524ರಲ್ಲಿ ಮದುವೆ ಮಾಡಿಕೊಟ್ಟಿದ್ದು ಇಂಥ [illegible]

ಇಸ್ಮಾಯಿಲ್ ತನ್ನ [illegible] ಬದುಕಿನ ಮೇಲೆ

ಹಿಡಿತ ಸಾಧಿಸಿ ಸೈನಿಕರ ಸಂಬಳ ಹೆಚ್ಚಿಸಿದ್ದು ಇತಿಹಾಸದಲ್ಲಿನ ಅಪೂರ್ವ ಘಟನೆ.

1528ರಲ್ಲಿ ಇಸ್ಮಾಯಿಲ್ ತನ್ನ ಮೂರನೆಯ ಸಹೋದರಿ ಖತಿಜಾಳನ್ನು ಬೆರಾರ್ ಸುಲ್ತಾನ ಇಮಾದ್ ಶಹಾನಿಗೆ ಮದುವೆ ಮಾಡಿಕೊಟ್ಟ.

ಇಸ್ಮಾಯಿಲ್‌ನ ಆಡಳಿತಾವಧಿಯಲ್ಲಿ ಬೀದರ್‌ನ ಬರೀದ್ ಶಾಹಿ ರಾಜವಂಶ ಶಕ್ತಿಗುಂದಿತು. ಆದರೂ ಅಮೀರ್ ಬರೀದ್ ಒಂದಿಲ್ಲೊಂದು ಕಾರಣದಿಂದ ವಿಜಾಪುರದ ಮೇಲೆ ಯುದ್ಧ ಸಾರುತ್ತಲೇ ಇದ್ದ. ಇಸ್ಮಾಯಿಲ್, ಅಹ್ಮದ್ ನಗರದ ಬುರ್ಹಾನ್ ಶಹಾನ ಸಲಹೆ ಪಡೆದು ಬೀದರ್ ಮೇಲೆ ದಾಳಿ ಮಾಡಿದ. ಅಮೀರ್ ಬರೀದ್‌ನನ್ನು ಇಸ್ಮಾಯಿಲ್‌ನನ್ನು ಬಂಧಿಸಿದ. ಬೀದರ್ ರಾಜ್ಯ ವಿಜಾಪುರದ ಭಾಗವಾಯಿತು. ಆದರೆ ಇಸ್ಮಾಯಿಲ್, ಕಲ್ಯಾಣ ಮತ್ತು ಉದಗೀರ್ ಮುಂತಾದ ಜಿಲ್ಲೆಗಳನ್ನು ಅಮೀರ್ ಬರೀದ್‌ಗೆ ಕೊಟ್ಟು ಉದಾರತೆಯನ್ನು ಮೆರೆದ. ವಿಜಯನಗರದ ವಿರುದ್ಧ ಹೋರಾಡಿ ರಾಯಚೂರು ಮತ್ತು ಮುದಗಲ್‌ಗಳನ್ನು ಮರಳಿ ಪಡೆದ. ಹೀಗೆ ಆತ ಶೌರ್ಯ ಮತ್ತು ಶಾಂತಿಯುತ ಸಹಬಾಳ್ವೆಯೊಂದಿಗೆ ವಿಜಾಪುರ ರಾಜ್ಯವನ್ನು ಸುಭದ್ರಗೊಳಿಸಲು ಶ್ರಮಿಸಿದ.

ಇಸ್ಮಾಯಿಲ್ ವಿಶಾಲ ಹೃದಯಿ, ನ್ಯಾಯವಂತ, ಸಾಹಿತ್ಯಾಸಕ್ತ ಹಾಗೂ ಸೌಂದರ್ಯೋಪಾಸಕನಾಗಿದ್ದ ಎಂದು ಫರಿಶ್ತಾ ದಾಖಲಿಸಿದ್ದಾನೆ. ಆತ ದಾನ ಧರ್ಮಗಳ ವಿಚಾರದಲ್ಲಿ ತಂದೆಯಂತೆಯೆ ದಯಾಶೀಲನಾಗಿದ್ದ ಎಂದಿದ್ದಾನೆ.



ಇಸ್ಮಾಯಿಲ್ ಸಂಗೀತಗಾರನಾಗಿದ್ದ. ಚಿತ್ರಕಲೆ ಮತ್ತು ಕಸೂತಿ ಕಲೆಯಲ್ಲೂ ಆಸಕ್ತಿ ಹೊಂದಿದ್ದ.

ಇಸ್ಮಾಯಿಲ್ ಸಾವಿನ ನಂತರ ಹಿರಿಯ ಮಗ ಮಲ್ಲು ಆದಿಲ್ ಶಹಾ (ಆಗಸ್ಟ್ 1534 - ಫೆಬ್ರುವರಿ 1535) ವಿಜಾಪುರದ ದೊರೆಯಾದ. ಆತ ದುಶ್ಚಟಗಳಿಗೆ ಬಲಿಯಾಗಿದ್ದರಿಂದ ರಾಜ್ಯಾಡಳಿತದ ಮೇಲೆ ದುಷ್ಪರಿಣಾಮವಾಗತೊಡಗಿತು. ಅಜ್ಜಿ ಬಪೂಜಿ ಖನುಂ ಆತನನ್ನು ಬಂಧಿಸಿ ಕಣ್ಣು ಕೀಳಿಸಿದಳು. ಆತನ ತಮ್ಮ ಮೊದಲನೇ ಇಬ್ರಾಹಿಂ ಆದಿಲ್ ಶಹಾ (1535 -1557) ಸಿಂಹಾಸನವನ್ನೇರಿದ.

ತಮ್ಮದು ಷಿಯಾ ರಾಜವಂಶವಾಗಿರುವುದರಿಂದ ಸುನ್ನಿ ಪಂಗಡದ ಸುಲ್ತಾನರು ಮತ್ತು ಅನೇಕ ದಖನಿಗಳು ತಮಗೆ ವಿರೋಧಿಗಳಾಗಿದ್ದಾರೆ ಎಂಬುದನ್ನು ಗಮನಿಸಿದ ಇಬ್ರಾಹಿಂ, ಸುನ್ನಿ ಪಂಗಡದ ಸಂಪ್ರದಾಯದ ಪ್ರಕಾರ ಇಸ್ಲಾಂ ಧರ್ಮದ ಆಚರಣೆಯನ್ನು ಬೆಂಬಲಿಸಿದ. ವಿದೇಶಿ ಅಧಿಕಾರಿಗಳ ಸ್ಥಾನದಲ್ಲಿ ಸ್ಥಳೀಯ ದಖನಿ ಅಧಿಕಾರಿಗಳು ಅವಕಾಶ ಪಡೆಯತೊಡಗಿದರು. ಪಾರ್ಸಿ ಭಾಷೆಯ ಬದಲು ಸ್ಥಳೀಯ ಭಾಷೆ ಆಡಳಿತ ಭಾಷೆಯ ಸ್ಥಾನ ಪಡೆಯಿತು. ಸಾಧ್ಯವಾದ ಕಡೆಗಳಲ್ಲೆಲ್ಲ ಹಿಂದೂಗಳ ನೇಮಕ ಮಾಡಿದ.

ಮೊದಲನೇ ಇಬ್ರಾಹಿಂ ಸ್ಥಳೀಯ ಮರಾಠಿ ಜನಸಮುದಾಯದ ಜೊತೆ ಆತ್ಮೀಯನಾಗಿದ್ದ. ಮೋಡಿ (ಮರಾಠಿ) ಮತ್ತು ಕನ್ನಡ ಭಾಷೆಗಳು ಲೆಕ್ಕಪತ್ರ ಮತ್ತು ಆಡಳಿತ ಭಾಷೆಯ ಸ್ಥಾನ ಪಡೆದವು. ಬ್ರಾಹ್ಮಣರು ಆಸ್ಥಾನದ ಲೆಕ್ಕಪತ್ರ ನೋಡಿಕೊಳ್ಳುತ್ತಿದ್ದರು. ನಾಡಿನ ಕಾನೂನು ಮತ್ತು ಶಾಂತಿ ಪಾಲನೆ ವ್ಯವಸ್ಥೆ ಮರಾಠರ ಕೈಯಲ್ಲಿತ್ತು. ಸೈನ್ಯದಲ್ಲಿ 30 ಸಾವಿರ ಮರಾಠಾ ಸೈನಿಕರಿದ್ದರು. ಅವರ ಮೂಲಕ ಗೆರಿಲ್ಲಾ ಮಾದರಿಯ ಹೋರಾಟವನ್ನು ಆಚರಣೆಯಲ್ಲಿ ತಂದ. ನಂತರ ಶಿವಾಜಿ ಈ ತಂತ್ರದಲ್ಲೇ ಪರಿಣತಿ ಸಾಧಿಸಿದ.

ದಕ್ಷಿಣದ ಮುಸ್ಲಿಂ ದೊರೆಗಳು ಪದೆಪದೇ ಯುದ್ಧ ಸಾರಿದ್ದರಿಂದ ಜಿಗುಪ್ಸೆಗೊಂಡ ಇಬ್ರಾಹಿಂ ನಂಬಿಗಸ್ಥ ಅಧಿಕಾರಿಗಳನ್ನೇ ಶಿಕ್ಷಿಸುವ ತಪ್ಪು ಮಾಡಿದ. 'ಇಂಥ ತಪ್ಪುಗಳ ಮಧ್ಯೆಯೂ ಆತ ತನ್ನ ರಾಜ್ಯದ ಅಭ್ಯುದಯ ಸಾಧಿಸಿದ. ಜನಜೀವನದಲ್ಲಿ ನೆಮ್ಮದಿ ಇತ್ತು. ವ್ಯಾಪಾರದಲ್ಲಿ ಪ್ರಗತಿಯಾಗಿತ್ತು' ಎಂದು ಇತಿಹಾಸಕಾರ ಬಸಾತಿನ್ ಬರೆದಿದ್ದಾನೆ.

ರಾಮರಾಯನ 'ದತ್ತುಪುತ್ರ'

ಇಬ್ರಾಹಿಂ ನಿಧನದ ನಂತರ ಆತನ ಹಿರಿಯ ಮಗ ಮೊದಲನೇ ಆದಿಲ್ ಶಹಾ (1557 -1580) ಅಧಿಕಾರಕ್ಕೆ ಬಂದ. ಸುನ್ನಿ ಸಂಪ್ರದಾಯದಿಂದ ಷಿಯಾ ಸಂಪ್ರದಾಯಕ್ಕೆ ಮರಳಿದ.

ಅಸದ್ ಖಾನನ ಮಗ ಕಿಶ್ವರ್ ಖಾನನನ್ನು ಸೇನಾಧಿಪತಿಯಾಗಿ ನೇಮಿಸಿ ಶಾಂತಿ ಒಪ್ಪಂದಕ್ಕಾಗಿ ವಿಜಯನಗರಕ್ಕೆ ಕಳುಹಿಸಿದ. ರಾಮರಾಯನ ಅಣ್ಣ ಸದಾಶಿವ ವಿಜಯನಗರದ ಅರಸನಾಗಿದ್ದ. ರಾಮರಾಯನಿಗೆ ಅಲಿಯ ಬಗ್ಗೆ ಪ್ರೀತಿ ಇತ್ತು. ರಾಮರಾಯನ ಮಗ ಸತ್ತಾಗ ಅಲಿ ಸಂತಾಪ ಸೂಚಿಸುವುದಕ್ಕಾಗಿ ವಿಜಯನಗರಕ್ಕೆ ಹೋದ. ರಾಮರಾಯನ ಹೆಂಡತಿ ಅಲಿಯನ್ನು 'ದತ್ತುಪುತ್ರ' ಎಂದು ಕರೆಯುತ್ತಿದ್ದಳು.

ವಿಜಾಪುರದ ಭಾಗಗಳಾದ ಕಲ್ಯಾಣ ಮತ್ತು ಸೋಲಾಪುರಗಳನ್ನು ಬಿಟ್ಟುಕೊಡಬೇಕೆಂದು ಅಹ್ಮದ್ ನಗರದ ಹುಸೇನ್ ನಿಜಾಂ ಶಹಾನಿಗೆ ಒಂದನೇ ಅಲಿ ಹೇಳಿಕಳುಹಿಸಿದ. ಆತ ಒಪ್ಪದೇ ಇದ್ದಾಗ ವಿಜಯನಗರದ ಸಹಾಯದೊಂದಿಗೆ ದಾಳಿ ಮಾಡಿ ವಿಜಯ ಸಾಧಿಸಿದ. ಹುಸೇನ್ ನಿಜಾಂ ಶಹಾ ತನ್ನ ಮಗಳು ಚಾಂದಬೀಬಿಯನ್ನು ಒಂದನೇ ಅಲಿ ಆದಿಲ್ ಶಹಾನಿಗೆ ಕೊಟ್ಟು ಮದುವೆ ಮಾಡಿದ. ಸೋಲಾಪುರವನ್ನು ವರದಕ್ಷಿಣೆಯಾಗಿ ನೀಡಿದ. ಅಲಿ, ತನ್ನ ಸಹೋದರಿ ಹದಿಯಾ ಸುಲ್ತಾನಳನ್ನು ಹುಸೇನ್ ನಿಜಾಂ ಶಹಾನ ಹಿರಿಯ ಮಗ ಮುರ್ತುಜಾಗೆ ಕೊಟ್ಟು ಮದುವೆ ಮಾಡಿದ. ಹೀಗೆ ದಖನಿ ಮುಸ್ಲಿಮರ ರಾಜಮನೆತನದಲ್ಲಿ ಶಾಂತಿಯುತ ಸಹಬಾಳ್ವೆಗಾಗಿ ಮದುವೆಗಳು ನಡೆಯುತ್ತಲೇ ಇದ್ದವು.

ಮೊದಲ ರಾಕೆಟ್

ಅಹ್ಮದ್ ನಗರ, ಬೀದರ್, ಗೋಲ್ಕೊಂಡಾ ಮತ್ತು [illegible] ಸುಲ್ತಾನರು ಒಂದಾಗಿದ್ದು ವಿಜಯನಗರದ ವಿರುದ್ಧದ ರಕ್ಕಸ ತಂಗಡಗಿ ಯುದ್ಧದಲ್ಲಿ ಮಾತ್ರ, ಮಧ್ಯಯುಗದ ಈ ಭಯಂಕರ ಮತ್ತು ಬೃಹತ್ತಾದ ಯುದ್ಧದಲ್ಲಿ ವಿಜಯನಗರದವರು ಮೊದಲ ಸಲ ಆಕಾಶಬಾಣ (ರಾಕೆಟ್) ಬಳಸಿದರೆಂದು ಫರಿಶ್ತಾ ತಿಳಿಸಿದ್ದಾನೆ.



ವಿಶ್ವದ ಇತಿಹಾಸದಲ್ಲಿ ರಾಕೆಟ್‌ಗಳನ್ನು ಮೊದಲ ಸಲ ಬಳಸಿದ ಕೀರ್ತಿ ವಿಜಯನಗರ ಸಾಮ್ರಾಜ್ಯಕ್ಕೆ ಸಲ್ಲುತ್ತದೆ. ಈ ಬಳಕೆ ವಿಜಾಪುರದ ನೆಲದಲ್ಲಾಗಿದೆ.

ವಿಜಯನಗರದ ಪತನದ ನಂತರ ಮತ್ತೆ ಈ ಶಾಹಿ ರಾಜ್ಯಗಳು ಪದೆಪದೇ ಪರಸ್ಪರ ಯುದ್ಧದಲ್ಲಿ ತೊಡಗಿದ್ದವು. ಇದನ್ನೆಲ್ಲ ಗಮನಿಸಿದರೆ ಇವೆಲ್ಲ ಹೇಗೆ ಅಭಿವೃದ್ಧಿ ಸಾಧಿಸಿದವು ಎಂಬುದು ಆಶ್ಚರ್ಯಕರವಾಗಿದೆ.

ಒಂದನೇ ಅಲಿ ಆದಿಲ್ ಶಹಾ ಕೂಡ ಯುಸೂಫ್ ಹಾಗೆ ವಿಜಾಪುರವನ್ನು ಸುಂದರ ಉದ್ಯಾನಗಳಿಂದ ಸಿಂಗರಿಸಿದ್ದ. ವಾಸ್ತುಶಿಲ್ಪ, ಸಾಹಿತ್ಯ, ಚಿತ್ರಕಲೆ ಮುಂತಾದವುಗಳಲ್ಲಿ ಆತನಿಗೆ ಕಾಳಜಿ ಇತ್ತು. ವಿಜಾಪುರ ಶೈಲಿಯ ಚಿತ್ರಕಲೆ ಪ್ರಾರಂಭವಾದದ್ದು ಈತನ ಕಾಲದಲ್ಲೇ. ಚಿನ್ನದ ಹೊಳಪಿನ ಈ ಚಿತ್ರಕಲೆಯಲ್ಲಿ ಹಿಂದೂ ದೇವತೆಗಳು ಚಿತ್ರಿತವಾದುದೊಂದು ವಿಶೇಷ.

ಮೊದಲನೇ ಅಲಿ ಲಲಿತಕಲೆಗಳಿಗೆ ಕೊಟ್ಟ ಪ್ರಾಮುಖ್ಯವನ್ನೇ ಸಮಾಜ ಕಲ್ಯಾಣಕ್ಕೂ ಕೊಟ್ಟ. ಸಮಾಜ ಕಲ್ಯಾಣ ಆತನ ಆಡಳಿತದ ಜೀವಾಳ. ವಿಜಾಪುರದಲ್ಲಿ ನೀರಿನ ಸಮಸ್ಯೆ ಬಗೆಹರಿಸಲು ಆತ ಆಳವಾಗಿ ಯೋಚಿಸಿದ. ಚಾಂದ್ ಬಾವಡಿ ಎಂಬ ಬೃಹತ್ ಬಾವಿಯನ್ನು ಕಟ್ಟಿಸಿದ. ಇದು ಸಾಲದ್ದಕ್ಕೆ ಪರ್ಯಾಯ ನೀರು ಪೂರೈಕೆ ವ್ಯವಸ್ಥೆಯನ್ನು ಜಾರಿಗೊಳಿಸಿದ. ಆ ಕಾಲದಲ್ಲಿ ಇಡೀ ಭರತಖಂಡದಲ್ಲೇ ಈ ಯೋಜನೆ ಅದ್ವಿತೀಯವಾಗಿತ್ತು!

ಸೂಫಿಗಳ ಕೇಂದ್ರ

ವಿಜಾಪುರ ಸೂಫಿ ತತ್ತ್ವಜ್ಞಾನಿಗಳ ಕೇಂದ್ರವಾಗಲು ಒಂದನೇ ಅಲಿ ಆದಿಲ್ ಶಹಾನ ಕಾಳಜಿಯೇ ಮುಖ್ಯ ಕಾರಣ. ಹಿಂದೂ ಮುಸ್ಲಿಂ ಸಂತರಿಗೆ ಆತ ಆಶ್ರಯ ನೀಡಿದ್ದ. ಸರ್ವಧರ್ಮಗಳ ಮಧ್ಯೆ ಸೌಹಾರ್ದದ ತಿಳಿವಳಿಕೆ ಮೂಡಿಸುವ ವ್ಯವಸ್ಥೆ ಮಾಡಿದ್ದ. ಆತ ಉದಾರ ದಾನಿ ಎಂದೇ ಪ್ರಸಿದ್ಧನಾಗಿದ್ದಾನೆ. ಆದರೆ ಸ್ವಂತಕ್ಕೆ ಸರಳಜೀವನ ನಡೆಸಿದ. 'ಸರಳ ಬದುಕು, ಉನ್ನತ ವಿಚಾರ' ಆತನ ಜೀವನ ವಿಧಾನವಾಗಿತ್ತು. ಆತ ತನ್ನ ನೌಕರರಿಗಿಂತ ಸಾದಾ ಬಿಳಿ ಬಟ್ಟೆ ಧರಿಸುತ್ತಿದ್ದ. ಸಾದಾ ಆಹಾರ ಸೇವಿಸುತ್ತಿದ್ದ. ನೆಲದ ಮೇಲೆ ಕೂಡುತ್ತಿದ್ದ, ಮಲಗುತ್ತಿದ್ದ! ಆಹಾರಕ್ಕಾಗಿ ಕುರಿ ಕೋಳಿ ಕೊಲ್ಲುವುದು ಕ್ರೌರ್ಯ ಎಂದು ಆತ ಭಾವಿಸಿದ್ದಾಗಿ ಅಂದಿನ ಇತಿಹಾಸಕಾರ ಶಿರಾಜಿ ದಾಖಲಿಸಿದ್ದಾನೆ.

ಸಾಹಿತ್ಯದಲ್ಲಿ ಪರಿಣತನಾಗಿದ್ದ ಆತನಿಗೆ ವಿಪರೀತ ಓದುವ ಹುಚ್ಚಿತ್ತು. ಈತನ ಮಾರ್ಗದರ್ಶನ, ಗೆಳೆತನ ಮತ್ತು ಸಹಾಯಕ್ಕಾಗಿ ಅಕ್ಬರ್ ಬಾದಶಹಾ ಹಾತೊರೆದಿದ್ದ. 1580ರಲ್ಲಿ ಕೆಲ ದುಷ್ಕರ್ಮಿಗಳ ಒಳಸಂಚಿನಿಂದ ಅರಮನೆಯೊಳಗೇ ಈ ಮಹಾಪುರುಷನ ಕೊಲೆಯಾಯಿತು.

ಮೊದಲನೇ ಅಲಿಯ ಸಾವಿನ ನಂತರ ಆತನ [illegible] ಮಗ ಎರಡನೇ ಇಬ್ರಾಹಿಂ ಆದಿಲ್ ಶಹಾ

▶▶| 19

ಅನುರಣನ

ಸೂರ್ಯನ ಬೆಳಕಿನ ಕಥೆ



ಡಾ. ಟಿ.ಎಸ್. ಚನ್ನೇಶ್
channeshts@gmail.com

ಸೂರ್ಯನ ಕಾಂತಿಗೆ ಸೂರ್ಯನೇ ಸಾಕ್ಷಿ, ಬೇರೆ ಯಾರಿಲ್ಲ..! ನೀವು ಕೇಳಿರಬಹುದಾದ ಒಂದು ಚಲನಚಿತ್ರದ ಹಾಡಿನ ಸಾಲಿದು. ನಿಜ ಸೂರ್ಯನ ಕಾಂತಿಗೆ ಅವನೇ ಸಾಕ್ಷಿ, ಆದರೆ ಈ ಕಾಂತಿಯ ಕುರಿತು ಒಂದೇ ಸಾಲಿನಲ್ಲಿ ಹೇಳಿರುವ ಗೀತರಚನೆಕಾರ ಬಹಳ ದೊಡ್ಡ ಮಾತನ್ನೇ ಆಡಿದ್ದಾರೆ. ಏಕೆಂದರೆ ಕಾಂತಿಯ ವೈಜ್ಞಾನಿಕ ಅರಿವಿನ ಹಿಂದೆ ಒಂದು ಶತಮಾನಕ್ಕೂ ಹೆಚ್ಚಿನ ಚರ್ಚೆ, ಸಂಶೋಧನೆ ನಡೆದಿದೆ. ಆ ದಿವ್ಯ ತೇಜಸ್ಸು, ಪ್ರಭೆ, ಕಾಂತಿ ಏನೆಂದೆಲ್ಲಾ ಕರೆಯುವ ಆತನ ಮಹಾಬೆಳಕನ್ನು ಅರ್ಥಮಾಡಿಕೊಳ್ಳುವ ಹಿಂದೆ ವಿಜ್ಞಾನಿಗಳ ಬಹುದೊಡ್ಡ ಶ್ರಮ ಇದೆ. ಸೂರ್ಯನು ಹೇಗೆ ಜಗತ್ತಿಗೆ ಇಷ್ಟೆಲ್ಲಾ ಬೆಳಕು ನಿರಂತರವಾಗಿ ಕೊಡುತ್ತಿದ್ದಾನೆ? ಇಷ್ಟೊಂದು ಅಗಾಧವಾದ ಶಕ್ತಿ ಎಲ್ಲಿಂದ ಬರುತ್ತಿದೆ? ನಮ್ಮ ಈ ನೆಲಕ್ಕೆ ನಿರಂತರವಾಗಿ ಹಗಲಿನ ಬೆಳಕಿನ ಗಣಿಯಾಗಿರುವ ಸೂರ್ಯನ ಬಗೆಗೆ ಹತ್ತೊಂಭತ್ತನೇ ಶತಮಾನದ ಮಧ್ಯದಲ್ಲೇ ವಿಜ್ಞಾನಿಗಳು ನಿದ್ದೆಯನ್ನು ಕೆಡಿಸಿ ಕೊಂಡಿದ್ದರು. ಸೈದ್ಧಾಂತಿಕ ಭೌತಶಾಸ್ತ್ರಜ್ಞರೂ, ಭೂಗರ್ಭ ಶಾಸ್ತ್ರಜ್ಞರೂ ಮತ್ತು ಜೀವವಿಕಾಸಶಾಸ್ತ್ರಜ್ಞರೂ ನಿರಂತರವಾದ ಬಿಸಿ ಬಿಸಿ ಚರ್ಚೆಗಳನ್ನು ಮಾಡುತ್ತಲೇ ಇದ್ದರು. ಸರಿಯಾದ ಉತ್ತರಕ್ಕಾಗಿ ಹುಡುಕಾಟ ನಡೆದೇ ಇತ್ತು, ತೀರ ಇತ್ತೀಚಿಗಿನವರೆಗೂ ಸೂರ್ಯನ ಕುರಿತ ಸಂಶೋಧನೆಗಳೂ ಅನೇಕ ಆಶಯಗಳನ್ನು ಹೊತ್ತೇ ಸಾಗುತ್ತಿವೆ.

ಖಗೋಳ ಶಾಸ್ತ್ರಜ್ಞ ಜಾನ್ ಹರ್ಷಲ್ 1833ರಲ್ಲಿ ತನ್ನ ಖಗೋಳ ಶಾಸ್ತ್ರೀಯ ಪ್ರಬಂಧದಲ್ಲಿ ಮೊದಲು ಸೂರ್ಯನ ಬೆಳಕನ್ನು ಕುರಿತು ಚರ್ಚಿಸಿದ್ದರು. ಆಗ ಅವರ ಉದ್ದೇಶ ಕೇವಲ ಮಾನವರ ಜೀವನ ಮೇಲೆ ಸೂರ್ಯನ ಬೆಳಕಿನ ಪ್ರಭಾವಕ್ಕೆ ಮಾತ್ರವೇ ಸೀಮಿತವಾಗಿತ್ತು, ಸೂರ್ಯನ ಕೃಪೆಯಿಲ್ಲದೆ ಭೂಮಿಯ ಮೇಲೆ ಒಂದು ಹುಲ್ಲುಕಡ್ಡಿಯೂ ಅಲ್ಲಾಡುವುದಿಲ್ಲ ಎಂಬ ಮಾತು ಉತ್ಪ್ರೇಕ್ಷೆಯಲ್ಲ, ನಮಗೆ ಬೀಸುವ ಗಾಳಿಯೂ ಸೂರ್ಯನ ಕೃಪೆಯೆ. ಗಿಡಮರಗಳ ಹೂಗಳು ಹಣ್ಣು ತುಂಬುವ, ಆ ಮೂಲಕ ನಮಗೆಲ್ಲಾ ಶಕ್ತಿಯನ್ನು ಕೊಡುವ ಕೆಲಸವೂ ಸೂರ್ಯನ ಸಹವಾಸದಿಂದಲೇ. ನೆಲದ ಮೇಲಿನ ಸಕಲ ಜೀವರಾಶಿಗಳ ಬದುಕೂ ಕೂಡ ಸಾಧ್ಯವಾಗುವುದು ಸೂರ್ಯನಿಂದಲೇ. ಸೂರ್ಯನ ಕೃಪೆಯಿಂದ ನೆಲದ ಮೇಲಣ ಎಲ್ಲವೂ ಸಾಧ್ಯವಾಗುತ್ತಿವೆ.

ಸೂರ್ಯನ ವಯಸ್ಸು?

ಈ ಸೂರ್ಯನ ಬೆಳಗು ಒಂದು ಮಹಾಬೆಳಗು. ಈ ಸೂರ್ಯ ಎಂದಿನಿಂದ ಹೀಗೆ ಬೆಳಗುತ್ತಿದ್ದಾನೆ? ಬೆಳಗುತ್ತಿರುವ ಸೂರ್ಯನ ವಯಸ್ಸೇನು? ಆತನು ಅದು ಹೇಗೆ ಮತ್ತು ಎಲ್ಲಿಯವರೆಗೂ ಬೆಳಗುವನು? ಹೀಗೆ ಕೆಲವು ಮೂಲಭೂತವಾದ ಪ್ರಶ್ನೆಗಳನ್ನು ವೈಜ್ಞಾನಿಕವಾಗಿ ಅರಿಯುವ ಪ್ರಯತ್ನಗಳಾಗಿವೆ. ಈತನ ಬೆಳಗೂ ಮತ್ತು ವಯಸ್ಸೂ ಎರಡೂ ಒಂದೇ ಪ್ರಶ್ನೆಯ ಎರಡು ಮಗ್ಗುಲುಗಳೇ. ಎರಡಕ್ಕೂ ಸಂಬಂಧಗಳಿರುವುದು ಅದಕ್ಕೆ ಕಾರಣ. 19ನೆಯ ಶತಮಾನದ ಆರಂಭದಲ್ಲೇ ಇಂತಹ ಪ್ರಶ್ನೆಗಳ ಉತ್ತರಕ್ಕೆ ಹುಡುಕಾಟದ ಪ್ರಯತ್ನಗಳಾಗಿದ್ದವು. ಹಾಗಾಗಿ ಇವೆಲ್ಲಾ ಸಾಕಷ್ಟು ವಿಚಾರಗಳನ್ನೂ ಚರ್ಚೆಗಳನ್ನೂ ಹುಟ್ಟುಹಾಕಿವೆ. ಅನೇಕ ಸಂಶೋಧನೆಗಳು ಇಡೀ ವಿಜ್ಞಾನದ ಇತಿಹಾಸವನ್ನೇ ಸೃಷ್ಟಿಸಿವೆ; ವಿಜ್ಞಾನದ ಬೆಳವಣಿಗೆಗೆ ಕಾರಣವಾಗಿ, ಹೊಸ ವೈಜ್ಞಾನಿಕ ಶಾಖೆಗಳನ್ನೇ ಹುಟ್ಟು ಹಾಕಿವೆ. ಇವೆಲ್ಲಾ ಒಟ್ಟಾಗಿ ಸೂರ್ಯನಕಥೆ ಕಟ್ಟಲಾಗಿದೆ.

ಸೂರ್ಯನು ಭೂಮಿಯೆಡೆಗೆ ರವಾನಿಸುತ್ತಿರುವ ಶಕ್ತಿಯನ್ನು ಭೂಮಿಯನ್ನು ತಲುಪುವ ಶಕ್ತಿಯ ಪ್ರಮಾಣದಿಂದ ಲೆಕ್ಕಾಚಾರ ಹಾಕಬಹುದು. ಸೂರ್ಯನ ದೀಪ್ತಿ ಅಥವಾ ತೇಜಸ್ಸು ಎಂದು ಕರೆಯುವ ಆತನ ಪ್ರಕಾಶಿಸುವ ಶಕ್ತಿಯನ್ನು ವಯಸ್ಸಿನೊಂದಿಗೆ ಗುಣಿಸಿದರೆ ಒಟ್ಟು ಶಕ್ತಿಯನ್ನು ಲೆಕ್ಕಾಚಾರ ಹಾಕಬಹುದು. ಸೂರ್ಯನು ಹಳೆಯದಾದಷ್ಟು ಆತನಿಂದ ಹೆಚ್ಚಿನ ಬೆಳಕು ಭೂಮಿಗೆ ಹರಿದಿದೆ ಎಂದೂ ಅಥವಾ ಹೆಚ್ಚು ಬೆಳಕು ಭೂಮಿಗೆ ಬಂದಿಷ್ಟೂ ಆತ ದೊಡ್ಡವನೆಂದೂ ತಿಳಿಯಬಹುದು.

ಸೌರವಯಸ್ಸಿನ ಅಳತೆಯ ಅಜುಮಾಸಿನ ಸಂಘರ್ಷಗಳು

ಹತ್ತೊಂಭತ್ತನೆಯ ಶತಮಾನದ ಭೌತಶಾಸ್ತ್ರಜ್ಞರು ಸೂರ್ಯನ ಶಕ್ತಿಯ ಮೂಲವನ್ನು ಗುರುತ್ವವೆಂದು ತಿಳಿದಿದ್ದರು. ಜರ್ಮನಿಯ ಹೆಸರಾಂತ ವಿಜ್ಞಾನಿ ಹರ್ಮನ್ ವಾನ್ ಹೆಲ್‌ಮ್ಹೋಲ್ಟ್ಜ್ 1854 ರಲ್ಲಿನ ತನ್ನ ಭಾಷಣವೊಂದರಲ್ಲಿ ಸೂರ್ಯಶಕ್ತಿಗೆ ಗುರುತ್ವ ಕಾರಣವೆಂದು ಸಾರಿದರು. ಅದಕ್ಕೂ ಸ್ವಲ್ಪ ಮೊದಲೇ 1840 ರಲ್ಲಿ ಮತ್ತೊಬ್ಬ ಜರ್ಮನಿಯ ಭೌತಶಾಸ್ತ್ರಜ್ಞ ಮೇಯರ್ ಮತ್ತು ವಾಟರ್‌ಸನ್ ಅವರೂ ಗುರುತ್ವದ ಶಕ್ತಿಯು ಶಾಖವಾಗಿ ಬದಲಾಗುವುದಕ್ಕೆ ಕಾರಣವೆಂದಿದ್ದರು.

ಜೀವಶಾಸ್ತ್ರಜ್ಞರು ಮತ್ತು ಭೂಗರ್ಭಶಾಸ್ತ್ರಜ್ಞರು ಸೌರಕಾಂತಿಯ ಪರಿಣಾಮವನ್ನು ಬೆನ್ನು ಹತ್ತಿದ್ದರೆ, ಭೌತಶಾಸ್ತ್ರಜ್ಞರು ಶಕ್ತಿಯ ಮೂಲಕ್ಕೇ ಕೈಹಾಕಿದ್ದರು. 1859ರಲ್ಲಿ ಚಾರ್ಲ್ಸ್ ಡಾರ್ವಿನ್ ಅವರ "ನೈಸರ್ಗಿಕ ಆಯ್ಕೆಯ ಮೂಲಕ ಜೀವಸಂಕುಲಗಳ ವಿಕಾಸ" ಪುಸ್ತಕದ ಮೊದಲ ಆವೃತ್ತಿಯಲ್ಲಿ ಭೂಮಿಯ ವಯಸ್ಸನ್ನು ಅಂದಾಜು ಮಾಡಿ ಪ್ರಕಟಿಸಿದ್ದರು. ದಕ್ಷಿಣ ಇಂಗ್ಲೆಂಡಿನ ಒಂದು ಕಣಿವೆಯ ಸವಕಲಾಗುವಿಕೆಯ ಆಧಾರದ ಮೇಲೆ ಅಲ್ಲಿನ ಕಣಿವೆಯು ಬಯಲಾಗುವಿಕೆಯ ಅಂದಾಜು ಮಾಡಿ ವಿಶ್ಲೇಷಿಸಿ ನಿರ್ಧಾರಕ್ಕೆ ಬಂದಿದ್ದರು. ಅದರಂತೆ ಜೀವಿಗಳು ವಿಕಾಸಗೊಳ್ಳುವ ಕಾಲವೂ ದೀರ್ಘವಾದುದೆಂದೂ ಹೇಳಿದ್ದರು. ವಿಲಿಯಂ ಹರ್ಷಲ್ ಅವರ ಜೀವಿಗಳ ಬದುಕಿಗೆ ಸೂರ್ಯನ ಶಕ್ತಿಯೇ ಕಾರಣವೆಂಬ ಹೇಳಿಕೆಯಿಂದ ಡಾರ್ವಿನ್ ಅವರೂ ಶಕ್ತಿಯ ಬಿಡುಗಡೆಯ ಬಗೆಗೂ ಗಮನ ಹರಿಸಿದ್ದರು.

ಆದರೆ ಇಲ್ಲೊಂದು ಚಮತ್ಕಾರವೇ ನಡೆಯಿತೆನ್ನಬೇಕು. ಏಕೆಂದರೆ ಆ ಕಾಲಕ್ಕಾಗಲೇ ಸುಪ್ರಸಿದ್ಧರಾದ ಲಾರ್ಡ್ ಕೆಲ್ವಿನ್ ಅವರು ಡಾರ್ವಿನ್‌ರ ವಾದವನ್ನು ಒಪ್ಪಲು ಸಿದ್ಧರಿರಲಿಲ್ಲ, ಬದಲಾಗಿ ಸಾಕಷ್ಟು ಪ್ರತಿರೋಧವನ್ನು ಒಡ್ಡಿದರು. ಕೆಲ್ವಿನ್ ಥರ್ಮೋಡೈನಮಿಕ್ ನಿಯಮಗಳ ಮೂಲಕ, ಉಷ್ಣತೆಯ ಅಳತೆಗೋಲಿನ ಮೂಲಕ ತುಂಬಾ ಹೆಸರುವಾಸಿಯಾಗಿದ್ದರು. ಅವರು ನಿರಂತರವಾಗಿ ಡಾರ್ವಿನ್‌ರನ್ನು ವಿರೋಧಿಸುತ್ತಿದ್ದರು. ಇದು ಡಾರ್ವಿನ್ ಅವರಿಗೆ ಎಷ್ಟು ಭಯವನ್ನು ತಂದೊಡ್ಡಿತ್ತೆಂದರೆ ತಮ್ಮ ಜೀವಸಂಕುಲಗಳ ವಿಕಾಸದ ಪುಸ್ತಕದ ಮುಂದಿನ ಆವೃತ್ತಿಯಲ್ಲಿ ಕಾಲದ ಅಳತೆಯ ವಿಚಾರವನ್ನೇ ಕೈಬಿಟ್ಟರು. ಕೆಲ್ವಿನ್ ಕೂಡ ಹೆಲ್‌ಮ್ಹೋಲ್ಟ್ಜ್ ಅವರಂತೆ ಗುರುತ್ವವನ್ನೇ ನಂಬಿದ್ದರು. ಅದಕ್ಕಷ್ಟು ಹೊರ ಜಗತ್ತಿನಿಂದ ಬರುವ ಉಲ್ಕೆಗಳ ಸಹಕಾರವನ್ನೂ ಬೆಂಬಲಿಸುವರಾಗಿದ್ದರು. ಕೆಲ್ವಿನ್ ತಮ್ಮ ಪ್ರಭಾವದಿಂದ ಒಂದು ನಿರ್ಣಯವನ್ನೇ ಮಾಡಿದರು. ಅದರಂತೆ ಒಂದು ವೇಳೆ ಸೂರ್ಯನಲ್ಲಿ ಏನಾದರೂ ಶಕ್ತಿಯು ಬರುತ್ತಿದ್ದರೆ ಅದು ಕೇವಲ ರಸಾಯನಿಕ ಪ್ರಕ್ರಿಯೆಗಳಿಂದ ಬರಬೇಕು. ಹಾಗಾಗಲು ಅಲ್ಲಿ ವಸ್ತುಗಳ ನಡುವಣ ಮಾತ್ರವೇ ಪ್ರಕ್ರಿಯೆಯಾಗಬೇಕು. ಅದು ಸಾಕಷ್ಟು ಕಾಲ ಬಾಳದಿರುವುದರಿಂದ ಉಲ್ಕೆಗಳ ಕುರಿತೂ ಆಲೋಚಿಸಲು ಸಾಧ್ಯವಿದೆ. ಆದ್ದರಿಂದ ಸೂರ್ಯನ ಮೇಲೆ ಬೀಳುವ ಉಲ್ಕೆಗಳೂ ಶಕ್ತಿಯಲ್ಲಿ ಪಾತ್ರವಹಿಸುವ ಬಗೆಗೆ ಅನುಮಾನಗಳಿವೆ ಎಂದಿದ್ದರು. ಹಾಗೆಯೇ ಭೂಮಿಯ ವಯಸ್ಸನ್ನು ಅಂದಾಜಿಸಿದ ಡಾರ್ವಿನ್ ಬಗೆಗೆ ಕೆಲ್ವಿನ್ ಅವರಿಗೆ ನಂಬಿಕೆಯಿಲ್ಲದಿದ್ದರಿಂದ ಅವರ ಜೀವಿಗಳ ನೈಸರ್ಗಿಕ ಆಯ್ಕೆಯಲ್ಲಿನ ವಿಕಾಸದ ಕಾಲಮಾನವನ್ನೂ ಅಲ್ಲಗಳೆದಿದ್ದರು. ಲಾರ್ಡ್ ಕೆಲ್ವಿನ ಅವರ ಲೆಕ್ಕಾಚಾರದಂತೆ ಸೂರ್ಯನಷ್ಟೇ ದ್ರವ್ಯರಾಶಿ ಮತ್ತು ಗಾತ್ರದ ಬೇರೊಂದು ವಸ್ತುವಿನ ಗುರುತ್ವವನ್ನೂ ಗಮನದಲ್ಲಿಟ್ಟುಕೊಂಡು ಉಂಟಾಗಬಹುದಾದ ಶಕ್ತಿಯನ್ನು ಲೆಕ್ಕಾಚಾರ ಹಾಕಿದ್ದರು. ಇದು ಕೇವಲ ಸುಮಾರು 30 ದಶಲಕ್ಷ ವರ್ಷಗಳಷ್ಟು ಮಾತ್ರವೇ ಸೂರ್ಯನ ಆಯಷ್ಯ ಎಂಬುದಾಗಿತ್ತು, ಈ ಮೂಲಕ ಸಾಧ್ಯವಾಗಬಹುದಾದ ರಸಾಯನಿಕ ಶಕ್ತಿಯು ತುಂಬ ಕಡಿಮೆ. ಹಾಗಾಗಿ ಅವರ ಲೆಕ್ಕಾಚಾರವೇ ತಪ್ಪಾಗಿತ್ತು.

ಹಾಗಾದರೆ ಯಾರು ಸರಿ?

ಹತ್ತೊಂಭತ್ತನೆಯ ಶತಮಾನದಲ್ಲಿ ಯಾರನ್ನು ಕೇಳುತ್ತೀರಿ? ಎನ್ನುವುದರ ಮೇಲೆ ಸೂರ್ಯನ ಆಯುಷ್ಯ ನಿರ್ಧರಿತವಾಗುತ್ತಿತ್ತು, ಏಕೆಂದರೆ ಅಕ್ಷರಮಟ್ಟಿಗೆ ಲೆಕ್ಕಾಚಾರಗಳಾಗುತ್ತಿದ್ದವು. ಸೈದ್ಧಾಂತಿಕ ಭೌತಶಾಸ್ತ್ರಜ್ಞರು ಒಂದು ರೀತಿಯಲಲ್ಲೂ, ಭೂಗರ್ಭಶಾಸ್ತ್ರಜ್ಞರು ಮತ್ತೊಂದು ಬಗೆಯಲ್ಲೂ, ಜೀವಶಾಸ್ತ್ರಜ್ಞರು ಮಗದೊಂದು ಬಗೆಯಲ್ಲೂ ಹೇಳುತ್ತಿದ್ದರು. ಭೌತಶಾಸ್ತ್ರಜ್ಞರಂತೂ ಶಕ್ತಿ ಮೂಲವನ್ನೇ ನಂಬಿದ್ದರು. ಆ ಕಾಲದಲ್ಲಿ ತಿಳಿದಿದ್ದೆಂದರೆ ಅದು ಕೇವಲ ಹತ್ತಾರು ದಶಲಕ್ಷಗಳಷ್ಟು ಮಾತ್ರವೇ ಹಿರಿಯನಾದ ಸೂರ್ಯನಾಗುತ್ತಿದ್ದ. ಭೂಗರ್ಭಶಾಸ್ತ್ರಜ್ಞರು ಮತ್ತು ಜೀವಶಾಸ್ತ್ರಜ್ಞರಂತೂ ನೂರಾರು ದಶಲಕ್ಷಗಳ ಹಳಬನಾದ ಸೂರ್ಯನೆಂದೇ ವಾದಿಸುತ್ತಿದ್ದರು. ಅವರಿಗಿದ್ದ ಅನುಮಾನಗಳೆಂದರೆ ಭೂಮಿಯ ಮತ್ತು ಜೀವಿಯ ಬದಲಾವಣೆಗಳು ತೆಗೆದುಕೊಳ್ಳಬಹುದಾದ ಸಮಯದ ಕಲ್ಪನೆಗಳು. ಹಾಗಾಗಿ ಈ ಪ್ರಶ್ನೆಗಳು ಭೌತಶಾಸ್ತ್ರಜ್ಞರ ಮತ್ತು ಖಗೋಳಶಾಸ್ತ್ರಜ್ಞರಲ್ಲದೇ ಜೀವಶಾಸ್ತ್ರಜ್ಞರು ಮತ್ತು ಭೂಗರ್ಭಶಾಸ್ತ್ರಜ್ಞರನ್ನೂ ಕಾಡುತ್ತಿದ್ದವು. ಇಂದು ಲಾರ್ಡ್ ಕೆಲ್ವಿನ್ನರು ತಪ್ಪು ಎಂಬುದು ಸಾಬೀತಾಗಿದೆ. ಜೀವಶಾಸ್ತ್ರಜ್ಞರು ಮತ್ತು ಭೂಗರ್ಭಶಾಸ್ತ್ರಜ್ಞರು ಸರಿಯಾದ ಮಾರ್ಗದಲ್ಲಿಯೇ ಆಲೋಚಿಸಿದ್ದರೂ ಎಂಬುದೂ ತಿಳಿದು, ಸೂರ್ಯನು ಸುಮಾರು 4.6 ದಶಲಕ್ಷ ಹಳಬನೆಂಬುದಾಗಿ ಉಲ್ಕೆಗಳ ವಿಕಿರಣಗಳ ಅಧ್ಯಯನದಿಂದ ಲೆಕ್ಕಾಚಾರ ಹಾಕಲಾಗಿದೆ.

ಲಾರ್ಡ್ ಕೆಲ್ವಿನ್ನರು ಸೋತದ್ದೆಲ್ಲಿ ಎಂಬುದು ಕುತೂಹಲಕರ. ಹೇಗೆಂದರೆ ನೀವು ನಿಮ್ಮ ಕಂಪ್ಯೂಟರ್ ಮುಂದೆ ಕುಳಿತಾಗ ನಿಮ್ಮ ಗೆಳೆಯರನ್ನು ಕಂಪ್ಯೂಟರ್‌ನ ಆಯುಷ್ಯವನ್ನು ಕೇಳಿ. ಅವರು ಸುಮಾರಾಗಿ ಅದರಲ್ಲಿ ಬಳಸುವ ಬ್ಯಾಟರಿಯ ಆಯುಷ್ಯನ್ನು ಹೇಳಿಯಾರು. ಆದರೆ ನೀವು ಅದಕ್ಕೆ ವಿದ್ಯುತ್ತನ್ನು ಅಳವಡಿಸಿಕೊಂಡು ಬಳಸುವಾಗ ಅದರ ಕಾಲ ಉದ್ದವಾಗುವ ಬಗೆಗೆ ನಿಮ್ಮ ಗೆಳೆಯರು ಹೇಗೆ ತಿಳಿದಾರು ಅಲ್ಲವೇ? ಕೆಲ್ವಿನ್ನರು ಎಡವಿದ್ದು ಹೀಗೆ. ಆಗಿನ್ನೂ ಭೌತಶಾಸ್ತ್ರಜ್ಞರಿಗೆ ವಿಕಿರಣಗಳ ಮಾಹಿತಿಯಿರಲಿಲ್ಲ, ನ್ಯೂಕ್ಲಿಯಾರ್ ದ್ರವ್ಯರಾಶಿಯಿಂದ ಶಕ್ತಿಹೊಮ್ಮುವ ಬಗೆಗೂ ಊಹೆಗಳಿರಲಿಲ್ಲ, ಅದೇನೇ ಆದರೂ ಕೆಲ್ವಿನ್ ಮತ್ತವರ ಸಹಚರರ ಅಮೂಲ್ಯ ಕೊಡುಗೆಯೆಂದರೆ ಖಗೋಳಶಾಸ್ತ್ರ ಭೂಗರ್ಭಶಾಸ್ತ್ರ ಮತ್ತು ಜೀವಶಾಸ್ತ್ರಗಳ ಸಂಶೋಧನೆಯ ಫಲಿತಗಳು ನಿಖರವಾಗಿದ್ದು ಮೂಲಭೂತ ಭೌತಶಾಸ್ತ್ರೀಯ ನಿಯಮಗಳಿಗೆ ಬದ್ಧವಾಗಿರಬೇಕೆಂಬುದರ ಒತ್ತಾಸೆಯಾಗಿದೆ.

ಉತ್ತರಗಳ ಇಣುಕುನೋಟ

1896ರಲ್ಲಿ ಸೈದ್ಧಾಂತಿಕ ಭೌತಶಾಸ್ತ್ರಜ್ಞರ ಮತ್ತು ಪ್ರಯೋಗವಾದಿ ಜೀವಶಾಸ್ತ್ರಜ್ಞರ ನಡುವಿನ ಜಗಳಗಳಲ್ಲಿ ಮಹತ್ತರ ತಿರುವು ಆಯಿತು. ಹೆನ್ರಿ ಬೆಕೆರಲ್ ಅವರು ಕ್ಷ-ಕಿರಣ ಕುರಿತ ತಮ್ಮ ಪ್ರಯೋಗಗಳಲ್ಲಿ ಯುರೇನಿಯಂ ಸಂಗ್ರಹಿಸಿಟ್ಟ ತಾಟುಗಳ ಬಳಿ ಕೆಲವು ಫೋಟೊಗ್ರಾಫಿಕ್ ಪ್ಲೇಟುಗಳನ್ನೂ ಕಪ್ಪು ಕಾಗದದಿಂದ ಮುಚ್ಚಿಟ್ಟಿದ್ದರು. ಆಗ ಪ್ಯಾರಿಸ್‌ನಲ್ಲಿ ಬಿಸಿಲೇರಿದ ಕಾರಣ ಫೋಟೊಗ್ರಾಫಿಕ್ ಪ್ಲೇಟುಗಳನ್ನು ಸೂರ್ಯರಶ್ಮಿಗೆ ಒಡ್ಡಲಾಗದ ಕಾರಣದಿಂದ ಹಾಗೇ ಇಟ್ಟಿದ್ದರು. ಆದರೊಂದು ಪವಾಡವಾಗಿತ್ತು, ಫೋಟೊಗ್ರಾಫಿಕ್ ಪ್ಲೇಟುಗಳ ಮೇಲೆ ಯೂರೇನಿಯಂ ಹರಳುಗಳ ಚಿತ್ರ ಮೂಡಿತ್ತು! ಇದೊಂದು ನೈಸರ್ಗಿಕ ವಿಕಿರಣವಾಗಿದ್ದು ಯೂರೇನಿಯಂನಿಂದ ಹೊರಹೊಮ್ಮಿದ ಬಗೆಗೆ ಹೆನ್ರಿ ಬೆಕೆರಲ್ ಅನ್ವೇಷಿಸಿದ್ದರು. ಇದಕ್ಕೊಂದು ಪುಷ್ಟಿ ಬಂದದ್ದು 1903ರಲ್ಲಿ, ಆಗ ಪಿಯರಿ ಕ್ಯೂರಿ ಅವರು ತಮ್ಮ ಕಿರಿಯ ಸಹಾಯಕ ಆಲ್ಬರ್ಟ್ ಲಬೋರ್ಡ್ ಅವರ ಜತೆಗೂಡಿ ರೇಡಿಯಂ ನಿರಂತರವಾಗಿ ಶಾಖವನ್ನು ಉತ್ಪಾದಿಸುವ ಬಗೆಗೆ ಪ್ರಕಟಿಸಿದ್ದರು. ಈ ಅನ್ವೇಷಣೆಯ ಮಹತ್ವವೆಂದರೆ ಮೊದಲ ಬಾರಿಗೆ ವಸ್ತುವೊಂದು ತನ್ನ ಸುತ್ತಲ ಪರಿಸರದ ಉಷ್ಣತೆಯನ್ನು ಕಡಿಮೆ ಮಾಡದೆ (ಅಂದರೆ ಹೊರಗಿನ ಶಾಖವನ್ನು ಹೀರಿಕೊಳ್ಳದೆ, ಸ್ವಂತವಾಗಿ) ಶಾಖವನ್ನು ಹೊರಸೂಸುವದಾಗಿತ್ತು, ಆಗ ತಕ್ಷಣವೇ ವಿಕಿರಣವು ಸೂರ್ಯನ ಶಾಖದ ಮೂಲವೆಂದು ಅರಿವಾಯಿತು.

ಆಗ ಪ್ರಾಯೋಗಿಕ ಭೌತಶಾಸ್ತ್ರದ ಮಹತ್ವದ ವಿಜ್ಞಾನಿ ಅರ್ನೆಸ್ಟ್ ರುದರ್‌ಫೋರ್ಡ್ ವಿಕಿರಣಕಾರಕ ವಸ್ತುಗಳಿಂದ ಹೊರಸೂಸಿದ ಆಲ್ಫಾ ಕಣಗಳಿಂದ ಯಥೇಚ್ಛ ಶಕ್ತಿ ಬರುವುದೆಂದು ಕಂಡುಹಿಡಿದ್ದಿದ್ದರು. ಇದು ಸಾಕಷ್ಟು ಶಕ್ತಿಯನ್ನು ಹೊರಸೂಸುವ ಕಾರಣ ಜೀವಿಗಳು ಬಹುಕಾಲ ಪಡೆಯಬಲ್ಲವಾಗಿದ್ದು ಅದರಿಂದ ಜೀವಿಶಾಸ್ತ್ರಜ್ಞರು ಊಹಿಸಿದ್ದ ವಿಕಾಸ ಕಾಲ ದೊಡ್ಡದಿರುವ ಬಗೆಗೆ ನಂಬಿಕೆಗಳು ಬರತೊಡಗಿದವು. ಇದು ಅಷ್ಟೇ ಅಲ್ಲದೇ ವಿಕಿರಣಗಳ ಮೂಲಕ ಶಕ್ತಿಯ ವಿಕಾಸ ಬಗ್ಗೆ ವಿಶ್ವಾಸ ಮೂಡಿ ಸೈದ್ಧಾಂತಿಕ ಲೆಕ್ಕಾಚಾರಗಳಿಂದ ಪ್ರಾಯೋಗಿಕ ಮಾಹಿತಿಗಳ ಕಡೆಗೆ ವಿಜ್ಞಾನದ ನಿಲುವು ವಾಲತೊಡಗಿತು. ಇದು ವಿಕರಣ ಸಾಧ್ಯತೆಯ ಶಕ್ತಿಯ ಉಗಮವನ್ನು ಸೂರ್ಯನಲ್ಲೂ ಕಂಡುಕೊಳ್ಳುವ ಮಹತ್ತರ ತಿರುವು ಪಡೆಯಲಾರಂಭಿಸಿತು. ಇದರಿಂದ ಸೈದ್ಧಾಂತಿಕ ವಿಚಾರಗಳೇನೋ ತಾತ್ಕಾಲಿಕವಾಗಿ ಹಿಂದೆ ಸರಿದವು ಆದರೆ ಹೊಸ ಹೊಸ ಖಗೋಳ ಅಧ್ಯಯನಗಳು ಸೂರ್ಯನಲ್ಲಿ ಸಾಕಷ್ಟು ಬೈಜಿಕ ವಸ್ತುಗಳಿಲ್ಲ ಎಂಬುದನ್ನು ಮನವರಿಕೆ ಮಾಡಿಕೊಟ್ಟರು. ಅಲ್ಲದೇ ಸೂರ್ಯನಲ್ಲಿರುವುದು ಬಹುಶಃ ಅನಿಲರೂಪದ ಜಲಜನಕವೆಂಬುದನ್ನೂ ಅವರು ಪ್ರಕಟಿಸಿದರು. ಅದೂಅಲ್ಲದೆ ಹೊರಸೂಸುವ ಶಕ್ತಿಯು ನಕ್ಷತ್ರೀಯ ಶಾಖದ ಮೇಲೆ ಅವಲಂಬಿಸದೆ, ನಕ್ಷತ್ರಗಳ ಒಳಭಾಗದ ಶಾಖದ ಸೂಕ್ಷ್ಮತೆಯ ಮೇಲೆ ಅವಲಂಬಿಸಿರುತ್ತದೆ ಎನ್ನುವುದೂ ತಿಳಿವಿಗೆ ಬಂತು. ಇದರಿಂದ ವಿಕಿರಣವಲ್ಲದ ಹೊರಸೂಸುವ ಬೈಜಿಕ ಶಕ್ತಿಯೊಂದು ಇದೆ ಎಂಬ ಅರಿವು ಉಂಟಾಗಿತ್ತು.

ಅಂತಿಮ ಫಲದ ಹೆಜ್ಜೆ ಗುರುತುಗಳು

ಮತ್ತೊಂದು ಮೂಲಭೂತ ಹೆಗ್ಗುರುತು ತಾನಾಗಿಯೇ ಆಯಿತು. 1905ರಲ್ಲಿ ಆಲ್ಬರ್ಟ್ ಐನ್‌ಸ್ಟೀನರ ಸುಪ್ರಸಿದ್ಧ ಸಮೀಕರಣ $E = mc^2$ ದ್ರವ್ಯರಾಶಿ ಮತ್ತು ಶಕ್ತಿಯನ್ನು ಕುರಿತದ್ದಾಗಿತ್ತು, ಅವರ ವಿಶೇಷ ಸಾಪೇಕ್ಷ ಸಿದ್ಧಾಂತದಿಂದ ಹೊರಹೊಮ್ಮಿದ ವಿಚಾರವಾಗಿದ್ದ ಅದರಿಂದ ಇಡೀ ಭೌತಶಾಸ್ತ್ರೀಯ ಸಂಗತಿಗಳೇ ಊಹಿಸಲಾರದಂತೆ ಬದಲಾದವು. ಅವರ ಸಮೀಕರಣದಿಂದಾಗಿ ಅತೀ ಸಣ್ಣಕಣವೊಂದು ಅಪಾರ ಶಕ್ತಿಯನ್ನು ಹೊಂದಿರುವ ಬಗೆಗೆ ತಿಳಿವು ಮೂಡಿತು. ಹಾಗಾಗಿ ದ್ರವ್ಯರಾಶಿ ಮತ್ತು ಶಕ್ತಿಯ ಸಂಬಂಧಗಳು ಅರ್ಥವಾಗತೊಡಗಿದವು. ನಿಮಗನ್ನಿಸಬಹುದು ಇದಕ್ಕೂ ಸೌರ ಶಕ್ತಿಗೂ ಸಂಬಂಧವೇನು? ಖಂಡಿತಾ ಇದೆ. ಖಭೌತಶಾಸ್ತ್ರಜ್ಞರು ನಕ್ಷತ್ರಗಳೊಳಗಿನ ಶಕ್ತಿಯ ಅರಿಯದ ನಿಗೂಢವನ್ನು ವಿವರಿಸಲು ಬಳಸುವ ಬಗೆಗೆ ಆಲೋಚಿದರು. ಹೆನ್ರಿ ನೋರಿಸ್ ರಸೆಲ್ ಎಂಬ ಅಮೆರಿಕದ ಖಭೌತಶಾಸ್ತ್ರಜ್ಞರು 1919ರಲ್ಲಿ ನಕ್ಷತ್ರಗಳ ಶಕ್ತಿಯ ಸ್ವಭಾವದ ಬಗೆಗೆ ಒಂದಷ್ಟು ತಿಳಿವನ್ನು ಹಂಚಿದರು. ಅವರ ಬಹುಮುಖ್ಯ ವಿಚಾರವೆಂದರೆ ನಕ್ಷತ್ರಗಳೊಳಗಣ ಅಪಾರವಾದ ಶಾಖವನ್ನು ಕುರಿತಾಗಿತ್ತು.

1920ರಲ್ಲಿ ಇಡೀ ಸಂಶೋಧನೆಯ ಒಗಟಿನ ಉತ್ತರದ ಸಾಧ್ಯತೆಯನ್ನು ಪತ್ತೆ ಹಚ್ಚಲಾಯಿತು. ಜಲಜನಕ ಮತ್ತು ಹೀಲಿಯಂಗಳ ಪರಮಾಣುಗಳ ನಿಖರವಾದ ದ್ರವ್ಯರಾಶಿಯನ್ನು ಕಂಡುಹಿಡಿದು, ಹೀಲಿಯಂ ನಾಲ್ಕು ಜಲಜನಕಗಳಿಗೆ ಸಮ ಎಂಬುದು ಗೊತ್ತಾಯಿತು. ಹೀಗೆಯೇ ಜಲಜನಕವು ಹೀಲಿಯಂ ಆಗಿ ಬದಲಾಗುವ ರೂಪದಿಂದಲೇ ಶಕ್ತಿಯು ಹುಟ್ಟುತ್ತಿರಬಹುದೆಂಬ ವಿಶ್ವಾಸ ಮೂಡಿತು.

ಮಹಾ ಬೆಳಗಿನ ಬೆರಗು ಅರಿವಾಯಿತು

ಮುಂದಿನದೇನಿದ್ದರೂ ಶಾಸ್ತ್ರೀಯ ಭೌತಶಾಸ್ತ್ರದ ಅರಿವಿಗೆ ಸಂಬಂಧಿಸಿಲ್ಲದ್ದು. ಏಕೆಂದರೆ ಸಾಮಾನ್ಯ ಭೌತಶಾಸ್ತ್ರದ ನಿಯಮಗಳಂತೆ ಒಂದೇ ವಿದ್ಯುತ್ ಲಕ್ಷಣಗಳ ಕಣಗಳು ಪರಸ್ಪರ ವಿರೋಧವನ್ನು ಒಡ್ಡುತ್ತವೆ. ಅದಕ್ಕೆ ಕೆಲವೊಮ್ಮೆ ಶಾಸ್ತ್ರೀಯ ವಿವರಕ್ಕೆ ಒಗ್ಗದ್ದು, ನೈಜವಾಗಿಯೂ

▶▶| 19



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಪುಂಡರೀಕ ವರದೇ ಹರಿ ವಿಠಲ್

ಇಂದು ಪಂಡರಾಪುರಕ್ಕೆ ಹೋದರೆ ಅಲ್ಲಿ ವಿಠೋಬನ ದರ್ಶನವನ್ನು ನೀವು ಎಲ್ಲಿಯೋ ನಿಂತು ಮಾಡುವಂತೇನಿಲ್ಲ. ನೇರವಾಗಿ ಗರ್ಭಗುಡಿಯ ಒಳಕ್ಕೆ ಹೋಗಿ ಸೊಂಟದ ಮೇಲೆ ಕೈಗಳನ್ನಿಟ್ಟುಕೊಂಡು ನಿಂತಿರುವ ವಿಠೋಬನ ಪಾದಗಳನ್ನು ಮನಸೋ ಇಚ್ಛೆ ಮುಟ್ಟಿ ಹಿಡಿದು, ಹೃದಯದುಂಬಿ ತಲೆಯಿಟ್ಟು ನಮಿಸಿ ಬರಬಹುದು. ಅಲ್ಲಿನ ಜನಿವಾರ ತೊಟ್ಟ ಬ್ರಾಹ್ಮಣ ಪುರೋಹಿತರ ಕೆಲಸವೇನೆಂದರೆ ವಿಠಲನಿಗೆ ಅಭಿಷೇಕಿಸಿ, ಗಂಧನಾಮ, ಹೂವಿಟ್ಟು ಅಲಂಕರಿಸಿ ತಮ್ಮ ಪಾಲಿಗೆ ತಾವು ಪೂಜಾದಿಗಳನ್ನು ಮಾಡಿಕೊಂಡಿರುವುದು. ಪಂಡರಾಪುರದ ವಿಠಲನ ದೇವಸ್ಥಾನದಲ್ಲಿರುವ ಎಲ್ಲಾ ಇತರ ದೇವರುಗಳ ಗುಡಿಗಳಲ್ಲೂ ಇದೇ ಪದ್ಧತಿ. ಜಾತಿ, ಧರ್ಮ ಭೇದಗಳಿಲ್ಲದೇ ಒಳಗೆ ಹೋಗಿ ತಮ್ಮ ಪ್ರೀತಿಯ ದೇವರನ್ನು ಸ್ಪರ್ಶಿಸಬಹುದು. ಇದೇ ರೀತಿಯ ಪದ್ಧತಿಯು ಕೆಲವೇ ದೇವಸ್ಥಾನಗಳಲ್ಲಿದೆ. ಇಂತಹ ಪದ್ಧತಿಗಳಿಗೆ ಕಾರಣವೆಂದರೆ ಬ್ರಾಹ್ಮಣೇತರ ಕುಲಗಳಿಂದ, ಸಾಮಾನ್ಯ ವರ್ಗಗಳಿಂದ ಬಂದಿರುವ ಸಾಧಾರಣ ವ್ಯಕ್ತಿಗಳು ಸಂತ ಮಹಾಂತರಾಗಿ ಆ ಕ್ಷೇತ್ರಗಳಲ್ಲಿ ಬೆಳೆದಿರುವುದು. ಆ ಕ್ಷೇತ್ರಕ್ಕೆ ಮಾನ್ಯತೆಯನ್ನು ಗಳಿಸಿಕೊಟ್ಟಿರುವುದು.

ಪುಂಡರೀಕ ವರದೇ ಹರಿ ವಿಠಲ್ ಜ್ಞಾನೇಶ್ವರ್ ತುಕಾರಾಂ

ಪಂಡರಾಪುರದಲ್ಲಿ ಪುಂಡರೀಕ ವರದೇ ಹರಿ ವಿಠಲ್ ಜ್ಞಾನೇಶ್ವರ್ ತುಕಾರಾಂ ಎಂದು ಘೋಷಿಸುತ್ತಾರೆ. ವಿಠೋಬನಿಗೆ ಮಾನ್ಯತೆಯೊದಗಿದ್ದು ಅವನ ಮಂದಿರದಲ್ಲಿ ಪೂಜೆ ಮಾಡಿಕೊಂಡಿದ್ದ ಪುರೋಹಿತರಿಂದಲ್ಲ. ಹಾಗೆ ನೋಡಲು ಹೋದರೆ ಯಾವುದೇ ದೇವಸ್ಥಾನದಲ್ಲಿ ಪುರೋಹಿತರಿಂದ ದೇವರಿಗೆ ಮಹತ್ವ ಬರುವುದಿಲ್ಲ. ಆ ದೇವಾಲಯಕ್ಕೆ ನಡೆದುಕೊಳ್ಳುವ ಯಾವುದೋ ಸಂತರಿಂದ ಮಹಾತ್ಮರಿಂದ ದೇವಸ್ಥಾನದ ಕೀರ್ತಿಯ ಕಲಶ ಥಳಿಸಿರುತ್ತದೆ. ಆದರೆ ಆ ಸಂತರಿಗೆ ಸಾಮಾನ್ಯವಾಗಿ ತಮ್ಮ ಬದುಕಿನ ಅವಧಿಯಲ್ಲಿ ಸರಳ ಸುಂದರವಾಗಿ ಜೀವನ ನಡೆಸಲು ಸುಲಭವೇನೂ ಆಗಿರುವುದಿಲ್ಲ. ಆದರೆ ಅವರು ಸತ್ತ ಮೇಲಂತೂ ಅವರನ್ನು ಟೀಕಿಸುತ್ತಿದ್ದ ವಿಷಯಗಳೆಲ್ಲವೂ ಮಹತ್ವದ್ದೆಂದು ಅರಿವಾಗುತ್ತದೆ. ಯಾವುದನ್ನು ದೂರುತ್ತಿದ್ದರೋ ಆ ವಿಷಯಗಳೆಲ್ಲವೂ ಆಯಾ ಸಂತರ ವಿಶಿಷ್ಟವಾದ ವಿಚಾರಗಳು ಎಂದು ಅರಿವಾಗುತ್ತದೆ. ಒಟ್ಟಿನಲ್ಲಿ ಬದುಕಿದ್ದಾಗ ಬದುಕು ಹೇಗಿರುತ್ತದೋ, ಸತ್ತ ಮೇಲಂತೂ ದೈವತಮವಾಗಿರುತ್ತದೆ. ಆದರೆ ಆ ಸಂತರು ನಿಜಕ್ಕೂ ಸಂಘರ್ಷದ ಬದುಕನ್ನು, ಮಹತ್ವದ ನಿಲುವುಗಳನ್ನು ತಳೆದುಕೊಂಡು, ನಿಷ್ಪಕ್ಷಪಾತ ಒಲವನ್ನು ತೋರಿಕೊಂಡು, ನಿಷ್ಠೂರ ಧೋರಣೆಗಳಿಂದ ಬದುಕಿರುತ್ತಾರೆ. ಅವುಗಳನ್ನು ವೈಭವೀಕರಿಸುವ ಸಲುವಾಗಿ ನಾನಾರೀತಿಯಲ್ಲಿ ಪುರಾಣಗಳ ಮೆರುಗುಗಳನ್ನು ಹಚ್ಚಿ ಅವರ ನಿಜವಾದ ಘನತೆಯನ್ನು ಮಂಕಾಗಿಸುತ್ತಾರೆ. ವಿಶ್ವದ ಎಲ್ಲಾ ಕಡೆಗಳಲ್ಲೂ ಈ ಬಗೆಯಲ್ಲಿ ನಡೆಯಬಹುದಾದರೂ, ಭಾರತವು ಇದರ ತವರೇ ಇರಬಹುದು.

ಸಂತ ಜ್ಞಾನೇಶ್ವರ ಹುಟ್ಟಿನಿಂದ ಬ್ರಾಹ್ಮಣ ಆದರೆ ಧರ್ಮಭ್ರಷ್ಟ ಸನ್ಯಾಸಿಯ ಮಗನೆಂದು ಬ್ರಾಹ್ಮಣರಿಂದ ಶೋಷಣೆಗೆ, ಬಹಿಷ್ಕಾರಕ್ಕೆ ಒಳಗಾಗಿದ್ದವನು. ಅವನ ತಂದೆತಾಯಿಗಳನ್ನು ನದಿಗೆ ಬಿದ್ದು ಸಾಯುವಂತೆ ಮಾಡುವಷ್ಟು ಕಟುವಾಗಿ ಬ್ರಾಹ್ಮಣರು ತಮ್ಮ ಶಾಸ್ತ್ರಕ್ಕೆ ಜೋತುಬಿದ್ದು, ಕಡೆಗೆ ಮಕ್ಕಳನ್ನೆಲ್ಲಾ ಸಮಾಜದಿಂದ ಹೊರಗಿಟ್ಟಿದ್ದರು. ಕೊನೆಗೆ ಜ್ಞಾನೇಶ್ವರ ಆತ್ಮಹತ್ಯೆ ಮಾಡಿಕೊಂಡ.


ತುಕಾರಾಂ ಬಡ್ಡಿ ವ್ಯವಹಾರ ಮಾಡುತ್ತಿದ್ದ ಮನೆತನದಿಂದ ಬಂದಿದ್ದವನಾಗಿದ್ದು ಕುಣಬಿಯಲ್ಲಿ ರೈತನಾಗಿದ್ದ. ಅಲ್ಪಸ್ವಲ್ಪ ಧಾನ್ಯ ದವಸಗಳ ವ್ಯಾಪಾರ ಮಾಡುತ್ತಿದ್ದ. ಸಾಲವಸೂಲಾತಿ ಲೆಕ್ಕಗಳಿದ್ದ ಪುಸ್ತಕವನ್ನು ಹರಿದು ನದಿಯಲ್ಲಿ ಬಿಸಾಡಿದ. ಬ್ರಾಹ್ಮಣರ ತಿರಸ್ಕಾರ, ಅಸೂಯೆ ಇತ್ಯಾದಿಗಳಿಂದ ತನ್ನ ಕ್ರಾಂತಿಕಾರಕ ಬದುಕನ್ನು ಬಹುಬೇಗನೇ ಆತ್ಮಹತ್ಯೆಯ ಮೂಲಕ ಕೊನೆಗಾಣಿಸಿಕೊಂಡ. ಆದರೆ ಇದನ್ನು ಕೊಲೆಯೆಂದು ಹೇಳುವ ವರದಿಗಳೂ ಇವೆ.

ನಾಮದೇವ ವೃತ್ತಿಯಲ್ಲಿ ದರ್ಜಿಯಾಗಿದ್ದ, ಗೋರಾ ಜಾತಿಯಲ್ಲಿ ಅಸ್ಪೃಶ್ಯನೂ ಮತ್ತು ಕುಂಬಾರ ಕಸುಬಿನವನೂ ಆಗಿದ್ದ, ಚೋಕಾಮೇಳಾ ಬೀದಿ ಗುಡಿಸುವ ಅಸ್ಪೃಶ್ಯ, ಮಂಗಳವೇಡೆಯಲ್ಲಿ ಗೋಡೆ ಕಟ್ಟುವಾಗ ಗೋಡೆ ಕುಸಿದುಬಿದ್ದು ಸತ್ತು ಹೋದ. ಏಕನಾಥನು ಪೈಠಾಣಿ ಬ್ರಾಹ್ಮಣನಾದರೂ ಅಸ್ಪೃಶ್ಯತೆಯ ಕ್ರೂರ ಕಟ್ಟುಪಾಡುಗಳನ್ನು ಉಲ್ಲಂಘಿಸುವ ಸಾಹಸ ಮಾಡಿದ್ದ, ಸರಳ ಸ್ವಭಾವದ ಸಹೃದಯನು ಒಂದು [illegible] ನೋಡಿಕೊಂಡು

ತನ್ನ ಅತ್ತೆಯ ಕಾಟದಲ್ಲಿ ನರಳುತ್ತಿದ್ದ ಒಬ್ಬ ಮಹಿಳೆ. ಹೀಗೆ ಸಮಾಜದ ನಾನಾ ಸ್ತರಗಳಿಂದ, ಅದರಲ್ಲೂ ಸಾಧಾರಣ ವರ್ಗಗಳಿಂದ ಬಂದಿರುವಂತಹ ಸಂತರೇ ಭಕ್ತಿ ಚಳವಳಿಯನ್ನು ಗಟ್ಟಿಗೊಳಿಸಿದ್ದು ಮತ್ತು ದೇವರಿಗೂ, ದೇವಸ್ಥಾನಕ್ಕೂ ಮಾನ್ಯತೆ ಒದಗಿಸಿದ್ದು. ಹೀಗಾಗಿ ಪಂಡರಾಪುರದ ದೇವಸ್ಥಾನದಲ್ಲಿ ಯಾವ ಭೇದಗಳನ್ನೂ ಕಾಣಲಾರೆವು. ಬೇರೆ ಬೇರೆ ರೀತಿಯ ಸಮಸ್ಯೆಗಳು ಇರುತ್ತವೆ.


ಮೋಕ್ಷವು ಬಡವರ ಕೊಡುಗೆ

ಮೊದಲಿನಿಂದಲೂ ಬ್ರಾಹ್ಮಣರು ಆಳುವ ವರ್ಗವು ಯಾವುದೇ ಇರಲಿ ಅವರೊಂದಿಗೆ ಕೈಜೋಡಿಸಿಕೊಂಡು ತಮ್ಮ ಹಿತಸಾಧನೆಗಳನ್ನು ಮಾಡಿಕೊಂಡು ಬಂದವರು. ಅವರು ಅಕ್ಷರಸ್ಥರೂ ಆಗಿದ್ದರಿಂದ ಪ್ರಭುತ್ವಕ್ಕಾಗಲಿ, ಇತರೇ









ಬಂಡವಾಳಶಾಹಿಯವರ ಬಳಿ ಕರಣಿಕ ವೃತ್ತಿಗಾದರೂ ಆಗಲಿ ಬ್ರಾಹ್ಮಣರು ಒಂದು ರೀತಿಯ ಅಗತ್ಯವೆಂಬಂತೆಯೇ ಪರಿಣಮಿಸಿದ್ದರು. ಹಾಗಾಗಿ ಅವರು ಆಳುವವರ್ಗವನ್ನು ತಮ್ಮ ಮೇಧಾವಂತಿಕೆಯಿಂದ ಪೋಷಿಸುತ್ತಿದ್ದರು. ಸಾಮಾನ್ಯವಾಗಿ ಕರ್ಮಠ ಬ್ರಾಹ್ಮಣರಿಗೆ ಯಾವುದೇ ಆಧ್ಯಾತ್ಮದ ಆಸಕ್ತಿಯಾಗಲಿ, ಮೋಕ್ಷ ಚಿಂತನೆಯಾಗಲಿ ಬೇಕಾಗಿರಲಿಲ್ಲ. ಲೌಕಿಕ ಸವಲತ್ತುಗಳಿಗೆ ಇಂಬು ಕೊಡುವಂತಹ ಆಚರಣೆಗಳನ್ನೆಲ್ಲಾ ಆಳುವ ವರ್ಗದಲ್ಲಿ ಜನಪ್ರಿಯಗೊಳಿಸಿದ್ದರು. ತಮ್ಮ ಸಂಪತ್ತು, ಸ್ಥಾನ ಮತ್ತು ಮಾನಗಳ ವೃದ್ಧಿಗಾಗಿ ಹಾಗೂ ಅವುಗಳು ನಾಶವಾಗಬಹುದೆಂಬ ಭಯದಿಂದಾಗಿ ಬ್ರಾಹ್ಮಣರು ಹೇಳಿದಂತೆ ಕೇಳುತ್ತಿದ್ದರೂ ಕೂಡ. ಈ ಬ್ರಾಹ್ಮಣ ಪುರೋಹಿತರಿಗೆ ಸಾಮಾನ್ಯ ದುಡಿಯುವ ವರ್ಗದಿಂದ ಸೇವೆ ಪಡೆಯುವುದನ್ನು ಬಿಟ್ಟರೆ, ಬೇರೆ ಆಗಬೇಕಾದುದ್ದೇನೂ ಇರಲಿಲ್ಲ. ಅವರು ಅವರಿಗೆ ತಮ್ಮ ಕರ್ಮಠ ಆಚರಣೆಗಳನ್ನು ಅತ್ತ ಒಯ್ಯಲು ಹೋಗುತ್ತಿರಲಿಲ್ಲ. ಆದರೆ, ಅಂತಹ ಸ್ಥಾನಮಾನವಾಗಲಿ, ಸಂಪತ್ತಾಗಲಿ ಇಲ್ಲದಿದ್ದಂತಹ ಸಾಮಾನ್ಯ ವರ್ಗಕ್ಕೆ ಆಳುವ ವರ್ಗಕ್ಕೆ ಇದ್ದಂತಹ ಕಳೆದುಕೊಳ್ಳುವ ಭಯ ಮತ್ತು ಉಳಿಸಿಕೊಳ್ಳುವ ಆಸೆ ಇರಲಿಲ್ಲ. ಹಾಗಾಗಿ

ಇದ್ದುದರಲ್ಲಿ ಸಂತೋಷವಾಗಿರುವುದಕ್ಕೆ ಯತ್ನಿಸುತ್ತಿದ್ದರು. ಅಷ್ಟರಮಟ್ಟಿಗಿನ ಸಂತೋಷಕ್ಕೂ, ಸಮಾಧಾನಕ್ಕೂ ಧಕ್ಕೆ ಬರುತ್ತಿದ್ದದ್ದು ಇಲ್ಲವೆಂಬ ಕೊರಗಿನಿಂದ, ಆಶೆಯು ನೆರವೇರದೇ ನಿರಾಶೆಯಾಗುವುದರಿಂದ. ಜೊತೆಗೆ ತಮ್ಮಲ್ಲಿ ಉಂಟಾಗುತ್ತಿದ್ದ ಕೋಪ, ಅಸೂಯೆ, ಮತ್ಸರ, ಮೋಹ, ದುರಾಸೆ ಇತ್ಯಾದಿಗಳಿಂದ ತಾವು ಇರುವ ಆನಂದವನ್ನು ಕಳೆದುಕೊಳ್ಳುತ್ತಿರುವುದು ಅರಿವಿಗೆ ಬಂದಿತ್ತು. ಅಂತಹ ಸಮಯದಲ್ಲಿ ಮೋಹದಿಂದ ತಪ್ಪಿಸಿಕೊಳ್ಳಲು, ಕೋಪದ ಪರಿಣಾಮಗಳಿಂದ ಹೊರತಾಗಲು, ಮತ್ಸರದಿಂದ ಸಂಬಂಧಗಳೂ, ದೈಹಿಕ ಮತ್ತು ಆರೋಗ್ಯಗಳು ಕೆಡದಂತಿರಲು ಜನಕ್ಕೆ ಉಪಾಯ ಬೇಕಿತ್ತು. ಆಗಲೇ ಭಕ್ತಿ ಚಳವಳಿ ನೆರವಿಗೆ ಬಂದಿದ್ದು, ಮೋಕ್ಷದ ಪದಕ್ಕೆ ಅರ್ಥ ಸಿಕ್ಕಿದ್ದು. ಇದ್ದುದರಲ್ಲಿ ಆನಂದವಾಗಿರುವುದು, ಏನೂ ಇಲ್ಲದೆಯೂ ನಿರ್ಲಿಪ್ತರಾಗಿರುವುದು, ಎಲ್ಲದರ ಬಂಧನದಿಂದ ಮುಕ್ತರಾಗಿರುವುದು. ಇಂತಹ ಮೋಕ್ಷದ ಪರಿಕಲ್ಪನೆ ಮುಂದೆ ಇನ್ನೂ ವ್ಯಾಪಕವೂ ಆಯ್ತು, ವಿಸ್ತಾರವೂ ಆಯ್ತು. ಒಟ್ಟಾರೆ ಮೋಕ್ಷವೆಂಬುದು ಸಾಮಾನ್ಯ ವರ್ಗದ ಪರಿಕಲ್ಪನೆ. ಅಧ್ಯಾತ್ಮ ಲೋಕಕ್ಕೆ ಬಡವರ ಕೊಡುಗೆ. ಅದು ಅವರಿಗೆ ಅನಿವಾರ್ಯ. ಶ್ರೀಮಂತರಿಗೆ ಅದು ಆಸೆ. ಎಲ್ಲಾ ಶ್ರೀಮಂತಿಕೆ ಇದ್ದೂ ಜೊತೆಗೆ ಮೋಕ್ಷವೂ, ನಿರ್ಲಿಪ್ತ ಭಾವ, ಬಿಡುಗಡೆಯೂ ಒಂದು ಸ್ವತ್ತಾಗಿರಲಿ ಎಂಬುದಾಗಿ ಇದ್ದಾಗ ಅದರ ಪ್ರಯೋಗ ವಿಫಲವಾಯಿತು. ಮೋಕ್ಷದ ಪರಿಕಲ್ಪನೆಯು ಅದೆಷ್ಟು ವ್ಯಾಪಕವಾಗಿ ಜನಪ್ರಿಯವಾಯಿತೆಂದರೆ ಎಷ್ಟೋ ಶ್ರೀಮಂತರು, ರಾಜರು ತಮ್ಮ ಎಲ್ಲಾ ಸಂಪತ್ತನ್ನು ತೊರೆದು ಅದಕ್ಕಾಗಿ ಹಂಬಲಿಸಿ ನಡೆದರು.

ಬಡ ಮತ್ತು ಶ್ರಮಿಕ ವರ್ಗದಿಂದ ಬಂದಂತಹ ಸಂತರಾರೂ ಬ್ರಾಹ್ಮಣರಂತೆ ಅಧಿಕಾರದಲ್ಲಿದ್ದವರನ್ನು ಓಲೈಸಲಿಲ್ಲ. ಅವರಿಗೆ ಕಳೆದುಕೊಳ್ಳುವ ಭಯವಿರದಿದ್ದರಿಂದ, ಗಳಿಸಿಕೊಳ್ಳಬೇಕಾದ ಆಸೆ ಇಲ್ಲದಿದ್ದುದರಿಂದ ಆಳುವ ವರ್ಗವು ಬೇಕಾಗಿಯೂ ಇರಲಿಲ್ಲ. ಆದರೆ ತಮ್ಮ ಸರಳಜೀವನ ಸೂತ್ರಕ್ಕೆ ಅಡ್ಡಿಬಡುತ್ತಿದ್ದ ಯಾವುದೇ



ವ್ಯವಸ್ಥೆಯನ್ನು ಅದೇ ಸರಳ ಪದ್ಧತಿಯಿಂದಲೇ ಪ್ರತಿಭಟಿಸಲೇ ಬೇಕಾದುದು ಅನಿವಾರ್ಯವಾಗಿತ್ತು. ಹಾಗೆಯೇ ಎಷ್ಟೋ ಅವರ ಸಾಮಾಜಿಕ ವ್ಯವಸ್ಥೆಯನ್ನು ಧಿಕ್ಕರಿಸುವ, ವಿಡಂಬಿಸುವ, ಪ್ರಶ್ನಿಸುವ ಸಾಹಿತ್ಯಗಳು ಭಕ್ತಿ ಮತ್ತು ಅಧ್ಯಾತ್ಮಿಕತೆಯ ಜೊತೆಜೊತೆಯಲ್ಲಿಯೇ ಹುಟ್ಟಿದವು. ಆ ಸಾಹಿತ್ಯಗಳೂ ಮತ್ತು ಸಂತರ ಬದುಕೂ ಮುಂದೆ ಬಹು ಲಾಭದಾಯಕವಾದ ಸಾಮಾಜಿಕ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಬಂಡವಾಳವಾಗುತ್ತವೆ ಎಂದು ಬ್ರಾಹ್ಮಣರಿಗೆ ಗೊತ್ತಿರಲಿಲ್ಲ. ಹಾಗೊಂದು ವೇಳೆ ಅಷ್ಟರಮಟ್ಟಿಗೆ ದೂರದೃಷ್ಟಿ ಇದ್ದಿದ್ದೇ ಆಗಿದ್ದರೆ, ಬ್ರಾಹ್ಮಣ ಪುರೋಹಿತಶಾಹಿ ವರ್ಗವು ಸಂತರ ಪಂಥವನ್ನು ಬೆಳೆಸಲೂ ಹೇಸುತ್ತಿರಲಿಲ್ಲ. ಆದರೆ ಸಂತಪಟ್ಟದ ಮಹತ್ವ, ವ್ಯಾಪಾರ, ವ್ಯವಹಾರಗಳೆಲ್ಲವೂ ಈಗ ತಿಳಿದಿದೆ. ಹಾಗಾಗಿ ಯಶಸ್ವಿಯಾಗಿ ಅದೊಂದು ಲಾಭದಾಯಕವಾದ ವ್ಯವಹಾರವಾಗಿ ಪರಿಣಮಿಸಿದೆ.

ಭಗವದ್ಗೀತೆ ಏಕೆ ಬೇಕಿತ್ತು?

ಬ್ರಾಹ್ಮಣರಿಗೆ ತಮ್ಮ ಕರ್ಮಾಚರಣೆಗಳನ್ನು ಮುಂದುವರಿಸಿಕೊಂಡು ಹೋಗಲು ತಮ್ಮದೇ ಆದಂತಹ ವಿಧಿವಿಧಾನಗಳು ಇದ್ದರೂ, ತಮ್ಮ ಬಳಿ ಬರುವ ಅಥವಾ ತಾವು ಸಂಪರ್ಕ ಸಾಧಿಸುವ ವರ್ಗಗಳಿಗೆ ಹೇಳುವಂತೆ ಯಾವುದಾದರೂ ಆಧಾರ ಗ್ರಂಥ ಬೇಕಿತ್ತು. ಉಪನಿಷತ್ತುಗಳಂತಹ ಗ್ರಂಥಗಳು ಇಂತಹ ಲೌಕಿಕವಾಗಿ ಮನಸ್ಸನ್ನು ತರಬೇತಿಗೊಳಿಸಲು ನಿರುಪಯೋಗಿ. ಇನ್ನು ಬೋಧಿಸಲಂತೂ ಏನಾದರೂ ಖಂಡಿತ ಬೇಕಾಗಿತ್ತು. ಆಗಲೇ ನೆರವಿಗೆ ಬಂದಿದ್ದು ಭಗವದ್ಗೀತೆ.


ಈಗ ನಾವು ನೋಡುವ ಭಗವದ್ಗೀತೆಯು ಒಂದಕ್ಕೊಂದು ಸಂಬಂಧವಿಲ್ಲದಂತಿರುವ ವಿಚಾರಗಳ ಒಂದು ಸಂಕೀರ್ಣ ಗ್ರಂಥವಾಗಿದೆ. ಇದು ಕಾಲಾನುಘಟ್ಟಗಳಲ್ಲಿ ವಿಷಯಗಳನ್ನು ಸೇರಿಸಿಕೊಂಡು ಬಂದಿರುವಂತದ್ದಾಗಿದೆ. ಅದರಲ್ಲಿರುವ ವಿಚಾರಗಳ ಸಂಕೀರ್ಣತೆಯೇ ಬ್ರಾಹ್ಮಣರಿಗೆ ವರದಾನವಾಗಿದ್ದು, ಯಾವ ವರ್ಗಕ್ಕಾದರೂ ಅವರ ಅನುಕೂಲಕ್ಕೆ ತಕ್ಕಂತೆ ಹೇಳಬಹುದಾದ ಉಕ್ತಿಗಳನ್ನು ತೆಗೆದುಕೊಳ್ಳಬಹುದಾಗಿದೆ. ಒಂದು ಬಗೆಯ ಚಿಂತನಕ್ಕೆ ಅಥವಾ ವರ್ಗಕ್ಕೆ ಇದೇ ವಿಚಾರ ಎನ್ನುವಂತಿಲ್ಲದೇ ಇರುವುದರಿಂದ ಭಗವದ್ಗೀತೆಯು ಭಗವಾನುವಾಚ ಎಂದು ಯಾರಿಗೆ ಬೇಕಾದರೂ ಬೋಧಿಸಿ, ಪರಿಸ್ಥಿತಿಯನ್ನು ಸಮೀಕರಿಸಲು ಸಾಧ್ಯವಾಗುವಂತೆ ಮಾಡಬಹುದಿತ್ತು.

ಆದರೆ ಭಗವದ್ಗೀತೆಯು ಅಷ್ಟು ಜನಪ್ರಿಯವಾಗಿ ಬೆಳೆಯುವಾಗ ಜ್ಞಾನೇಶ್ವರನಂತಹ ಜ್ಞಾನಿಯು ಅದನ್ನೇ ಹೇಳಲಾಗುತ್ತಿರಲಿಲ್ಲ. ಹಾಗೆಯೇ ಹೇಳದೇ ಬಿಡುವಂತೆಯೂ ಇರಲಿಲ್ಲ. ಹಾಗಾಗಿ ತಾನೇ ಜ್ಞಾನೇಶ್ವರಿಯನ್ನು ಬರೆದ. ಭಗವದ್ಗೀತೆಯನ್ನೇ ಆಧರಿಸಿದರೂ ಅದು ಅವನ ಸ್ವತಂತ್ರ ವಿಚಾರಧಾರೆಯ ಕೃತಿಯೇ ಆಗಿದೆ. ಅವನು ವಿಶ್ಲೇಷಿಸುವುದನ್ನು ನೇರವಾಗಿಯೇ ಬಿಂಬಿಸಲು ಸಾಧ್ಯವಾಗುವಂತಹ ರೀತಿಯಲ್ಲಿ ಅದನ್ನು ಜ್ಞಾನೇಶ್ವರಿಯಲ್ಲಿ ಕಟ್ಟಿಕೊಡುತ್ತಾನೆ. ಇದು ಮರಾಠರಿಗೆ ಸಮಾನತೆಯನ್ನು ಸಾಧಿಸಲು ಬಹಳಷ್ಟು ನೆರವು ನೀಡಿತು. ಇದರ ಜೊತೆಗೆ ಮರಾಠಿಯಲ್ಲಿಯೇ ರಚನೆಯಾದ ವಿವಿಧ ಸಂತರ ಅಭಂಗಗಳೂ ಕೂಡ ಮರಾಠರ ಆಗಿನ ಸಮಾಜಕ್ಕೆ ಅಸಮಾನತೆಯನ್ನು ಹೊಂದದೇ ಇರುವುದಕ್ಕೆ ಸಾಕಷ್ಟು ಕೊಡುಗೆಗಳನ್ನು ನೀಡಿವೆ.


ತೀವ್ರ ಅಸಮಾನತೆ ಇಲ್ಲದೇ ಇರುವ ಕಾರಣದಿಂದಲೇ ಮರಾಠ ಸೈನ್ಯವಾಗಲಿ, ಸಿಖ್ ಸೈನ್ಯವಾಗಲಿ ಸದೃಢವಾಗಲು ಸಾಧ್ಯವಾಯಿತು. ಆದರೆ ಮುಂದಿನ ರಾಜಕೀಯ ಬದಲಾವಣೆಗಳಿಂದ, ಅಧಿಕಾರ ಗ್ರಹಣದ ಹಠಗಳಿಂದ, ಶ್ರೇಷ್ಠತೆಯ ಗೀಳುಗಳಿಂದ ಸಮಾಜದ ಐಕ್ಯತೆಯು ಸಡಿಲವಾಗುತ್ತಾ ಆಂತರಿಕ ಕಲಹಗಳು ಉಂಟಾಗುತ್ತವೆ. ಯಾವುದೇ ಕಾರಣದಿಂದ ಯಾವುದೇ ವರ್ಗವು ಇಂತಹ ಒಡಕನ್ನು ಸೃಷ್ಟಿಸಿದಾದ ಮೇಲೆ, ಕಾಲಾನಂತರ ಆ ಕಾರಣವು ತೀರಿದ ಬಳಿಕವೂ ಒಡಕು ಮುಂದುವರಿಯುತ್ತದೆ. ಕಾರಣವೇ ತಿಳಿಯದ ಮುಂದಿನ ಪೀಳಿಗೆಗಳೂ ಕೂಡ ಒಡಕನ್ನು ಕಾಪಾಡುತ್ತಾ ಸಂಘರ್ಷದಲ್ಲಿ ನಿರತವಾಗಿರುತ್ತವೆ. ಹಾಗಾಗಿಯೇ ಕಾಲದಿಂದ ಕಾಲಕ್ಕೆ ಸಂತರು ಅಲೌಕಿಕ ಮಹತ್ವವನ್ನು ಸಾರುತ್ತಾ ಸಾಮರಸ್ಯ ಕಾಪಾಡಲು ಹೆಣಗಾಡುತ್ತಾರೆ. ಲೌಕಿಕ ಭಯ ಮತ್ತು ಆಸೆಗಳಿಂದ ಪ್ರಭಾವಿತರಾದಂತಹ ಒಡಕಿನ ಸನಾತನತೆಯನ್ನು ಕಾಪಾಡಿಕೊಂಡೇ ಇರುವ ವಾದಿಗಳು ಇವರ ಮೇಲೆ ಮುಗಿಬೀಳುತ್ತಾರೆ. ಸಂತರ ಕಾಲಾನಂತರ ಅವರನ್ನೂ ತಮ್ಮ ವ್ಯಾಪಾರದ ಒಂದು ಬಂಡವಾಳವಾಗಿ ಉಪಯೋಗಿಸಿಕೊಳ್ಳುತ್ತಾರೆ.

ಸಂತ ಜ್ಞಾನೇಶ್ವರ, ತುಕಾರಾಂ, ಚೋಕಾಮೇಳ, ಸಖ್ಖೂಬಾಯಿ ಇತ್ಯಾದಿ ಸಂತರು ಜ್ಞಾನೇಶ್ವರಿ ಹಾಗೂ ಇತರ ಕೃತಿಗಳ ಮೂಲಕ ಬಹು ಸೂಕ್ಷ್ಮ ವಿಚಾರಗಳನ್ನು ನಮ್ಮ ಮುಂದಿಡುತ್ತಾರೆ. ■

ಈ ಮೈನರ್ ಹುಡುಗಿ ಪಾಕಿಸ್ತಾನದಲ್ಲಿ ರಾಮಮಂದಿರ ಕಟ್ಟುತ್ತಾಳಂತೆ!




ಕಳೆದ ರವಿವಾರ ಮಂಗಳೂರಿನಲ್ಲಿ ವಿಎಚ್‌ಪಿಯವರು ಸಾಧ್ವಿ ಬಾಲಿಕಾ ಸರಸ್ವತಿ ದಿಕ್ಸೂಚಿ ಭಾಷಣ ಮಾಡುತ್ತಾಳೆ ಎಂದು ಭಾರಿ ಪ್ರಚಾರ ಮಾಡಿದ್ದರು. ಆದರೆ ಈ ಬಾಲಕಿಯ ಭಾಷಣ ಬಾಲಿಶವಾಗಿತ್ತು. ಅವಳ ದಿಕ್ಸೂಚಿ ಭಾಷಣದಲ್ಲಿ ದಿಕ್ಕೂ ಇರಲಿಲ್ಲ ದೆಶೆಯೂ ಇರಲಿಲ್ಲ, ಕೇವಲ ದ್ವೇಷ ಮಾತ್ರ ಇತ್ತು, ಹೆಚ್ಚಿನ ಜನರಿಗೆ ಅವಳ ಹಿಂದಿ ಭಾಷಣ ಅರ್ಥವೇ ಆಗಲಿಲ್ಲ, ಕೇವಲ ವೇದಿಕೆಯ ಮೇಲಿದ್ದವರು ಚಪ್ಪಾಳೆ ತಟ್ಟಿದಾಗ ನೆರೆದ ಸಭಿಕರಿಗೆ ಅವಳ ಭಾಷಣ ಅರ್ಥವಾಗದಿದ್ದರೂ ಎಲ್ಲರೂ ಚಪ್ಪಾಳೆ ತಟ್ಟುತ್ತಿದ್ದರು.



ಒಂದು ಲಕ್ಷ ಜನರು ಸೇರುತ್ತಾರೆ ಎಂದು ಆಯೋಜಕರು ಪ್ರಚಾರ ಮಾಡಿದ್ದರು. ಆದರೆ ಸೇರಿದ್ದು ಕೇವಲ ಹದಿನೈದು ಸಾವಿರ ಜನರು ಮಾತ್ರ. ನೆಹರೂ ಮೈದಾನದ ಕೆಪಾಸಿಟಿಯೂ ಅಷ್ಟೇ ಇರುವುದು. ಈ ಜನರೂ ಸೇರಿದ್ದು ಕೇವಲ ಗುಲ್ಬರ್ಗಾದಿಂದ ಬಂದು ಮೂಡಬಿದ್ರಿಯಲ್ಲಿ ನೆಲೆಸಿರುವ ವಿಜಯನಾಥ ಶೆಟ್ಟಿ ಎಂಬ ಉದ್ಯಮಿ ಹರಿಸಿದ ಹಣದಿಂದಾಗಿ.

ಏನೇ ಆಗಲಿ ಬ್ರಾಹ್ಮಣರ ನಾಲಿಗೆ ಬಲ ಹಾಗೂ ಬಂಟರ ಹಣದ ಬಲ ಹೆಚ್ಚು ಪರಿಣಾಮ ಬೀರಲಿಲ್ಲ. ಹಿಂದುಳಿದ ಜಾತಿಗಳವರು ಹಿಂದೂತ್ವ ಸಂಘಟನೆಗಳಿಂದ ದೂರ ಸರಿಯುತ್ತಿದ್ದಾರೆ ಎಂಬುದನ್ನು ಇದು ಸೂಚಿಸುತ್ತದೆ. ಇಂಟರ್-ನೆಟ್ಟಿನಲ್ಲಿ ಹುಡುಕಿದಾಗ ಮಿಶ್ರಾ ಎಂಬ ಉಪನಾಮದ ಈ ಬ್ರಾಹ್ಮಣ ಬಾಲಕಿ ಸಾಧ್ವಿಗೆ ಏಪ್ರಿಲ್ 2013 ರಲ್ಲಿ ಕೇವಲ 13 ವರ್ಷ ವಯಸ್ಸಾಗಿತ್ತು, ಅಂದರೆ ಅವಳಿಗೆ ಈಗ ಕೇವಲ ಹದಿನೈದು ವರ್ಷ ವಯಸ್ಸು! ವಿಎಚ್‌ಪಿಯವರು ಇಷ್ಟು ಸಣ್ಣ ವಯಸ್ಸಿನ ಹುಡುಗಿಯ ದಿಕ್ಕು ತಪ್ಪಿಸಿ ಅವಳನ್ನು ದಿಕ್ಸೂಚಿ ಭಾಷಣ ಎಂದು ಹೇಳಿ ಪಾಕಿಸ್ತಾನದಲ್ಲಿ ರಾಮಮಂದಿರ ಕಟ್ಟುತ್ತೇವೆ ಎಂದು ಪ್ರಚೋದನಾತ್ಮಕ ಭಾಷಣ ಬರೆದು ಅವಳಿಗೆ ಕೊಟ್ಟಿದ್ದು ಮಕ್ಕಳ ಹಕ್ಕು ಮತ್ತು ಸಂರಕ್ಷಣಾ ಕಾಯ್ದೆಯಡಿ ಕ್ರಿಮಿನಲ್ ಅಪರಾಧವಾಗುತ್ತದೆ.

ಪಾಕಿಸ್ತಾನದ ನಕಾಶೆಯಲ್ಲಿ "ಇಸ್ಲಾಮಾಬಾದ್" ಎಲ್ಲಿದೆ ಎಂದು ಗೊತ್ತಿಲ್ಲದ ಈ ಮೈನರ್ ಹುಡುಗಿ "ಇಸ್ಲಾಮಾಬಾದಿ



ನಲ್ಲಿ ರಾಮಮಂದಿರ ಕಟ್ಟುತ್ತಾಳಂತೆ! ಸರಿಯಾಗಿ ಎಂಟನೇ ಕ್ಲಾಸು ಪಾಸು ಮಾಡಲಾಗದ ಹುಡುಗಿ ಅತ್ತೆ-ಸೊಸೆ ಟಿವಿ ಸೀರಿಯಲ್‌ನಲ್ಲಿ ನಟಿಸುವ ರೀತಿ ಆಡಿದ್ದು ತಮಾಷೆಯಾಗಿತ್ತು ಕಡೇಪಕ್ಷ ಅವಳಿಂದ ಹಾಗೂ ಅಲ್ಲಿ ಸೇರಿದ್ದ ಹಿಂದೂ ನೇತಾರರಿಂದ ಒಂದೊಂದು ಯೂನಿಟ್ ರಕ್ತದಾನ ಮಾಡಿಸಿದ್ದರೆ ಸಮಾಜೋತ್ಸವವೆಂಬುದು ಸಾರ್ಥಕವಾಗುತ್ತಿತ್ತು.

ವಿಎಚ್‌ಪಿ ಹುಟ್ಟಿದ್ದು ಮುಂಬೈಯಲ್ಲಿಯಾದರೂ ಅದರ ಮೂಲ ಮಧ್ಯ ಪ್ರದೇಶ. ಆದರೆ ಮುಂಬೈ, ದಿಲ್ಲಿ ಅಥವಾ ಉತ್ತರ ಭಾರತದ ಬೇರೆಲ್ಲಿಯೂ ಅದರ ಸುವರ್ಣ ಮಹೋತ್ಸವ ಆಚರಿಸದೇ ಕೇವಲ ದಕ್ಷಿಣ ಭಾರತದ ಮೂಲೆಯಲ್ಲಿರುವ ಮಂಗಳೂರಿನಲ್ಲಿ ಈ ವಿಎಚ್‌ಪಿಯ ಸುವರ್ಣಮಹೋತ್ಸವ ಆಚರಿಸಿದ್ದರ ಕಾರಣ ಮಾತ್ರ ಯಾರಿಗೂ ಅರ್ಥವಾಗಲಿಲ್ಲ.

ಕರಾವಳಿಯ ಎಲ್ಲಾ ಕಾವಿಧಾರಿ ಸ್ವಾಮೀಜಿಗಳು ಈ ಸಮಾಜೋತ್ಸವದಲ್ಲಿ ಭಾಗವಹಿಸಿದ್ದರು. ಕೇವಲ ಕೇಮಾರು ಈಶ ವಿಠ್ಠಲದಾಸ ಎಂಬ ಸ್ವಾಮೀಜಿ ಮಾತ್ರ ಆಹ್ವಾನವಿದ್ದರೂ ಇದರಲ್ಲಿ ಭಾಗವಹಿಸಲಿಲ್ಲ. ಯಾಕೆಂದರೆ ಕರಾವಳಿಯ ಸ್ವಾಮೀಜಿಗಳಲ್ಲಿ ಅವರೊಬ್ಬರೇ ದೇವರು-ಧರ್ಮ-ಮಾನವತೆ ಎಂಬ ಶಬ್ದವನ್ನು ಸರಿಯಾಗಿ ಅರ್ಥ ಮಾಡಿಕೊಂಡವರು.

- ಜೆ. ರವಿಕಿರಣ ರೈ, ಮಂಗಳೂರು

ಮೋಹನ ಭಾಗವತನ ಕೊಳಕು ಕುಲ ಬಾಂಧವರನ್ನು ಮ.ತೆರೇಸಾ ಕ್ಷಮಿಸಲಿ

ದಶಕದ ಹಿಂದೆ ಮದರ್ ತೆರೇಸಾ ನಿಧನರಾದಾಗ ನನಗೆ ಅತೀ ಅಸಹ್ಯವಾಗಿ ಕಾಡಿದ್ದೆಂದರೆ ಅದೇ ಸಮಯದಲ್ಲಿ ಸತ್ತ ಪ್ರಿನ್ಸೆಸ್ ಡಯಾನ ಹಾಗು ತೆರೇಸಾರನ್ನು ಹೋಲಿಸಿ ಮಾಧ್ಯಮಗಳು ಬಿಂಬಿಸಿದ್ದು. ರಾಜಕುಮಾರಿ ಎನ್ನುವುದಕ್ಕೆ ತಕ್ಕ ಮಾದರಿಯಂತಿದ್ದ ಸುರಸುಂದರಾಂಗಿ ಡಯಾನ ಜಗದ್ವಿಖ್ಯಾತವಾಗಿದ್ದ ರೀತಿಯೇ ಬೇರೆ; ಕುಳ್ಳಗಿನ, ಬಾಗಿದಬೆನ್ನಿನ ಸುಕ್ಕುಗಟ್ಟಿದ ಮುಖದ ತೆರೇಸಾ ವಿಖ್ಯಾತರಾಗಿದ್ದ ದಾರಿಯೇ ಬೇರೆ ಬಗೆಯದ್ದು. ಡಯಾನರದ್ದು ಬಾಹ್ಯ ಸೌಂದರ್ಯವಾದರೆ ತೆರೇಸಾರದ್ದು ಆಂತರಿಕ ಶ್ರೀಮಂತಿಕೆ ಹಾಗು ಸೌಂದರ್ಯದ ಹಾದಿಯಾಗಿತ್ತು.

ಈಗ ಅದೇ ಉತ್ತರ- ದಕ್ಷಿಣ ಧ್ರುವಗಳದ್ದೇ ಕುರಿತಾಗಿ ವಿಮರ್ಶಿಸುವಂತಹ ಕಾಲ ಪುನಃ ಸಮಗೆದುರಾಗಿದೆ. ಅದೇ ತನ್ನಂತೆ ರಕ್ತ ಮಾಂಸ ಹೊಂದಿ ಬದುಕುತ್ತಿರುವ ಮನುಷ್ಯರನ್ನೇ ಪ್ರಾಣಿಗಳಂತೆ ಕಾಣುವ ಮೋಹನ ಭಾಗವತನ ಸಂತಾನಕ್ಕೂ, ಜೀವನಪರ್ಯಂತ ನರಳಾಟವನ್ನೇ ಉಸಿರಾಗಿಸಿಕೊಂಡವರ ಸಾವಿನ ಗಳಿಗೆಯಲ್ಲೂ ಸಂತೃಪ್ತಿಯ ಭಾವ ನೀಡುವಿಕೆಗಾಗಿಯೇ ಜೀವ ತೆತ್ತ ತೆರೇಸಾರಂತಹ ಮಾನವೀಯ ಜೀವಗಳ ಮುಖಾಮುಖಿಗೊಳ್ಳುವಿಕೆ.

ಹೌದು ಮದರ್ ತೆರೇಸಾ ಜೀಸಸ್‌ನ ಪಕ್ಕಾ ಅನುಯಾಯಿ. ಆಕೆ ಜೀಸಸ್ ಸಂದೇಶ ಸಾರುವುದರ ಬಗ್ಗೆ ಆಸಕ್ತಳಾಗಿದ್ದರೂ ಕೂಡ ಅದರಲ್ಲಿ ತಪ್ಪೇನಿದೆ? ಕೇವಲ ಮತಾಂತರವೇ ಆಕೆಯ ಉದ್ದೇಶವಿದ್ದಿದ್ದರೆ ಹಿಂದೆ ಮುಂದೆ ಯಾರೂ ಇಲ್ಲದ ನಿರ್ಗತಿಕರನ್ನು, ಈಗಲೋ ಆಗಲೋ ಸಾಯುವಂತಹ ರೋಗಿಗಳನ್ನು ಮತಾಂತರ ಮಾಡಿ ಪ್ರಯೋಜನವಾದರೂ ಏನು?


15-20 ವರ್ಷಗಳ ಹಿಂದೆ ಮಂಗಳೂರಿನ ಪೇಟೆಯಲ್ಲಿ ದಾರಿಯಲ್ಲಿ ಬಿದ್ದ ಪ್ಲಾಸ್ಟಿಕ್ಕನ್ನು ಸುತ್ತಿಕೊಂಡು ಒಂದು ಯುವತಿ ಅಲೆಯುತ್ತಿದ್ದಳು. ಆಕೆ ಈಗ ತನ್ನ ಹುಚ್ಚುತನವನ್ನು ಬಿಟ್ಟು ಸಾಕಷ್ಟು ವರ್ಷಗಳಾಗಿವೆ. ಮೊನ್ನೆ ಮೊನ್ನೆ ಪುತ್ತೂರಿನಲ್ಲಿ ತಟ್ಟೆ ಹಿಡಿದು ಕಿರುಚುತ್ತಾ ಓಡುತ್ತಿದ್ದ ರಾಮ ಎಂಬಾತ ಈಗ ಆರಾಮವಾಗಿದ್ದು ಕಿರುಚುವುದನ್ನು ಮರೆತೇ ಬಿಟ್ಟಿದ್ದಾನೆನ್ನುವ ಸುದ್ದಿಯಿದೆ. ಇದನ್ನೆಲ್ಲ ಯಾತಕ್ಕಾಗಿ ಹೇಳುತ್ತಿದ್ದೇನೆಂದರೆ ಈ ರೀತಿ ನಿಕೃಷ್ಟವಾಗಿ ತಿರುಗುತ್ತಿದ್ದವರನ್ನು ಮಾನವೀಯತೆ ತೋರಿ ಸರಿದಾರಿಗೆ ತಂದದ್ದು ಈ ಭಾಗವತನ ಸಂತಾನ ಅಲ್ಲವೇ ಅಲ್ಲ, ಯಾಕೆಂದರೆ ಆತನ ಕುಲಬಾಂಧವರ ಪ್ರಕಾರ ಅದು ಅವರುಗಳ 'ಪ್ರಾರಬ್ಧ ಕರ್ಮ' ಅದನ್ನು ಅನುಭವಿಸದೇ ಬೇರೆ ದಾರಿಯೇ ಇಲ್ಲ.

ಒಮ್ಮೆ ಟೀವಿ ನೋಡುತ್ತಾ ಕುಳಿತಿದ್ದಾಗ ಒಬ್ಬ ಪ್ರಸಿದ್ಧ ಭವಿಷ್ಯಕಾರ ಜನರಿಗೆ ಉಪದೇಶಿಸುತ್ತಿದ್ದ ಮಾತನ್ನು ಕೇಳಿ ಒಂದುಕ್ಷಣ ನಾನು ದಂಗಾಗಿ ಬಿಟ್ಟೆ. ಆತ ಹೇಳುತ್ತಿದ್ದದ್ದೇನೆಂದರೆ, ಭಿಕ್ಷುಕರಿಗೆ, ನಿರ್ಗತಿಕರಿಗೆ, ಸಂಬಂಧವಿಲ್ಲದ ರೋಗಿಗಳಿಗೆ ಯಾವ ಕಾರಣಕ್ಕೂ ಸಹಾಯ ಮಾಡಲೇ ಬಾರದಂತೆ. ಯಾಕೆಂದರೆ, ಅದು ಅವರವರ ಪ್ರಾರಬ್ಧ ಕರ್ಮ; ಹಾಗಂತ ನೀವು ಅದನ್ನ ಮುಟ್ಟಹೋದರೆ ನಿಮಗೇ ಅದು ಅಂಟಬಿಡುತ್ತದೆ ಜಾಗ್ರತೆ.

ಇದು ಸ್ವ ಕೇಂದ್ರಿತವಾಗಿ ಮಾತಾಡುವ ಭಾಗವತನ ಕುಲಬಾಂಧವರ ಅಸಲಿಯತ್ತು. ಸಂಬಂಧವಿಲ್ಲದ ಯಾವುದೋ ಕುಷ್ಠ ರೋಗಿಯ ಕೈಯಲ್ಲಿ ಒಸರುತ್ತಿದ್ದ ಕೀವನ್ನು ತೊಳೆದು ಪ್ರೀತಿಯಿಂದ ಔಷಧಿ ಹಚ್ಚುತ್ತಿದ್ದ ತೆರೇಸಾ ಎಲ್ಲಿ? ಇಂತಹ ಸನಾತನವಾದಿ ಭಾಗವತ, ಆದಿತ್ಯನಾಥನಂತವರ ಪಡೆಯೆಲ್ಲಿ?

ಮದರ್ ತೆರೇಸಾ ತನ್ನ ಆರಂಭದ ದಿನಗಳಲ್ಲಿ ಅನೇಕ ಸ್ಥಳೀಯರ ವಿರೋಧ ಕಟ್ಟಿಕೊಂಡಿದ್ದರು. ಅವರಲ್ಲಿ ಅಲ್ಲಿನ ಕಾಳಿಮಂದಿರದ ಅರ್ಚಕನೂ ಒಬ್ಬ. ಅಶಕ್ತ ಹಿರಿ ಜೀವಗಳನ್ನು, ಯಾರಿಗೂ ಬೇಡದ ಅಮಂಗಳೆಯರೆಂದೇ ಪರಿಗಣಿಸಲ್ಪಡುತ್ತಿರುವ ಬಾಲ ವಿಧವೆಯರನ್ನು ಸಂಚಾರ ವ್ಯವಸ್ಥೆಯಿಲ್ಲದ ಹಿಂದಿನ ಕಾಲದಲ್ಲಿ ಶಾಶ್ವತವಾಗಿ ಕಾಶಿಯಲ್ಲಿ ಬಿಟ್ಟುಬರುವ ಸತ್ ಸಂಪ್ರದಾಯದ ಇನ್ನೊಂದು ಬಗೆಯ ಹೊಡೆತ ಈ ಅರ್ಚಕನೂ ಅನುಭವಿಸಬೇಕಾಗಿ ಬಂದು ಆತ ಅಲ್ಲೇ ತನ್ನವರಿಂದಲೇ ಹೊರಗಟ್ಟಲ್ಪಟ್ಟ. ಆಗ ಆತನನ್ನು ಕರೆತಂದು ಸೇವೆಗೈದು ಹೊಸ ಬೆಳಕನ್ನು ನೀಡಿದ್ದು ಇದೇ ತೆರೇಸಾ. ಅದನ್ನು ಆತನ ಬಾಯಿಯಿಂದಲೇ ಕೇಳಿ. "ಇಷ್ಟು ದಿವಸ ನಾನು ಬರೀ ಕಲ್ಲಿನ ದೇವತೆಯನ್ನು ಪೂಜಿಸುತ್ತಿದ್ದೆ, ಆದರೆ ಇವತ್ತು ನನಗೆ ನಿಜದರ್ಶನವಾಯಿತು" ಎಂದು. ಕಾಟಾಚಾರದ ಡಂಬಾಚಾರದ ವೈದಿಕರ ಶಾಸ್ತ್ರೀಯ ಒಣಮಾತುಗಳಿಗಿಂತ ಪ್ರಾಮಾಣಿಕ ಸೇವೆಯ ಮಹತ್ವವನ್ನು ಆತ ಅವತ್ತು ಕಂಡಿದ್ದ.

ಒಂದುವೇಳೆ ಕ್ರಿಶ್ಚಿಯನ್ ಮಿಷನರಿಗಳು ಭಾರತಕ್ಕೆ ಬಾರದೇ ಇರುತ್ತಿದ್ದರೆ, ಬ್ರಾಹ್ಮಣೇತರರು ವಿದ್ಯಾವಂತರಾಗುವ ಅವಕಾಶವೇ ಇರುತ್ತಿರಲಿಲ್ಲ. ಈ ಕಾರಣಕ್ಕೇ



ನಾರಾಯಣಗುರುಗಳಂತವರು ಬ್ರಿಟಿಷರೇ ನನ್ನ ಗುರುಗಳು ಎಂಬಂತಹ ಮಾತನಾಡಿದ್ದು. ಅನ್ಯ ಧರ್ಮೀಯರ ವಿರುದ್ಧ ಬೊಬ್ಬೆ ಹೊಡೆಯುತ್ತಿರುವ ಎಂ.ವಿ.ಕಾಮತನಂತಹ ಹೆಚ್ಚಿನ ಸನಾತನವಾದಿಗಳೂ ಕ್ರಿಶ್ಚಿಯನ್ ವಿದ್ಯಾಸಂಸ್ಥೆಗಳ ಮೂಲಕವೇ ಅಕ್ಷರ ಜ್ಞಾನ ಪಡೆದದ್ದು.

ಮೊನ್ನೆ ದೆಲ್ಲಿಯಲ್ಲಿ ದಾಳಿಗೆ ಗುರಿಯಾದ ಕ್ರಿಶ್ಚಿಯನ್ ವಿದ್ಯಾಸಂಸ್ಥೆಯಲ್ಲೇ ಬಜೆಪಿಯ ಸಚಿವೆ ಸ್ಮೃತಿ ಇರಾನಿ ಕಲಿತದ್ದು. ತಮ್ಮ ಧರ್ಮದಲ್ಲಿ ಬರಿ ಸ್ವಾರ್ಥ ಅನಾಚಾರಗಳೇ ತುಂಬಿದ್ದು ಅನ್ಯರಲ್ಲಿ ಸೇವೆ ಇತ್ಯಾದಿಗಳು ಎದ್ದು ತೋರುತ್ತಿರುವಾಗ ಇವರಿಗೆ ಏನೂ ಹೇಳಿಕೊಳ್ಳಲು ತೋಚದೇ ತೆರೇಸಾರಂತವರ ಮೇಲೂ ಗೂಬೆ ಕೂರಿಸಿ ತಮ್ಮ ವಿಕೃತಾನಂದವನ್ನು ಭಾಗವತ, ಬೈರಪ್ಪ, ಚಿದಾನಂದ ಮೂರ್ತಿಯಂತವುಗಳು ಹೊರಕಾಡಿಕೊಳ್ಳುತ್ತಿವೆಯಷ್ಟೆ.

-ಅವಿನಾಶ್ ಎಂ.ಎಸ್. ನೆಲ್ಲಿಕಾರ್

ನಾಡಗೀತೆಗೆ ಕತ್ತರಿ, ನಾಡಿಗೆ "ಕತ್ತಿ" ಯಾಗದಿರಲಿ?

ರಾಷ್ಟ್ರಕವಿ ಕುವೆಂಪು ಇಂದು ಬದುಕಿದ್ದು, ತಮ್ಮ ನಾಡಗೀತೆಗೆ ಸರ್ಜರಿ ಮಾಡುವ ಪ್ರಯತ್ನವನ್ನು ನೋಡಿದ್ದರೆ, ಅವರು ಬಹುಶಃ ಕೈಮುಗಿದು, ವಿನಮ್ರರಾಗಿ "ನನ್ನ ಮಗುವನ್ನು ನನಗೇ ಹಿಂತಿರುಗಿಸಿ. ಅದಕ್ಕೆ ಯಾವ ಸರ್ಜರಿಯ ಆವಶ್ಯಕತೆ ಇಲ್ಲ" ಎಂದು ಬೇಡಿಕೊಳ್ಳುತ್ತಿದ್ದರೇನೋ? ನಾಡಗೀತೆಗೆ ಕತ್ತರಿ ಹಾಕಿ ಅದನ್ನು ಚುಟುಕಾಗಿ ಮಾಡಬೇಕೆನ್ನುವ ಪ್ರಹಸನ ಕಳೆದ ಒಂದೆರಡು ವರ್ಷದಿಂದ ನಡೆಯುತ್ತಿದ್ದು, ಆಗೊಮ್ಮೆ ಈಗೊಮ್ಮೆ ಸುದ್ದಿ ಮಾಡಿ ಸುಮ್ಮನಾಗುತ್ತಿತ್ತು, ಯಾವ ಕನ್ನಡಿಗರೂ ಇದನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ, ಅಚ್ಚರಿ ಎನ್ನುವಂತೆ ಈಗ ಇದು ಒಮ್ಮೆಲೆ ವೇಗ ಪಡೆದಿದ್ದು, ಅದಕ್ಕಾಗಿ ಬಡ ತೆರಿಗೆದಾರನ ಹಣದಲ್ಲಿ ಸಮಿತಿ ರಚಿಸಿ, ಅವರಿಂದ ಅಭಿಪ್ರಾಯ ಪಡೆದು ಜನಸಾಮಾನ್ಯರಿಂದಲೂ ಅವರ ಅನಿಸಿಕೆಯನ್ನು ಪಡೆಯಲು ಪತ್ರಿಕೆಗಳಲ್ಲಿ ಜಾಹೀರಾತು ನೀಡಲಾಗಿದೆ. ಈ ಪ್ರಕ್ರಿಯೆ ಸಾಗುತ್ತಿರುವ ವೇಗವನ್ನು ನೋಡಿದರೆ, ಈ ನಿಟ್ಟಿನಲ್ಲಿ ಈಗಾಗಲೇ "ಕತ್ತರಿ ಪ್ರಯೋಗದ" ನಿರ್ಣಯವಾಗಿದ್ದು, ಮುಂದಿನ ದಿನಗಳಲ್ಲಿ ಬರಬಹುದಾದ ಕೆಲವು ಆಡಳಿತಾತ್ಮಕ ಮತ್ತು ಕಾನೂನು ತೊಡಕುಗಳನ್ನು ನಿವಾರಿಸಿಕೊಳ್ಳುವ ಪ್ರಕ್ರಿಯೆ ಮಾತ್ರ ಬಾಕಿ ಇದೆ ಏನೋ ಎಂದು ಅನಿಸುತ್ತಿದೆ.

ಈ ನಾಡಗೀತೆ, ಕನ್ನಡನಾಡಿನ inclusive ಗೀತೆ. ಈ ನಾಡಿನ, ನಾಡು-ನುಡಿ, ನದಿ, ಹೊಳೆ-ಹಳ್ಳ, ಪುಣ್ಯ ಪುರುಷರು, ಋಷಿಗಳು, ಮತ, ಪಂಥ, ಜಾತಿ, ಧರ್ಮ ಹೀಗೆ ಎಲ್ಲರನ್ನೂ ಒಳಗೊಂಡಿರುವ ಒಂದು ಪರಿಪೂರ್ಣ ಗೀತೆ. ಇದರಲ್ಲಿ ತಮ್ಮನ್ನು ಬಿಟ್ಟಿದ್ದಾರೆ, ಇದನ್ನು ಬಿಟ್ಟಿದ್ದಾರೆ ಎನ್ನುವ ಒಂದು ಕ್ಷೀಣ ಆರೋಪವೂ ಬರದಷ್ಟು ಕುವೆಂಪುರವರು ಇದನ್ನು ರಚಿಸಿದ್ದಾರೆ. ಬಹುಶಃ ಇದೇ ಕಾರಣಕ್ಕೋ ಏನೋ, ಇಷ್ಟೇ ಅರ್ಥಪೂರ್ಣವಾದ ಹುಯಿಲುಗೋಳ್ ನಾರಾಯಣರಾಯರ "ಉದಯವಾಯಿತು ನಮ್ಮ ಚೆಲುವ ಕನ್ನಡನಾಡು" ಹಾಡನ್ನು ಬಿಟ್ಟು ಕುವೆಂಪುರವರ ಈ ಹಾಡನ್ನು ನಾಡಗೀತೆಯಾಗಿ ಆಯ್ಕೆ ಮಾಡಲಾಯಿತೆಂದು ಹೇಳುತ್ತಾರೆ.

- ರಮಾನಂದ ಶರ್ಮಾ, ಬೆಂಗಳೂರು

ನಾನು 'ಪತ್ರಿಕೆ' ಯ ಅಭಿಮಾನಿಯಾಗಿದ್ದು ಪ್ರತಿ ವಾರವೂ ತಪ್ಪದೆ ಓದುತ್ತೇನೆ. ವರದಿಗಳು ತುಂಬಾ ರೋಚಕವಾಗಿದ್ದು ಆಸಕ್ತಿದಾಯಕವಾಗಿರುತ್ತವೆ ಹಾಗೂ ನಾನು ರಾ.ಸೋಮನಾಥ್ ಅವರ ಅಭಿಮಾನಿ ಕೂಡಾ.

ಅಂದಹಾಗೆ ಕಳೆದ ಸಂಚಿಕೆಯಿಂದ ಪ್ರಕಟವಾಗುತ್ತಿರುವ ನೂರ್ ಶ್ರೀಧರ್ ಅವರ ಜೈಲ್ ಅನುಭವ ತುಂಬಾ ಸೊಗಸಾಗಿದೆ.

ಪತ್ರಿಕೆಯು ಹೀಗೆ ಮುಂದುವರೆಯಲಿ ಎಂದು ಈ ಮೂಲಕ ಹಾರೈಸುತ್ತೇನೆ...

-ಪುರುಷೋತ್ತಮ್, ಚಿತ್ರದುರ್ಗ

ಮೈಸೂರಿನಲ್ಲಿ ಭಗವದ್ಗೀತೆ ಸುಡುವ ವಿಚಾರವಾದಿಗಳ ಹೇಳಿಕೆಯ ಸುತ್ತ ವಾದವಿವಾದ ಮಾಡುವ ಬದಲು ಭಗವದ್ಗೀತೆಯ ಹೆಸರಲ್ಲಿ ಕೆಟರಿಂಗ್ ದಂಧೆ ಮಾಡಿ ಲಕ್ಷಾಂತರ ಬಡ ಶಾಲಾಮಕ್ಕಳಿಗೆ ಈರುಳ್ಳಿ ಬೆಳ್ಳುಳ್ಳಿ ಇಲ್ಲದ ಅಪೌಷ್ಟಿಕ ಆಹಾರ ಕೊಡುತ್ತಿರುವ ಹಾಗೂ ಸಾವಿರಾರು ಸ್ತ್ರೀ ಸ್ವಸಹಾಯ ಸಂಘಗಳ ಅಸ್ತಿತ್ವಕ್ಕೆ ಸಂಚಕಾರ ತಂದಿರುವ ಹರೆಕೃಷ್ಣ ಪಂಥದವರ ವಿರುದ್ಧ ಯಾಕೆ ಯಾರೂ ಮಾತನಾಡುತ್ತಿಲ್ಲ. ಮೂಲತಃ ಹರೇ ಕೃಷ್ಣ ಪಂಥವನ್ನು ಸ್ಥಾಪಿಸಿದ್ದು ಕೇವಲ ಕೃಷ್ಣ ಭಕ್ತಿ ಪ್ರಚಾರ ಮಾಡಲು ಹಾಗೂ ಗೀತೆಯ ಬೋಧನೆಯನ್ನು ಸಾಮಾನ್ಯ ಜನರಿಗೆ ಮುಟ್ಟಿಸಲೇ ಹೊರತು ಲಾಭದಾಯಕ ಕೆಟರಿಂಗ್ ವ್ಯಾಪಾರ ಮಾಡಲು ಅಲ್ಲವೇ ಅಲ್ಲ.

ಭಗವದ್ಗೀತೆ ಸುಡುವ ಬದಲು ಕೃಷ್ಣ ಭಕ್ತಿಯ ಹೆಸರಲ್ಲಿ ಲಾಭದಾಯಕ ದಂಧೆ ಮಾಡಿ ಬಡ ಮಹಿಳೆಯರ ಹೊಟ್ಟೆಗೆ



ಒದೆಯುತ್ತಿರುವವರನ್ನು ಹಾಗೂ ಇತರ ಎಲ್ಲ ಹಿಂದೂ ದೇವತೆಗಳು ತಮ್ಮ ಕೃಷ್ಣನ ಸೇವಕರು ಎಂದು ಹೇಳಿ ದೇವರನ್ನೇ ಅವಮಾನಿಸಿ ಇತರ ಎಲ್ಲಾ ಹಿಂದೂಗಳ ಭಾವನೆ ಘಾಸಿಗೊಳಿಸುತ್ತಿರುವ ಹರೇ ಕೃಷ್ಣ ಪಂಥದವರನ್ನು ವಿಚಾರವಾದಿಗಳು ಹರೋಹರ ಮಾಡಿದರೆ ಒಳಿತು.

-ವೀರಪ್ಪ ದಿ ನಾಯ್ಕ್, ಮಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು

ಆದಿಲ್ ಶಾಹಿಗಳ ವಿಜಾಪುರ-ಭಾವೈಕ್ಯದ ಆಗರ

15 ⏮

(1580-1626) ಉತ್ತರಾಧಿಕಾರಿಯಾದ. ಆಗ ಒಂಬತ್ತು ವರ್ಷ ವಯಸ್ಸು. ವೀರಮಹಿಳೆ, ಕವಯತ್ರಿ ಹಾಗೂ ಕಲಾವಿದೆ ಚಾಂದಬೀಬಿ ಆಡಳಿತದ ಉಸ್ತುವಾರಿಯನ್ನು ನೋಡಿಕೊಳ್ಳತೊಡಗಿದಳು. ಆದರೆ ಪ್ರಧಾನಿ ಕಮೀಲ್ ಖಾನ್ ಅವಳ ಬಗ್ಗೆ ಅಸಡ್ಡೆ ತೋರಿದ್ದರಿಂದ ಆತನ ಕೊಲೆ ಮಾಡಿಸಿದಳು.

ಅನೇಕ ಏರುಪೇರುಗಳ ನಂತರ ಅಫಜಲ್ ಖಾನ್ ಪ್ರಧಾನಿಯಾದ. ಯಶ್ಶೋ ಪಂಡಿತ ಮಂತ್ರಿಯಾದ. 1582ರಲ್ಲಿ ಸಮಯ ಸಾಧಿಸಿ, ಅಹ್ಮದ್ ನಗರ, ಗೋಲ್ಕೊಂಡಾ ಮತ್ತು ಬೀದರ್ ಸುಲ್ತಾನರು ಒಂದಾಗಿ ವಿಜಾಪುರದ ಮೇಲೆ ದಾಳಿ ಮಾಡಲು ಬಂದರು. ಒಂದು ವರ್ಷ ವಿಜಾಪುರಕ್ಕೆ ಮುತ್ತಿಗೆ ಹಾಕಿದರು. ವಿಜಾಪುರದವರು ವೈರಿಗಳನ್ನು ಓಡಿಸುವಲ್ಲಿ ಯಶಸ್ವಿಯಾದರು.

ಗೋಲ್ಕೊಂಡಾ ಸುಲ್ತಾನನ ತಂಗಿ ತಾಜ್ ಸುಲ್ತಾನಾ ಜೊತೆ ಇಬ್ರಾಹಿಂನ ಮದುವೆಯಾಯಿತು. ಇಬ್ರಾಹಿಂ ತನ್ನ ಸಹೋದರಿ ಖತಿಜಾ ಸುಲ್ತಾನಳನ್ನು ಅಹ್ಮದ್ ನಗರದ ಸುಲ್ತಾನ್ ಹುಸೇನ್‌ಗೆ ಕೊಟ್ಟು ಮದುವೆ ಮಾಡಿದ. ಹೀಗೆ ಶಾಂತಿಯ ವಾತಾವರಣ ಮೂಡಿತು.

ತಾರಕಕ್ಕೇರಿದ ಭಾವೈಕ್ಯ

ಮೊಘಲರ ದಾಳಿಗಳನ್ನು ತಡೆಯುವುದು ಶಾಂತಿಪ್ರಿಯ ಎರಡನೇ ಇಬ್ರಾಹಿಂಗೆ ಅವಶ್ಯವಾಗಿತ್ತು. ಅಕ್ಬರನಿಗೆ ಸಹಾಯಹಸ್ತ ಚಾಚಿದ. ತನ್ನ ಮಗಳನ್ನು ಅಕ್ಬರ್‌ನ ಮಗ ದಾನಿಯಲ್‌ಗೆ ಮದುವೆ ಮಾಡಿಕೊಟ್ಟ.

ಎರಡನೇ ಇಬ್ರಾಹಿಂ ಮರಾಠಿ ಭಾಷೆಗೆ ಆಡಳಿತ ಭಾಷೆಯ ಸ್ಥಾನ ನೀಡಿದ. ಪಾರ್ಸಿ ಭಾಷೆ ರಾಜವಂಶದ ಭಾಷೆಯಾಗಿದ್ದರೂ ಆತ ಸ್ಥಳೀಯ ಭಾಷೆಯಲ್ಲೇ ಮಾತನಾಡುತ್ತಿದ್ದ. ಅಕ್ಬರನ ದೂತ ಅಸದ್ ಬೇಗ್ ಬಂದಾಗ್ಯೂ ಆತ ಮರಾಠಿಯಲ್ಲೇ ಮಾತನಾಡಿದ. ರಾಜವಂಶದ ಭಾಷೆಗಿಂತ ನಾಡಿನ ಭಾಷೆಯೇ ಆಡಳಿತ ಭಾಷೆಯಾಗಬೇಕು ಎಂಬುದು ಆತನ ದೃಢ ನಿರ್ಧಾರವಾಗಿತ್ತು. ಇಡೀ ಕಂದಾಯ ಇಲಾಖೆ ಹಿಂದೂಗಳ ಕೈಯಲ್ಲಿತ್ತು. ಆತ ಹಿಂದೂ ಸಂತರನ್ನು ಗೌರವಿಸುತ್ತಿದ್ದ. ಅವರ ಸಲಹೆಗಳನ್ನು ಕೇಳುತ್ತಿದ್ದ. ಆತನ ಆಸ್ಥಾನದಲ್ಲಿ 300 ಮಂದಿ ಹಿಂದೂ ಕವಿಗಳು ಮತ್ತು ತತ್ತ್ವಜ್ಞಾನಿಗಳಿದ್ದರು. ಆತ ಅರಮನೆ ಪಕ್ಕದಲ್ಲೇ ಕಟ್ಟಿಸಿದ ನರಸಿಂಹ ದೇವಸ್ಥಾನ ಇಂದಿಗೂ ಇದೆ. ನಾಣ್ಯಗಳ ಮೇಲೆ 'ನೌರಸ್ ಮುಹರ್ ಏ ಆದಿಲ್ ಷಾಹಿ ಜಗದ್ಗುರು ದಾದ್ ಇಲಾಹಿ' ಎಂಬ ವಾಕ್ಯ ರಾರಾಜಿಸುತ್ತಿತ್ತು. ಜನ ಅವನನ್ನು ಪ್ರೀತಿಯಿಂದ ಜಗದ್ಗುರು ಎಂದು ಕರೆಯುತ್ತಿದ್ದರು. ಅಕ್ಬರನ ಸರ್ವಧರ್ಮ ಸಮಭಾವದ 'ದೀನ್ ಏ ಇಲಾಹಿ' ತತ್ತ್ವಕ್ಕೂ ಇಬ್ರಾಹಿಂನ 'ದಾದ್ ಏ ಇಲಾಹಿ' ತತ್ತ್ವಕ್ಕೂ ಸಾಮ್ಯವಿದೆ.

ಕವಿಯೂ ಆಗಿದ್ದ ಆತನ ಸಂಗೀತ ಗ್ರಂಥ 'ಕಿತಾಬೇ ನೌರಸ್' ದಖನಿ ಉರ್ದುವಿನ ಶ್ರೇಷ್ಠ ಕೃತಿಗಳಲ್ಲಿ ಒಂದಾಗಿದೆ. ಆತನಿಗೆ ನಮಾಜ್‌ನಲ್ಲಿ ಶ್ರದ್ಧೆ ಇದ್ದಂತೆ ಗಣಪತಿ ಮತ್ತು ಸರಸ್ವತಿ ಬಗ್ಗೆ ಗೌರವವಿತ್ತು.

"ತುರಕ ಹೋ ಯಾ ಬಮ್ಮನ್
ಭಾಗ್ಯವಾನ ವಹೀ ಹೈ
ಜಿಸ್ ಪರ್ ಮಾ ಸರಸ್ವತೀಕೀ ಕೃಪಾ ಹೈ"

'ಮುಸ್ಲಿಮನಿರಲಿ ಬ್ರಾಹ್ಮಣನಿರಲಿ ಸರಸ್ವತಿಯ ಕೃಪೆ ಇದ್ದವನು ಮಾತ್ರ ಭಾಗ್ಯವಂತ' ಎಂದು ಇಬ್ರಾಹಿಂ ಬರೆದಿದ್ದಾನೆ. ಜನರನ್ನು ಒಂದುಗೂಡಿಸುವುದು ದೇವರನ್ನು ಬೆಂಬಲಿಸುವ ಕೆಲಸ (ದಾದ್ ಏ ಇಲಾಹಿ) ಎಂದು ಆತ ಭಾವಿಸಿದ್ದ. ಜಗದ್ಗುರು ಇಬ್ರಾಹಿಂ ತನ್ನ ಮತ್ತು ಪ್ರಜೆಗಳ ಮಧ್ಯೆ ಅಂತರ ಇಟ್ಟುಕೊಳ್ಳಲಿಲ್ಲ.

ಧರ್ಮ, ಭಾಷೆ ಮತ್ತು ಸಂಗೀತದಲ್ಲಿ ಸಮ್ಮಿಶ್ರ ಸಂಸ್ಕೃತಿಯನ್ನು ಸ್ಥಾಪಿಸಿದಂತೆಯೆ ವಾಸ್ತುಶಿಲ್ಪ ಮತ್ತು ಸಂಗೀತಗಳಲ್ಲಿಯೂ ಪ್ರಯೋಗ ಮಾಡಿದ. ಮೊದಲನೇ ಅಲಿ ಆದಿಲ್ ಶಹಾ ಆರಂಭಿಸಿದಂತಹ ವಿಜಾಪುರ ಶೈಲಿಯ ಚಿತ್ರಕಲೆ ಆತನಿಂದಾಗಿ ಪರಿಪೂರ್ಣತೆ ಪಡೆಯಿತು. ಇತಿಹಾಸ ರಚನೆಗಾಗಿ ಇಬ್ರಾಹಿಂ ನಿರ್ಭಿಡೆಯ ಫರಿಶ್ತಾನನ್ನು ನೇಮಿಸಿದ.

ವಿಜಾಪುರ ನಗರದಲ್ಲಿ ಅಮೃತಶಿಲೆ ಮತ್ತು ನದಿ ಇದ್ದಿದ್ದರೆ ಇಬ್ರಾಹಿಂ ರೋಜಾದ ಶಿಲ್ಪಸೌಂದರ್ಯ ತಾಜ್‌ಮಹಲ್ ಅನ್ನು ಮೀರಿಸುತ್ತಿತ್ತು ಎಂದು ವಾಸ್ತುಶಿಲ್ಪಶಾಸ್ತ್ರಜ್ಞ ಜೇಮ್ಸ್ ಫರ್ಗ್ಯೂಸನ್ ಹೇಳಿದ್ದಾನೆ. ಪತ್ನಿ ತಾಜ್ ಸುಲ್ತಾನಾಳ ಸಮಾಧಿಗಾಗಿ ಇಬ್ರಾಹಿಂ ಇದನ್ನು ಕಟ್ಟಿಸಿದ. ಆದರೆ ಆತನೇ ಮೊದಲು ಸತ್ತ. ಅದು ಇಬ್ರಾಹಿಂ ರೋಜಾ ಆಯಿತು.

ಮುಂದುವರಿದ ಪರಂಪರೆ

ಎರಡನೇ ಇಬ್ರಾಹಿಂ ಆದಿಲ್ ಶಹಾನ ಮರಣದ ನಂತರ ಮುಹಮ್ಮದ್ ಆದಿಲ್ ಶಹಾ (1626 - 1656) ವಿಜಾಪುರಕ್ಕೆ ರಾಜನಾದ. ತಂದೆಯ ಪರಂಪರೆಯನ್ನೇ ಮುಂದುವರಿಸಿದ. ಮುರಾರಿ ಪಂಡಿತ ಆತನ ಸೇನಾಧಿಪತಿಯಾಗಿದ್ದ. ಆತ ಶಹಜಹಾನನ ದಾಳಿಗಳನ್ನು ಸಮರ್ಥವಾಗಿ ಎದುರಿಸಿದ.

ಮುಹಮ್ಮದ್ ಆದಿಲ್ ಶಹಾ ವಿಶ್ವಪ್ರಸಿದ್ಧ ಗೋಳಗುಮ್ಮಟ ಕಟ್ಟಿಸಿದ. ಗೋಳಗುಮ್ಮಟದಲ್ಲಿ ಆತನ ಮತ್ತು ಕುಟುಂಬದವರ ಗೋರಿಗಳಿವೆ. ಈತನ ಆಳ್ವಿಕೆಯಲ್ಲಿ ನೀರು ಸರಬರಾಜು ವ್ಯವಸ್ಥೆ ಉನ್ನತ ಮಟ್ಟಕ್ಕೇರಿತು. ಬೇಗಂ ತಾಲಾಬ್ (ಕೆರೆ) ನಿಂದ ನಗರಕ್ಕೆ ನೀರು ಪೂರೈಕೆ ವ್ಯವಸ್ಥೆ ಮಾಡಿದ.


ಮುಹಮ್ಮದ್ ಆದಿಲ್ ಶಹಾನ ನಂತರ ಆತನ ಮಗ ಎರಡನೇ ಅಲಿ ಆದಿಲ್ ಶಹಾ (1656 - 1672) ರಾಜನಾದ. ಈತ ಔರಂಗಜೇಬನ ದಾಳಿಯನ್ನು ಎದುರಿಸಬೇಕಾಯಿತು. ಅಫಜಲ್ ಖಾನ್ ಆತನ ಸೇನಾಪತಿಯಾಗಿದ್ದ. ಶಿವಾಜಿ, ಅಫಜಲ್ ಖಾನನನ್ನು ಕೊಲೆ ಮಾಡಿದ ನಂತರ ಮೊಘಲರನ್ನು ಎದುರಿಸುವುದಕ್ಕಾಗಿ ಎರಡನೇ ಅಲಿ ಆದಿಲ್ ಶಹಾ ಮತ್ತು ಗೋಲ್ಕೊಂಡಾ ಅರಸರ ಜೊತೆ ಒಪ್ಪಂದ ಮಾಡಿಕೊಂಡ. ಆದರೆ ಮುಂದೆ ಶಿವಾಜಿಯ ಸಾವಿನಿಂದಾಗಿ ಅದು ಕಾರ್ಯಗತವಾಗಲಿಲ್ಲ. ಎರಡನೇ ಅಲಿ ಆದಿಲ್ ಶಹಾ 35ನೇ ವರ್ಷಕ್ಕೇ ಸತ್ತದ್ದರಿಂದ ರಾಜ್ಯದ ಮೇಲೆ ಭಾರಿ ಪರಿಣಾಮ ಬೀರಿತು. (ಬಾರಾ ಕಮಾನ್ ಆತನ ಸಮಾಧಿ ಸ್ಥಳ). ಆತನ ಮಗ ಸಿಕಂದರ್ ಆದಿಲ್ ಶಹಾ (1672 - 1686) ಸಿಂಹಾಸನ ಏರಿದಾಗ ಐದು ವರ್ಷದ ಬಾಲಕ.

ಸಿಕಂದರನ ಆಳ್ವಿಕೆ ಇದ್ದ ಸಂದರ್ಭದಲ್ಲಿ ಸ್ವತಃ ಔರಂಗಜೇಬ್ ಸೈನ್ಯದೊಂದಿಗೆ ಬಂದು ವಿಜಾಪುರದ ಮೇಲೆ ದಾಳಿ ಮಾಡಿದ. ವಿಜಾಪುರ ಮೊಘಲ್ ಸಾಮ್ರಾಜ್ಯದ ಭಾಗವಾಗಿ ಗತವೈಭವದ ನೆನಪಿನೊಂದಿಗೆ ಉಳಿಯಿತು.

ಇಮಾರತುಗಳ ದುರ್ಗತಿ

ಆದಿಲ್‌ಶಾಹಿಗಳು ವಿಜಾಪುರ ನಗರವನ್ನು ಜಗತ್ತಿನ ಸುಂದರ ನಗರಗಳ ಸಾಲಿಗೆ ತಂದು ನಿಲ್ಲಿಸಿದರು. ವಿಶಾಲವಾದ ಬೀದಿಗಳು, ಕಂಗೊಳಿಸುವ ಉದ್ಯಾನವನಗಳು, ಮಂತ್ರಮುಗ್ಧ ಮಾಡುವ ಐತಿಹಾಸಿಕ ಕಟ್ಟಡಗಳು, ಪುಟಿಯುವ ಕಾರಂಜಿಗಳೊಂದಿಗೆ ರಂಜಿಸುವ ಕಲ್ಯಾಣಿಗಳು ಮತ್ತು ಕೋಟೆ ಕೊತ್ತಲಗಳು ನೋಡುಗರ ಹೃದಯ ಸೂರೆಗೊಂಡಿದ್ದವು.

ಇನ್ನೂರು ವರ್ಷಗಳ ಸತತ ಪ್ರಯತ್ನದಿಂದ ಈ ಎಲ್ಲವುಗಳ ನಿರ್ಮಾಣವಾಗಿದೆ. ಆದರೆ ಜನ ಮತ್ತು ಪುರಾತತ್ತ್ವ ಇಲಾಖೆಯ ಉದಾಸೀನತೆಯಿಂದಾಗಿ ಜಗತ್ಪ್ರಸಿದ್ಧ ಕಟ್ಟಡಗಳಿಂದು ವಿನಾಶದ ಅಂಚಿಗೆ ಬಂದುನಿಂತಿವೆ. ಗೋಳಗುಮ್ಮಟವೇ ಎಲೆ, ಅಡಿಕೆ, ತಂಬಾಕು ತಿಂದು ಉಗುಳುವ ಸ್ಥಳವಾಗಿದೆ ಎಂದಮೇಲೆ ಉಳಿದ ಐತಿಹಾಸಿಕ ಕಟ್ಟಡಗಳ ಗತಿ ಏನಾಗಿರಬಹುದು ಎಂಬುದನ್ನು ಊಹಿಸಲಸಾಧ್ಯ. ಅನೇಕ ಕಟ್ಟಡಗಳ ಅಕ್ಕಪಕ್ಕದ ಜಾಗಗಳು ಮಲಮೂತ್ರಗಳ ತಾಣಗಳಾಗಿವೆ. ಇಬ್ರಾಹಿಂ ರೋಜಾದ ಮಿನಾರುಗಳ ಮೇಲೂ ಗಿಡಗಂಟಿಗಳು ಕಾಣಿಸುತ್ತಿವೆ. ಹೀಗೇ ಬಿಟ್ಟರೆ ಕಲ್ಲುಗಳು ಉರುಳುವ ದಿನಗಳು ದೂರಿಲ್ಲ.


ಇಬ್ರಾಹಿಂ ರೋಜ್

ವಿವಿಧ ಆದಿಲ್ ಶಹಾಗಳು ಕಟ್ಟಿಸಿದ ಕೆಲ ಇಮಾರತುಗಳ ವಿವರ

ಯುಸೂಫ್ ಆದಿಲ್ ಶಹಾ (1489 - 1510) ಅರಕಿಲ್ಲಾ ಕಟ್ಟಿಸಿದ.



ಇಸ್ಮಾಯಿಲ್ ಆದಿಲ್ ಶಹಾ (1510 - 1534) ಚಂಪಾ ಮಹಲ್ ನಿರ್ಮಿಸಿದ.

ಮೊದಲನೇ ಇಬ್ರಾಹಿಂ ಆದಿಲ್ ಶಹಾ (1535 - 1557) ಗಾಲಿಬ್ ಮಸೀದಿ, ಸೋಲಾಧಾಮ್ ಮಹಲ್, ಇಬ್ರಾಹಿಂಪುರ ಮಸೀದಿ ಕಟ್ಟಿಸಿದ. ಅರಕಿಲ್ಲೆಯನ್ನು ನವೀಕರಣಗೊಳಿಸಿದ.


ಮೊದಲನೇ ಅಲಿ ಆದಿಲ್ ಶಹಾ (1557 - 1580) ಜುಮ್ಮಾ ಮಸೀದಿ, ಚಾಂದ್ ಬಾವಡಿ, ಗಗನ ಮಹಲ್ ಮತ್ತು ಅಲಿ ಗುಂಬಜ್ ಕಟ್ಟಿಸಿದ. ವಿಜಾಪುರ ಸುತ್ತಲಿನ ಬೃಹತ್ ಕೋಟೆ ಕಟ್ಟಿಸಿದ. ಇದಕ್ಕೆ ಆರು ಅಗಸೆ ಬಾಗಿಲುಗಳು ಮತ್ತು 96 ಬುರುಜುಗಳಿವೆ.

ಎರಡನೇ ಇಬ್ರಾಹಿಂ ಆದಿಲ್ ಶಹಾ (1580 - 1626) ಸಾತ್ ಮಂಜಿಲ್ ಅರಮನೆ, ಆನಂದ ಮಹಲ್, ಇಬ್ರಾಹಿಂ ರೋಜಾ, ನೌರಸಪುರದ ಸಂಗೀತ ಮಹಲ್, ಮಲಿಕಾ ಜಹಾನ್ ಮಸ್ಜಿದ್, ತಾಜ್ ಬಾವಡಿ ಮುಂತಾದವುಗಳನ್ನು ಕಟ್ಟಿಸಿದ.

ಮುಹಮ್ಮದ್ ಆದಿಲ್ ಶಹಾ (1626 - 1656) ಗೋಳಗುಮ್ಮಟ ಮತ್ತು ಆಸಾರ ಮಹಲ್ ನಿರ್ಮಿಸಿದ.

ಎರಡನೇ ಅಲಿ ಆದಿಲ್ ಶಹಾ (1656 - 1672) ಬಾರಾ ಕಮಾನ್ ಎಂಬ ತನ್ನ ಸಮಾಧಿ ಕಟ್ಟಡ ನಿರ್ಮಿಸಲು ಪ್ರಾರಂಭಿಸಿದ. ಆದರೆ ಆತನ ಅಕಾಲ ಮೃತ್ಯುವಿನಿಂದಾಗಿ ಆ ಬೃಹತ್ ಕಟ್ಟಡ ಅಪೂರ್ಣವಾದರೂ ಮನಮೋಹಕವಾಗಿದೆ.

ವಿಜಾಪುರ ಆದಿಲ್‌ಶಾಹಿಗಳ ಭಾವೈಕ್ಯ ಸಾಧನೆ ಮತ್ತು ಸಾಮಾಜಿಕ ಕಾಳಜಿಗಳು ನವಭಾರತಕ್ಕೆ ಮಾರ್ಗದರ್ಶಕವಾಗಬಲ್ಲವೆ?



○ ರಂಜಾನ್ ದರ್ಗಾ

ಸೂರ್ಯನ ಬೆಳಕಿನ ಕಥೆ


16 ⏮

ಕಾಣುವುದೇನೋ ಅದಕ್ಕೇ 1928ರಲ್ಲಿ ರಷಿಯನ್ ಅಮೆರಿಕನ್ ವಿಜ್ಞಾನಿ ಜಾರ್ಜ್ ಗ್ಯಾಮೋವ್ ಅವರು ಕ್ವಾಂಟಂ ಸೂತ್ರದಿಂದ ವಿವರಿಸಿದರು. ಇಲ್ಲಿನ ಒಂದೇ ವಿದ್ಯುತ್ ಲಕ್ಷಣಗಳ ಕಣಗಳೂ ತಮ್ಮ ನಡುವಣ "ಶೂನ್ಯ" ವಲಯ ಹೊಂದುವುದಿಲ್ಲ. ಇದನ್ನೇ ಈಗ ಗ್ಯಾಮೋವ್ ಗುಣಕವೆಂದು ಗುರುತಿಸಲಾಗಿದೆ. ಇದನ್ನು ವಿಕಿರಣಗಳ ವಿವರದಲ್ಲಿ ಬಳಸಲಾಗುತ್ತದೆ. ಮುಂದಿನ ಸಂಶೋಧಕರು ಅದು ಹೇಗೆ ನಕ್ಷತ್ರಗಳ ಒಳಗಿನಿಂದ ಶಾಖವು ಹೊರಸೂಸುವುದೆಂಬುದನ್ನು ಈ ಗುಣಕ ಬಳಸಿಯೇ ಕಂಡುಹಿಡಿದರು. ಒಂದೇ ವಿದ್ಯುತ್ ಲಕ್ಷಣಗಳ ಎರಡು ಕಣಗಳು ಉಂಟುಮಾಡುವ ಶಕ್ತಿಯನ್ನು ಅರಿಯಲೂ ಗ್ಯಾಮೋವ್ ಗುಣಕವನ್ನು ಬಳಸಿಯೇ ಮಾಡಬೇಕಾಗುತ್ತದೆ. ಇದೆಲ್ಲಾ ಸರಿಯಾದ ಅರ್ಥವಾಗುವ ವಿವರ ತಲುಪಿದ್ದು 1938ರಲ್ಲಿ, ವಾನ್ ವೆಝ್ಸಾಕರ್ ಅವರ ನಕ್ಷತ್ರಗಳ ಬೆಳಕಿನ ಚಿಂತನೆಗಳಿಂದ. ಅವರು ಇಂಗಾಲ-ಸಾರಜನಕ-ಆಮ್ಲಜನಕ ಚಕ್ರವೆಂದು ಮುಂದೆ ಪರಿಚಿತವಾದ ನ್ಯೂಕ್ಲಿಯಾರ್ ಚಕ್ರವನ್ನು ಕಂಡುಹಿಡಿದಮೇಲೆ ಹೆಚ್ಚಿನ ವಿವರಗಳು ಲಭ್ಯವಾದವು. ವೆಝ್ಸಾಕರ್ ನಕ್ಷತ್ರಗಳಿಂದ ಹೊಮ್ಮು ಶಕ್ತಿಯ ಪ್ರಮಾಣದ ಗತಿಯನ್ನು ಕಂಡುಹಿಡಿಯಲಿಲ್ಲ. ಆಗ ನ್ಯೂಕ್ಲಿಯಾರ್ ವಿಜ್ಞಾನದ ಹೊಸ ಶಕೆ ಆರಂಭವಾಗುವ ಕಾಲ ಸನ್ನಿಹಿತವಾಗಿತ್ತು. 1938ರ ಏಪ್ರಿಲ್‌ನಲ್ಲಿಯೇ ಹ್ಯಾನ್ಸ್ ಬೆಥೆಯ ಫಲಿತಗಳು ಹೆಚ್ಚಿನ ಮತ್ತು ನಿಖರವಾದ ಸಂಗತಿಗಳನ್ನು ಬಯಲು ಮಾಡಿದವು. ಇದನ್ನು "ಬೆಥೆಯ ಬೈಬಲ್" ಎಂದೇ ಕರೆಯಲಾಗುತ್ತದೆ. ಇದರಿಂದಲೇ ಜಲಜನಕವು ಉರಿದು ಹೀಲಿಯಂ ಆಗುವ ನ್ಯೂಕ್ಲಿಯಾರ್ ಮಾಹಿತಿಯು ಲಭ್ಯ.

ಬೆಥೆಯವರ ಮುಂದಿನ ಸಂಶೋಧನೆಗಳಿಂದ ನ್ಯೂಕ್ಲಿಯಾರ್ ಪ್ರಕ್ರಿಯೆಗಳ ಮೂಲಭೂತ ವಿವರಗಳು ಅರ್ಥವಾದವು. ಅಲ್ಲದೆ ಜಲಜನಕವೇ ಹೀಲಿಯಂ ಆಗುವ ಕ್ರಿಯೆಯಿಂದ ಸೂರ್ಯನೇ ಅಷ್ಟೇಕೆ ಬಹುಪಾಲು ನಕ್ಷತ್ರಗಳ ಬೆಳಗೂ ಸಾಧ್ಯವೆಂಬುದು ಸಾಬೀತಾಯಿತು. ಅದರಿಂದ ಸೂರ್ಯನಲ್ಲಿ ಜಲಜನಕವೂ ಅಗಾಧವಾಗಿರುವುದೆಂಬ ಮಾಹಿತಿಯು, ಅಷ್ಟೇ ಅಲ್ಲ ಇಡೀ ವಿಶ್ವದಲ್ಲೇ ಜಲಜನಕವು ಅತೀ ಹೆಚ್ಚಿನ ಭಾಗವಾಗಿರುವುದೆಂಬ ಸಂಗತಿಯೂ ಹೊರಬಿತ್ತು. ಬಹುಶಃ ಜಲಜನಕವು ಮೂಲವಸ್ತುಗಳಲ್ಲಿ ಅತ್ಯಂತ ಸರಳವಾದುದು ಎಂಬುದೂ ಕಾರಣವಿದ್ದೀತು. ಬೆಥೆಯವರ ಶೋಧದಿಂದಲೇ ನಕ್ಷತ್ರಗಳ ದ್ರವ್ಯರಾಶಿ ಮತ್ತು ತೇಜಸ್ಸುಗಳ ನಡುವಣ ಸಂಬಂಧಗಳು ಅರ್ಥವಾದವು. ಸೌರಕೇಂದ್ರದ ಉಷ್ಣತೆಯು ಈಗಿನ ಅರಿವಿನಂತೆ 16 ದಶಲಕ್ಷ ಡಿಗ್ರಿ ಕೆಲ್ವಿನ್‌ಗಳು. ಅದಕ್ಕೂ ಬೆಥೆಯವರ ಲೆಕ್ಕಾಚಾರಗಳು ನೆರವಾಗಿವೆ. ಸೌರಕೇಂದ್ರವೊಂದು ಬೃಹತ್ ಶಾಖದ ನ್ಯೂಕ್ಲಿಯಾರ್ ಬಾಂಬ್ ಎಂಬ ಕುರಿತೂ ವಿಶ್ಲೇಷಣೆಗಳಾದವು. ಇದರ ನೆಪದಲ್ಲೇ ಇತರೇ ಬೇರೆ ಬೇರೆ ನಕ್ಷತ್ರಗಳ ಶಾಖೋತ್ಪನ್ನ ಪರಿಮಾಣಗಳ ಲೆಕ್ಕಾಚಾರಗಳೂ ಲಭ್ಯವಾದವು. ನಕ್ಷತ್ರಗಳ ಅರಿವಿನಲ್ಲಿ ಇದೊಂದು ಮಹತ್ತರವಾದ ಪಾತ್ರವಾಗಿದೆ. ಸೈದ್ಧಾಂತಿಕ ಮತ್ತು ಪ್ರಾಯೋಗಿಕ ವಿಚಾರಗಳ ಸಂಘರ್ಷಗಳು ವೈಜ್ಞಾನಿಕ ಬೆಳವಣಿಗೆಯಲ್ಲಿ ಮಹತ್ತರ ಪಾತ್ರ ವಹಿಸಿದವು. ಹಾಗಾಗಿ ಊಹೆ ಮತ್ತು ಅಳತೆಯ ಬಗೆಗೂ ಇವು ಬೆಳಕು ಚೆಲ್ಲಿದವು. ಇವೆಲ್ಲಾ ನಿಖರವಾಗಿ ಪ್ರಾಯೋಗಿಕವಾಗಿ ಅಳೆಯಲು ತುಂಬಾ ಕಷ್ಟ. ಏಕೆಂದರೆ ಸೂರ್ಯನ ಕೇಂದ್ರದಿಂದ ಹೊರಟ ಬೆಳಕು ಅದರ ಮೇಲ್ಮೈ ತಲುಪಿ ಅಲ್ಲಿಂದ ಹೊರಸೂಸುವ ಬೆಳಗಾಗಲು ಸುಮಾರು 10 ದಶಲಕ್ಷ ವರ್ಷಗಳೇ ಬೇಕಾಗುತ್ತದೆ. ಇನ್ನು ಕೇಂದ್ರದ ಪ್ರಯೋಗಿಕ ಸಿದ್ಧಾಂತಗಳ ಅರಿವು ದೂರದ ಮಾತು. ನಿಸರ್ಗವು ಒಂದು ಅತ್ಯದ್ಭುತವಾದ ಕೌತುಕ. ಇದರ ರಹಸ್ಯಗಳ ಬೇಧಿಸುವ ಒತ್ತಾಸೆಯ ಸಂಶೋಧನೆಗಳು ಮುಂದುವರೆದೇ ಇವೆ. ಸೌರ ಬೆಳಕೆ ನಿರಂತರವಾದುದು. ○

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 18-03-2015 RNI No. KARKAN2005/14648

ಮೋದಿ ಎಫೆಕ್ಟ್: ಚಿತ್ರೋದ್ಯಮ ಬಂದ್



"ಅಚ್ಛೇ ದಿನ್ ಆಯೇಗ ಭಾರತೀಯೋ ಅಚ್ಛೇ ದಿನ್ ಆಯೇಗ" ಎನ್ನುತ್ತಿದ್ದ ಮೋದಿ ಸರ್ಕಾರ ಕಳೆದ ವಾರ ಮಂಡಿಸಿದ ಬಜೆಟ್ ಚಿತ್ರೋದ್ಯಮದ ಪಾಲಿಗೆ ಅಚ್ಛೇ ದಿನ್ ಬದಲಾಗಿ ಬೂರಾ ದಿನ್ ಆಗಿ ಪರಿವರ್ತಿಸಿದೆ. ವಿಷಯ ಏನಪ್ಪ ಅಂದರೆ ಕೇಂದ್ರ ಸರ್ಕಾರ ಮಂಡಿಸಿದ ಬಜೆಟ್‌ನಲ್ಲಿ ಸೇವಾ ತೆರಿಗೆಯನ್ನು ಶೇ. 14ಕ್ಕೆ ಏರಿಸಲಾಗಿದೆ. ಇದು ಚಿತ್ರರಂಗದ ಮೇಲೆ ದೊಡ್ಡ ಹೊರೆಯಾಗಲಿದೆ. ಸೇವಾ ತೆರಿಗೆಯಲ್ಲಿ ರಿಯಾಯಿತಿ ನಿರೀಕ್ಷಿಸಿದ್ದ ಚಿತ್ರೋದ್ಯಮಕ್ಕೆ ಇದು ಆಘಾತ ತಂದಿದೆ. ಈಗಿರುವ ತೆರಿಗೆಯನ್ನು ಕಡಿಮೆ ಮಾಡಬೇಕು ಅಥವಾ ರದ್ದುಪಡಿಸಬೇಕು ಎಂಬುದು ಚಿತ್ರೋದ್ಯಮದ ಆಶೆಯಾಗಿತ್ತು.

ಅದರೆ ಮೋದಿ ಸರ್ಕಾರ ಸೇವಾ ತೆರಿಗೆಯನ್ನು ಹೆಚ್ಚಿಸಿದ್ದು ಚಿತ್ರೋದ್ಯಮಕ್ಕೆ ಆಶ್ಚರ್ಯವನ್ನುಂಟುಮಾಡಿದೆ. ಅದ್ದರಿಂದ ಇದನ್ನು ವಿರೋಧಿಸಿ ಮಾರ್ಚ್ 10ರಂದು ಇಡೀ ಭಾರತೀಯ ಚಿತ್ರೋದ್ಯಮ ಬಂದ್ ಆಚರಿಸಲು ನಿರ್ಧರಿಸಿದೆ.

ಹೀರೋ ಆದ ರೌಡಿ ಶೀಟರ್

ಕಳೆದ ವಾರ ಮೈಸೂರಿನಲ್ಲಿ ನಡೆದ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಚಾಲೆಂಜಿಂಗ್ ಸ್ಟಾರ್ ದರ್ಶನ್ ಖಳನಾಯಕ ನಟರಿಗೂ ಪ್ರಶಸ್ತಿ ನೀಡಿ ಗೌರವಿಸಬೇಕು ಅನ್ನೋ ಬೇಡಿಕೆಯನ್ನಿಟ್ಟರು. ಇದಕ್ಕೆ ಅದೇ ವೇದಿಕೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂದಿನ ವರ್ಷದಿಂದ ಖಳನಾಯಕ ಪಾತ್ರಧಾರಿಗಳಿಗೂ ಪ್ರಶಸ್ತಿ ನೀಡುತ್ತೇವೆ ಎಂದು ಘೋಷಿಸಿದರು.

ಇದಾಗಿದ್ದೇ ತಡ ಬೆಂಗಳೂರಿನಲ್ಲಿ 'ಸೈಲೆಂಟ್' ಆಗಿದ್ದ ನಿಜಜೀವನದ ರೌಡಿಗಳು, ಭೂಗತಲೋಕದ ಎಲಿಮೆಂಟುಗಳು, ಡಾನ್‌ಗಳು ನಾ ಮುಂದು ತಾ ಮುಂದು ಅಂತ ಚಿತ್ರಗಳಲ್ಲಿ ಅಭಿನಯಿಸಲು ನಿರ್ಧರಿಸಿದ್ದಾರಂತೆ. ಇನ್ನು ಈ ಚಲನಚಿತ್ರ 'ದುನಿಯಾ'ದಲ್ಲಿ ಪ್ರೇಕ್ಷಕ ಯಾವ ಯಾವ ನಿಜಜೀವನದ ಖಳನಾಯಕರನ್ನು ಚಿತ್ರಗಳಲ್ಲಿ ನೋಡಬೇಕೊ ಆ ದೇವರೇ ಬಲ್ಲ.

ಮುಂದಾಳತ್ವ ವಹಿಸಿದ ರವಿ ಮತ್ತು ಶಿವಣ್ಣ

ಚಲನಚಿತ್ರ ಒಕ್ಕೂಟ ಹಾಗು ನಿರ್ಮಾಪಕರ ನಡುವೆ ವೇತನ ಪರಿಷ್ಕರಣೆ ಕುರಿತಂತೆ ಕೆಲವು ದಿನಗಳಿಂದ ನಡೆಯುತ್ತಿದ್ದ ಹಗ್ಗಜಗ್ಗಾಟಕ್ಕೆ ಏಪ್ರಿಲ್ 17 ರವರೆಗೆ ಮುಕ್ತಿ ಸಿಕ್ಕಿದೆ. ಕ್ರೇಜಿ ಸ್ಟಾರ್ ರವಿಚಂದ್ರನ್ ಮತ್ತು ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಅಧ್ಯಕ್ಷತೆಯಲ್ಲಿ ಎಂಟು ಮಂದಿಯ ಸಮಿತಿಯೊಂದನ್ನು ಚಲನಚಿತ್ರ ವಾಣಿಜ್ಯ ಮಂಡಲಿಯಲ್ಲಿ ರಚಿಸಲಾಗಿದೆ. ಈ ಸಮಿತಿ ವರದಿಯೊಂದನ್ನು ತಯಾರಿಸಿ ಅದರ ಆಧಾರದ ಮೇಲೆ ಏಪ್ರಿಲ್ 17ರಂದು ನಡೆಯುವ ಸಭೆಯಲ್ಲಿ ಹೊಸ ವೇತನವನ್ನು ನಿಗದಿಪಡಿಸಲಾಗುತ್ತದೆಯಂತೆ.

ಅಂದು ಸಲ್ಲಿಸುವ ವೇತನ ಪರಿಷ್ಕರಣೆಯೇ ಅಂತಿಮವಾಗಲಿದ್ದು ಇದಕ್ಕೆ ಚಲನಚಿತ್ರ ಒಕ್ಕೂಟ ಹಾಗು ನಿರ್ಮಾಪಕರು ಒಪ್ಪಿಗೆ ಸೂಚಿಸಿದ್ದಾರೆ. ಪ್ರತಿ ಮೂರು ವರ್ಷಗಳಿಗೊಮ್ಮೆ ವೇತನ ಪರಿಷ್ಕರಣೆ ಆಗಬೇಕು, ಅದನ್ನು ಎಲ್ಲರೂ ಪಾಲಿಸಬೇಕು ಎಂದು ಸಭೆಯಲ್ಲಿ ತೀರ್ಮಾನಿಸಲಾಗಿದೆ.



ಈ ರೀತಿಯ ಗೊಂದಲ, ಸಮಸ್ಯೆಗಳು ಇನ್ನು ಮುಂದೆ ಉದ್ಭವಿಸುವುದಿಲ್ಲ ಎಂದು ಕ್ರೇಜಿ ಸ್ಟಾರ್ ರವಿಚಂದ್ರನ್ ಭರವಸೆ ನೀಡಿದ್ದಾರೆ.

ಗಲ್ಲಿ ಗಾಸಿಪ್

- ಇಡೀ ಸಿನಿಮಾ ಬಜೆಟ್ ಮೂರು ಕೋಟಿ ರೂಪಾಯಿ ಅಂದರೇನೇ ಚಿತ್ರ ನಿರ್ಮಿಸಲು ನಿರ್ಮಾಪಕರು ಹಿಂದೆ ಮುಂದೆ ನೋಡುತ್ತಾರೆ. ಇಂಥಾದ್ದರಲ್ಲಿ 'ಚಾರ್‌ಮಿನಾರ್' ಖ್ಯಾತಿಯ ಆರ್.ಚಂದ್ರು ಬರೀ ನಿರ್ದೇಶನಕ್ಕೇ ಮೂರು ಕೋಟಿ ರೂಪಾಯಿ ಸಂಭಾವನೆ ಕೇಳಿದ್ದಾರಂತಪ್ಪೋ!
- 'ನೀರ್ ದೋಸೆ' ಚಿತ್ರಕ್ಕೆ ಕೈಕೊಟ್ಟ ರಮ್ಯಾ ಮೇಡಂ ಅವರು ಈಗ ಲಂಡನ್‌ನಲ್ಲಿ ಟಿಪ್ಪು ಸುಲ್ತಾನ್‌ನ ಮರದ ಗೊಂಬೆ (ವುಡನ್ ಟೈಗರ್) ಬಗ್ಗೆ ಸ್ಟಡಿ ಮಾಡುತ್ತಿದ್ದಾರಂತೆ!
- ಒಂದು ಮಗುವಿನ ತಾಯಿಯಾಗಿದ್ದರೂ ಈಗಲೂ ಕಾಲೇಜ್ ಹುಡುಗಿಯ ಪಾತ್ರಕ್ಕೆ ರಾಧಿಕಾ ಕುಮಾರಸ್ವಾಮಿಯವರಿಗೆ ಬೇಡಿಕೆ ಇದೆಯಂತೆ.
- ಶೂಟಿಂಗ್ ಶುರುವಾಗುವ ಮುನ್ನವೇ 'ಸ್ವಚ್ಛ ಭಾರತ' ಚಿತ್ರದಿಂದ ನಾಯಕಿ ಶಿವಾನಿಯವರನ್ನು ಗುಡಿಸಿ ಹೊರಗೆ ಹಾಕಿದ್ದಾರಂತೆ ಆ ಚಿತ್ರದ ನಿರ್ದೇಶಕ ಸಾಹೇಬರು.



ಫ್ಲಾಪ್
ಸುಕೃತಾ ವಾಗ್ಲೆ

ಗಂಡುಬೀರಿ ಅಮೂಲ್ಯ

ತಮ್ಮ ಚೊಚ್ಚಲ ನಿರ್ದೇಶನದ ಚಿತ್ರಕ್ಕೆ ನಾಯಕಿ ಬೇಕು ಎಂದು ಜಾಹೀರಾತು ನೀಡಿದ್ದ ಸಾಹಿತಿ ಕವಿರಾಜ್‌ಗೆ ಕಡೆಗೂ ನಾಯಕಿ ದೊರಕಿದ್ದಾಳಂತೆ. ಅಮುಲ್ ಬೇಬಿ ಅಮೂಲ್ಯ ಅವರ ಚಿತ್ರದ ನಾಯಕಿಯಂತೆ.

ಚಿತ್ರದಲ್ಲಿ ನಾಯಕಿ ಗಂಡುಬೀರಿ ಮತ್ತು ಬಜಾರಿಯಾಗಿದ್ದು ಅಮೂಲ್ಯ ಆ ಪಾತ್ರಕ್ಕೆ ನ್ಯಾಯ ಸಲ್ಲಿಸುತ್ತಾರೆಂಬ ನಂಬಿಕೆಯಿಂದ ನಿರ್ದೇಶಕರು ಅಮೂಲ್ಯಳ ಆಯ್ಕೆ ಮಾಡಿದರಂತೆ. ತನ್ನ ಕೀರಲು ಧ್ವನಿಯ ಮೂಲಕ ಒಂದೇ ತರಹದ ಪಾತ್ರ ಮತ್ತು ನಟನೆಯನ್ನು ಮಾಡುತ್ತಿದ್ದ ನಟಿ ಅಮೂಲ್ಯ ಇದೀಗ ಏಕದಮ್ 'ಸಂಪತ್ತಿಗೆ ಸವಾಲ್' ಮಂಜುಳಾ ರೇಂಜಿನ ಪಾತ್ರವನ್ನು ನಿಭಾಯಿಸಲು ಸಕಲ ತಯಾರಿ ನಡೆಸುತ್ತಿದ್ದಾಳಂತೆ. ಒಟ್ಟಿನಲ್ಲಿ ಈ ನಟಿಯ ಒಂದೇ ತರದ ನಟನೆ ನೋಡಿ ಬೇಸತ್ತಿದ್ದ ಕನ್ನಡ ಪ್ರೇಕ್ಷಕ ಈಕೆಯ ಹೊಸ ಅವತಾರವನ್ನು ಸ್ವೀಕರಿಸುತ್ತಾರೊ ಇಲ್ಲವೋ ಕಾದು ನೋಡಬೇಕು.



ಮಾರುತಿ 800ನ ಒಡೆಯ ಶರಣ್

ಇದೇನಪ್ಪ ಚಿತ್ರರಂಗಕ್ಕೆ ಬಂದು ಸುಮಾರು ವರ್ಷಗಳೇ ಕಳೆದು ಹೋಗಿವೆ, ಜೊತೆಗೆ ಇತ್ತೀಚೆಗೆ ನಾಲ್ಕು ಸೂಪರ್ ಹಿಟ್ ಚಿತ್ರಗಳ ನಾಯಕನಾದ ಶರಣ್ ಈಗ ಮಾರುತಿ 800 ಕಾರಿನ ಒಡೆಯನೆ ಅಂತಂದುಕೊಳ್ಳಬೇಡಿ. ವಿಷಯ ಏನಪ್ಪ ಅಂದರೆ ಶರಣ್ ನಾಯಕರಾಗಿ ನಟಿಸಲಿರುವ ಹೊಸ ಚಿತ್ರದ ಹೆಸರು 'ಮಾರುತಿ 800'. ಟೈಟಲ್ ಕೇಳಿದ ತಕ್ಷಣ ಇದು ಕಾರಿನ ಕಥೆ ಅಂತಲೂ ಅಂದುಕೊಳ್ಳಬೇಡಿ ಪ್ಲೀಸ್.

ಇದು ಪಕ್ಕಾ ಹಾಸ್ಯ ಚಿತ್ರವಂತೆ. ಇದರಲ್ಲಿ ಶರಣ್ ಮಾರುತಿ ಎಂಬ ಹೆಸರಿನ ರಿಯಲ್‌ಎಸ್ಟೇಟ್ ಏಜೆಂಟ್‌ನ ಪಾತ್ರ ಮಾಡುತ್ತಿದ್ದಾರಂತೆ. ಇನ್ನು 800 ಬಗ್ಗೆ ಹೇಳಬೇಕಂದ್ರೆ 800 ಎಕರೆ ಜಮೀನನ್ನು ಮಾರಿಸುವ ಡೀಲ್ ಶರಣ್ ಪಾತ್ರದ್ದಂತೆ. ಕಿರಿಕ್ಕು ಮತ್ತು ಕಾಮಿಡಿ ಟ್ರಾಕ್‌ನಲ್ಲಿ ಚಿತ್ರ ಸಾಗುತ್ತದಂತೆ.

ಅನುಶ್ರೀಯ ಅಬ್ಬರ

ಕನ್ನಡದ ಒನ್ ಅಂಡ್ ಓನ್ಲಿ ಮೆಗಾಸ್ಟಾರ್ ಆಂಕರ್ ಅನುಶ್ರೀಯ ಅಬ್ಬರದ ಬಗ್ಗೆ ಒಂದಿಷ್ಟು ಕೇಳಿರಪ್ಪ, ಈಕೆ ಹೀರೋಯಿನ್ ಪಟ್ಟಕ್ಕೆ ಬಡ್ತಿ ಪಡೆದ ಮೇಲಂತೂ ಆಡ್ತಿರೋ ಆಟ ಒಂದೆರಡಲ್ಲವಂತೆ.

ಸುವರ್ಣ ಟಿವಿ, ಕಸ್ತೂರಿ ಟಿವಿ ಸೇರಿದಂತೆ ಹಲವು ವಾಹಿನಿಗಳಲ್ಲಿ ಕಾರ್ಯಕ್ರಮಗಳನ್ನು ನಡೆಸಿಕೊಡ್ತಿದ್ದ ಅನುಶ್ರೀ ತಗೊಳ್ಳೋ ಪೇಮೆಂಟು ಜಾಸ್ತಿನೇ. ಹೋಗಲಿ, ಪೇಮೆಂಟು ಜಾಸ್ತೀ ಕೊಟ್ರೂ ಕಾರ್ಯಕ್ರಮದಲ್ಲಿ ಚಾನೆಲ್‌ನವರು ಅನುಶ್ರೀ ಹೇಳಿದ ಹಾಗೆ ಕೇಳಬೇಕಂತೆ. ಅನುಶ್ರೀ ಒಳ್ಳೆಯ ಮಾತುಗಾತಿ ಅನ್ನೋದ್ರಲ್ಲಿ ಅನುಮಾನವೇ ಇಲ್ಲ, ಇನ್ನು ಸ್ಟೇಜ್ ಮೇಲೇರಿ ಮಾತನಾಡೋಕೆ ಶುರುಮಾಡಿದ್ರಂತೂ ಅವರು ಮಾತನಾಡಿದ್ದನ್ನೆಲ್ಲ ಎಲ್ಲರೂ ಸಹಿಸಿಕೊಳ್ಳಬೇಕಂತೆ.

ಇನ್ನು ಅನುಶ್ರೀ ಮೇಕಪ್‌ಗೆ ಕುಳಿತ್ರೆ ಹೆಚ್ಚೂಕಡಿಮೆ ಎರಡು ಗಂಟೆ ಬೇಕಂತೆ. ಹೀರೋಯಿನ್ ಆದನಂತರ ಅನುಶ್ರೀ ಕಂಪ್ಲೀಟಾಗಿ ಬದಲಾಗಿದ್ದಾರೆ ಅಂತಾರೆ ಅಕ್ಕಪಕ್ಕದವರು.

ಈ ತರಹದ ಅಂತೆಕಂತೆ ಕಥೆಗಳು ಮನರಂಜನಾ ವಾಹಿನಿಗಳ ಕಡೆಯಿಂದ ಬರ್ತಿವೆ. ಬೆಂಕಿ ಇಲ್ಲದೇ ಹೊಗೆ ಆಡುತ್ತಾ? ಮೊದ್ಲೆ 'ಬೆಂಕಿಪಟ್ಣ' ಕಡ್ಡಿ ಇಲ್ಲದೆ ಖಾಲಿ ಹೊಡೀತಿದೆ. ಹಿಂಗೆ ಮಾಡ್ತಿದ್ರೆ ಅನುಶ್ರೀ ಕಥೆ ಅಷ್ಟೇ ಎನ್ನುತ್ತಿದೆ ಗಾಂಧಿನಗರ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com